


ಇಂದಿಗೆ ಬೇಕಾದ ಗಾಂಧಿ

ಡಿ.ಎಸ್. ನಾಗಭೂಷಣ

ಇಂದಿಗೆ ಬೇಕಾದ ಗಾಂಧಿ

ಡಿ.ಎಸ್. ನಾಗಭೂಷಣ

ಮೆ॥ ಎಂ. ಮೂನಿಸ್ವಾಮಿ ಅಂಡ್ ಸನ್ಸ್
ಪ್ರಕಾಶಕರು ಮತ್ತು ವಿತರಕರು
'ಸರ್ವೋದಯ', ನಂ. ೭೨, ಪ್ರೊ॥ ಎ.ಆರ್. ಕೃಷ್ಣಶಾಸ್ತ್ರಿ ರಸ್ತೆ,
ಬಸವನಗುಡಿ, ಬೆಂಗಳೂರು – ೫೬೦ ೦೦೪
www.hulkul.org.in

Indige bekada Gandhi (Gandhi for today), a sho
collection of articles on Mahatma Gandhi by D.S
Nagabhushana, HIG-5, 'Nudi', Kallahalli Extension
Vinoba Nagara, Shivamogga-577204, published by M/
Mooniswamt and sons, at 'Sarvodaya', No.72, Prof. A.R
Krishnashastry Road, Basavanagudi, Bengaluru-560 004
Ph.: 080-26576222 www.hulkul.org.in

First impression: Oct. 2017
Pages: viii + 96
Paper used: 70 Gsm Maplitho Paper
Price: 50/-

ಇಂದಿಗೆ ಬೇಕಾದ ಗಾಂಧಿ
(ಮಹಾತ್ಮ ಗಾಂಧಿ ಕುರಿತ ಬರಹಗಳು)

ಮೊದಲ ಮುದ್ರಣ: ಅಕ್ಟೋಬರ್ ೨೦೧೭
ಪುಟಗಳು: viii + ೯೬
ಬಳಸಿರುವ ಕಾಗದ: ೭೦ ಜಿ.ಎಸ್.ಎಂ. Maplitho Paper
ಬೆಲೆ: ೫೦/-

ಮುದ್ರಣ:
ರಿಪ್ಲಿಕ ಆಫ್‌ಸೆಟ್ ಪ್ರಿಂಟರ್ಸ್
ನಂ.೧೪, ೧ನೇ ಮುಖ್ಯರಸ್ತೆ, ಕೈಗಾರಿಕನಗರ,
ರಾಜಾಜಿನಗರ, ಬೆಂಗಳೂರು-೫೬೦ ೦೪೪
ದೂ: ೦೮೦-೨೩೩೫೭೯೬೩

ಲೇಖಕರ ಮಾತು

ಇದು ಗಾಂಧಿ ಕುರಿತ ಇತ್ತೀಚಿನ ನನ್ನ ಐದು ಲೇಖನಗಳ ಸಂಗ್ರಹ. ಈ ಐದರ ಜೊತೆಗೇ ಪುಸ್ತಕದ ಸಮಗ್ರತೆಗಾಗಿ ನನ್ನ ಹಳೆಯ ಎರಡು ಲೇಖನಗಳನ್ನೂ ಸೇರಿಸಿರುವೆ. ಈ ಎರಡೂ ನನ್ನ ಮೂಲ ಲೇಖನಗಳಲ್ಲವೆಂಬುದು ಬೇರೆ ಮಾತು. ಒಟ್ಟಾರೆಯಾಗಿ ಈ ಪುಟ್ಟ ಪುಸ್ತಕ ಗಾಂಧಿಯನ್ನು ಬಹು ಸ್ಥೂಲವಾಗಿ ಪರಿಚಯಿಸುವ ಸತ್ಯ, ಅಹಿಂಸೆ ಎಂಬಿತ್ಯಾದಿ ಅವರ ಸಾರ್ವತ್ರಿಕ ತತ್ವಗಳ ಮೂಲಕ ಪರಿಚಯಿಸುವ ಸಾಂಪ್ರದಾಯಿಕ ಹಾದಿಯನ್ನು ಬಿಟ್ಟು ಅವರ ಬೀಜ ಕೃತಿ ಎನಿಸಿದ 'ಹಿಂದ್ ಸ್ವರಾಜ್'ನ ಸಂಕೀರ್ಣ ತಾತ್ವಿಕತೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ಪರಿಚಯಿಸುವ ಪ್ರಯತ್ನ ಮಾಡಿದೆ. ಇದರ ಭಾಗವಾಗಿಯೇ, ಇತ್ತೀಚೆಗೆ ಗಾಂಧಿಯ ಸುತ್ತ ವ್ಯವಸ್ಥಿತವಾಗಿ ಹೆಣೆಯಲಾಗುತ್ತಿರುವ ಆರೋಪ, ಅಪ್ರಚಾರ ಮತ್ತು ಅವಹೇಳನಗಳ ಬಲೆಯ ಹಿಂದಿನ ತಪ್ಪು ಕಲ್ಪನೆಗಳನ್ನು ನಿವಾರಿಸುವ ಒಂದು ಪ್ರಯತ್ನವನ್ನೂ ಮಾಡಲಾಗಿದೆ. ಇದು ಈ ಪುಸ್ತಕದ ಶೀರ್ಷಿಕೆಯ ಅರ್ಥವನ್ನೂ ಸ್ಫುಟಗೊಳಿಸುತ್ತದೆ ಎಂದು ನಾನು ಭಾವಿಸಿದ್ದೇನೆ

ಇನ್ನು ಇದೆಲ್ಲದಕ್ಕೂ ಒಂದು ಸೂಕ್ತ ಹಿನ್ನೆಲೆಯನ್ನು ಒದಗಿಸುವ ಗಾಂಧಿ ಬದುಕಿನ ಮುಖ್ಯ ಘಟ್ಟಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಇದರಲ್ಲಿ ಗಾಂಧಿ ಓರ್ವ ಸತ್ಯಾಗ್ರಹಿಯಾಗಿ ತಮ್ಮ ವ್ಯಕ್ತಿತ್ವವನ್ನು ಕಟ್ಟಿಕೊಂಡ ಘಟ್ಟದವರೆಗಿನ– ಅವರು ದ.ಆಫ್ರಿಕಾವನ್ನು ಬಿಡುವವರೆಗಿನ–ಘಟನೆಗಳ ಜೊತೆ ಕೆಲವು ಅಗತ್ಯ ವಿವರಣೆಗಳನ್ನು ನೀಡಲಾಗಿದ್ದು, ನಂತರದಲ್ಲಿ ಈ ಪುಸ್ತಕದ ಉದ್ದೇಶಕ್ಕೆ ಅನುಗುಣವಾಗಿಯೇ ಬರೀ ಘಟನೆಗಳ ವಿವರಗಳನ್ನಷ್ಟೇ ನೀಡಲಾಗಿದೆ.

ನಮ್ಮ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ ಪ್ರತಿ ವರ್ಷದಂತೆ ಈ ವರ್ಷವೂ(೨೦೧೭) ಕುಪ್ಪಳ್ಳಿಯಲ್ಲಿ ಅಲ್ಲಿನ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಹಯೋಗದಲ್ಲಿ ನಡೆಸುತ್ತಿರುವ ವಾರ್ಷಿಕ ಅಧ್ಯಯನ ಶಿಬಿರದ ಹೊತ್ತಿಗೆ ಈ ಪುಸ್ತಕವನ್ನು ಸಿದ್ಧಪಡಿಸಲು ನನಗಿಂತ ಹೆಚ್ಚು ಮುಂದಾದವರು ಗೆಳೆಯರಾದ ಸಾಮಾಜಿಕ ಕಾರ್ಯಕರ್ತ ಎಂ.ಸಿ. ನರೇಂದ್ರ, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಜಿ.ಬಿ.ಶಿವರಾಜು ಮತ್ತು ಮುದ್ರಕರಾದ ರಿಪ್ಲಿಕ ಆಫ್‌ಸೆಟ್ ಪ್ರಿಂಟರ್ಸ್‌ನ ಮಾಲಿಕರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ನನ್ನ ಮಿಕ್ಕೆಲ್ಲ ಪುಸ್ತಕಗಳಂತೆ ಈ ಪುಟ್ಟ ಪುಸ್ತಕವನ್ನೂ ಓದುಗರು ಆಸಕ್ತಿಯಿಂದ ಗಮನಿಸುವರು ಎಂದು ಭಾವಿಸುತ್ತೇನೆ.

೨, ಅಕ್ಟೋಬರ್, ೨೦೧೭ — ಡಿ.ಎಸ್. ನಾಗಭೂಷಣ

ಶಿವಮೊಗ್ಗ 2017

ಪ್ರಕಾಶಕರ ಮಾತು

ಗಾಂಧಿ ವಿಚಾರಗಳನ್ನು ಪ್ರಚುರಪಡಿಸುವ ಪುಸ್ತಕವನ್ನು ಪ್ರಕಟಿಸುವುದು ನಮಗೆ ಯಾವಾಗಲೂ ಸಂತೋಷದ ಸಂಗತಿಯೆ. ಮಿತ್ರರಾದ ಡಿ.ಎಸ್. ನಾಗಭೂಷಣ ಅವರ ಈ ಲೇಖನಗಳ ಪುಟ್ಟ ಸಂಗ್ರಹ ಇಂದಿನ ಸಂದರ್ಭಕ್ಕೆ ಯುವಜನರಿಗೆ ಅಗತ್ಯವಾದ ಗಾಂಧಿ ಕುರಿತ ಹೊಸ ಒಳನೋಟಗಳನ್ನು ನೀಡುತ್ತದೆ ಎಂಬ ವಿಶ್ವಾಸ ನಮ್ಮದು. ಹಾಗಾಗಿ ಕನ್ನಡ ಓದುಗ ಸಮೂಹ ಈ ಪುಸ್ತಕವನ್ನು ಉತ್ಸಾಹ ಮತ್ತು ಆಸಕ್ತಿಗಳಿಂದ ಸ್ವಾಗತಿಸುತ್ತದೆ ಎಂದು ನಾವು ನಂಬಿದ್ದೇವೆ.

ಈ ಪುಸ್ತಕ ಅಚ್ಚುಕಟ್ಟಾಗಿ ಹೊರಬರಲು ನಮಗೆ ನೆರವಾದವರು ಗಾಂಧಿ ವಿಚಾರಗಳ ಬಗ್ಗೆ ನಮ್ಮಷ್ಟೇ ಆಸಕ್ತಿ ಹೊಂದಿರುವ ಮಿತ್ರರಾದ ಜಿ.ಬಿ.ಶಿವರಾಜು ಮತ್ತು ರಿಪ್ಲಿಕ ಆಫ್‌ಸೆಟ್ ಪ್ರಿಂಟರ್ಸ್‌ನ ಮಾಲಿಕರಿಗೂ ಮತ್ತು ಅವರ ಮುದ್ರಣಾಲಯದ ಬಳಗ. ಇವರಿಗೆಲ್ಲ ನಮ್ಮ ಪ್ರಕಾಶನದ ಧನ್ಯವಾದಗಳು

೨, ಅಕ್ಟೋಬರ್, ೨೦೧೭ ಎಂ.ಸಿ. ನರೇಂದ್ರ

ಬೆಂಗಳೂರು

ಹೆಣ್ಣು ಮತ್ತು ದೇವರು ನನ್ನ ಬದುಕಿನ ಎರಡು ಮುಖ್ಯ ಕಾಳಜಿಗಳಾಗಿದ್ದವು.
ನನಗೆ ಹೆಣ್ಣು ಸಿಗಲಿಲ್ಲ, ದೇವರು ಕಾಣಲಿಲ್ಲ.
ಆದರೆ ಹೆಣ್ಣು ಮತ್ತು ದೇವರು ಈ ಇಬ್ಬರ ಸೆಳಕುಗಳ ಸಂಗಮವನ್ನು
ನಾನು ಮಹಾತ್ಮ ಗಾಂಧಿಯವರಲ್ಲಿ ಕಂಡೆ.

– ರಾಮಮನೋಹರ ಲೋಹಿಯಾ

ಪರಿವಿಡಿ:

...ಂದಿಗೆ ಬೇಕಾದ ಗಾಂಧಿ

'ಸಣ್ಣದು ಸುಂದರ' (Small is beautiful) ಖ್ಯಾತಿಯ
...ರ್ಮನ್ ಅರ್ಥಶಾಸ್ತ್ರಜ್ಞ ಶೂಮಾಕರ್ ಕೆಲವು ವರ್ಷಗಳ ಹಿಂದೆ
...ರಾಣಸಿಯಲ್ಲಿನ ಗಾಂಧಿ ಅಧ್ಯಯನ ಕೇಂದ್ರದಲ್ಲಿ ನೀಡಿದ ಗಾಂಧಿ ಸ್ಮಾರಕ
...ಪನ್ಯಾಸವನ್ನು ಆರಂಭಿಸಿದ್ದು ಈ ಕೆಲವು ಪ್ರಶ್ನೆಗಳೊಂದಿಗೆ:

ನಮ್ಮ ಪುರಾತನರು ತಮ್ಮ ಮುಂದಿನ ಪೀಳಿಗೆಯ ಪ್ರಗತಿಯ ಬಗ್ಗೆ
...ತೂಹಲ ತಾಳಿ ಈಗ ಈ ಜಗತ್ತಿಗೆ ಮರಳಿ ಬಂದಲ್ಲಿ, ಅವರು ಆಶ್ಚರ್ಯ
...ಡುವುದು ಇವುಗಳಲ್ಲಿ ಯಾವುದನ್ನು ಕಂಡು? : ಅವರು ನಮ್ಮ ಆಸ್ಪತ್ರೆಗಳಿಗೆ
...ಂದರೆ, ಅಲ್ಲಿನ ವೈವಿಧ್ಯಮಯ ಅತ್ಯಾಧುನಿಕ ಉಪಕರಣಗಳು ಮತ್ತು
...ಷಧಿಗಳನ್ನು ಕಂಡೋ ಅಥವಾ ವೈವಿಧ್ಯಮಯ ಮತ್ತು ಭಯಾನಕ ಹೊಸ
...ೋಗಗಳಿಂದ ಬಾಧಿತವಾಗಿರುವ ಅಲ್ಲಿನ ಜನಜಂಗುಳಿಯನ್ನು ಕಂಡೋ?
...ನ್ನು ನಮ್ಮ ದಂತ ಚಿಕಿತ್ಸಾಲಯಕ್ಕೆ ಬಂದರೆ, ನಮ್ಮ ದಂತವೈದ್ಯರ ಕೌಶಲ್ಯ
...ಾಗೂ ಅವರ ಸೂಕ್ಷ್ಮ ಉಪಕರಣಗಳನ್ನು ಕಂಡೋ ಅಥವಾ ನಮ್ಮ ಜನರ
...ಲ್ಲುಗಳ ಇಷ್ಟು ಮತ್ತು ಹೀಗೇಕೆ ಹುಳುಕಾಗಿವೆ ಎಂದೋ? ಚಂದ್ರನ ಮೇಲೆ
...ಲಿಟ್ಟಿರುವ ನಮ್ಮ ವೈಜ್ಞಾನಿಕ–ತಾಂತ್ರಿಕ ಮುನ್ನಡೆಯನ್ನು ಕಂಡೋ
...ಥವಾ ದುಡಿಮೆಯ ಸ್ಥಳಗಳಿಗಾಗಿ ಸಿಕ್ಕ ಸಿಕ್ಕ ವಾಹನಗಳಲ್ಲಿ ತೂರಾಡುವ
...ಮ್ಮ ಅವಸರ–ಉದ್ವೇಗಗಳನ್ನು ಕಂಡೋ? ನಮ್ಮ ಯಂತ್ರ ವ್ಯವಸ್ಥೆಗಳ
...ಾಮರ್ಥ್ಯ–ದಕ್ಷತೆಯನ್ನು ಕಂಡೋ ಅಥವಾ ಅವುಗಳನ್ನು ನಿರ್ವಹಿಸುವ
...ಮ್ಮ ವ್ಯವಸ್ಥೆಯ ಅರಾಜಕತೆ–ಅಸಾಮರ್ಥ್ಯಗಳನ್ನು ಕಂಡೋ?

ಗಾಂಧೀಜಿಯನ್ನು ರಾಷ್ಟ್ರಪಿತ ಅಂದರೆ ನಾವೀಗ ಭಾರತವೆಂದು
...ರೆಯುವ ರಾಷ್ಟ್ರಕ್ಕೆ ಜನ್ಮ ನೀಡಿದ ನಾಯಕ ಎಂದಷ್ಟೇ ಗುರುತಿಸುವವರಿಗೆ
... ಪ್ರಶ್ನೆಗಳಿಗೂ ಗಾಂಧಿಗೂ ಏನು ಸಂಬಂಧ ಎಂದು ಆಶ್ಚರ್ಯವಾಗ
...ಹುದು. ಆದರೆ ಗಾಂಧಿ ಎಂದರೆ ಬ್ರಿಟಿಷ್ ಆಳ್ವಿಕೆಯಿಂದ ನಮ್ಮನ್ನು
...ಮೋಚನೆಗೊಳಿಸಿ ಭಾರತವೆಂಬ ಸ್ವತಂತ್ರ ರಾಷ್ಟ್ರ ರೂಪುಗೊಳ್ಳುವುದಕ್ಕೆ

ಕಾರಣವಾದ ಸ್ವಾತಂತ್ರ್ಯ ಹೋರಾಟದ ನೇತೃತ್ವವಹಿಸಿದ್ದವರು ಮಾತ್ರವಲ್ಲ;
ರಾಷ್ಟ್ರ ವಿಮೋಚನೆ ಎಂಬುದು ಅವರು ರೂಪಿಸಿದ ಈ ಹೋರಾಟದ
ಒಂದು ಪರಿಣಾಮವೇ ಹೊರತು ಅದಷ್ಟನ್ನೇ ಅವರು ತಮ್ಮ ಹೋರಾಟದ
ಗುರಿಯಾಗಿರಿಸಿಕೊಂಡಿರಲಿಲ್ಲ ಎಂಬುದನ್ನು ನಾವು ಅರಿಯಬೇಕು.
ಅವರು ಈ ಹೋರಾಟದ ಭಾಗವಾಗಿ ರೂಪಿಸಿ ಪ್ರಚುರಪಡಿಸಿದ
ಕಾರ್ಯಕ್ರಮಗಳು–ಅಸ್ಪೃಶ್ಯತಾ ನಿವಾರಣೆ, ಖಾದಿ ಮತ್ತು ಗ್ರಾಮೋದ್ಯೋಗ,
ಹಿಂದೂ ಮುಸ್ಲಿಂ ಏಕತೆ ಇತ್ಯಾದಿ–ಇದಕ್ಕೆ ಸಾಕ್ಷಿಯಾಗಿವೆ. ಇದನ್ನು ಅರಿತಾಗ
ನಮ್ಮ ಮನಸ್ಸಿನೊಳಗಿನ ಗಾಂಧಿ ಚಿತ್ರ ವಿಶಾಲವಾಗುವುದು ಮತ್ತು
ಶೂಮೇಕರ್ ಅವರ ಮೇಲಿನ ಪ್ರಶ್ನೆಗಳಿಗೂ ಗಾಂಧೀಜಿಗೂ ಇರುವ
ಸಂಬಂಧ ಅರ್ಥವಾಗುತ್ತದೆ. ಅಷ್ಟೇ ಮುಖ್ಯವಾಗಿ ಪ್ರತಿ ಸ್ವಾತಂತ್ರ್ಯ
ದಿನದಂದು ಅಥವಾ ಅವರ ಜನ್ಮ ದಿನದಂದು ಮಾಡಿಕೊಳ್ಳಲಾಗುವ
ಅವರ ನೆನಪನ್ನು ಅದರ ಔಪಚಾರಿಕತೆಯನ್ನು ಮೀರಿ ಹೇಗೆ ಹೆಚ್ಚು
ಅರ್ಥಪೂಣವಾಗಿಸಬಹುದು ಎಂಬುದರ ಹೊಳಹನ್ನೂ ನೀಡುತ್ತದೆ.
ಹಾಗೇ ಇಂದು ಭಾರತವಾಸಿಗಳು ಮಾತ್ರವಲ್ಲ, ಜಗತ್ತಿನಾದ್ಯಂತ ಜಗತ್ತಿನ
ಹಿತಚಿಂತಕರು ಅವರನ್ನು ಏಕೆ ನೆನಪಿಸಿಕೊಳ್ಳುತ್ತಿದ್ದಾರೆ, ಅಧ್ಯಯನ
ಮಾಡುತ್ತಿದ್ದಾರೆ ಎಂಬುದೂ ಗೊತ್ತಾಗುತ್ತದೆ.

ಗಾಂಧೀಜಿ ದೇಶದ ಸ್ವಾತಂತ್ರ್ಯ ಹೋರಾಟದ ನಾಯಕರಾಗಿ
ಮೂಡಿದ್ದು ಇಂದಿನ ಸಾಂಪ್ರದಾಯಿಕ ಅರ್ಥದ ದೇಶಭಕ್ತಿಯಿಂದಾಗಿ
ಅಲ್ಲ. ಬದಲಿಗೆ ಅವರು ಪ್ರೇರೇಪಿಸಿದ ಪ್ರತಿ ಮನುಷ್ಯನನ್ನೂ ಮನುಷ್ಯನನ್ನಾಗಿ
ಮಾಡುವ ಅವನ ಆತ್ಮ ಗೌರವದ ಅರಿವನ್ನು ಅವನಲ್ಲಿ
ಪ್ರೇರೇಪಿಸಿದ್ದರಿಂದಾಗಿ. ಅಥವಾ 'ಸ್ವ'ದ ಆಳದ ಅರಿವನ್ನು ಮನದಟ್ಟು
ಮಾಡಿದ್ದರಿಂದಾಗಿ. ಅವರಿಗೆ ನಿರ್ಣಾಯಕ ರೂಪದಲ್ಲಿ ಸತ್ಯದ ಸಾಕ್ಷಾತ್ಕಾರ
ವಾದದ್ದು, ಅವರನ್ನು ದಕ್ಷಿಣ ಆಫ್ರಿಕಾದಲ್ಲಿ ವರ್ಣೀಯನೆಂದು ಪ್ರಥಮ
ದರ್ಜೆ ರೈಲು ಡಬ್ಬಿಯಿಂದ ಹೊರಕ್ಕೆ ಎಸೆದ ಕ್ಷಣದಲ್ಲಿ. ಹಾಗಾಗಿಯೇ ಅವರ
ಬದುಕಿನ ಗುರಿಯನ್ನು ನಾವು ಬಹು ಸ್ಥೂಲವಾಗಿ ಬಳಸುವ ರಾಷ್ಟ್ರೀಯ
ಸ್ವಾತಂತ್ರ್ಯ ಎಂಬ ಶಬ್ದದಲ್ಲಿ ಕಾಣಲಾಗುವುದಿಲ್ಲ. ಈ ಶಬ್ದಕ್ಕೆ ಪ್ರತಿಯಾಗಿ
ಅವರು ತಮ್ಮ ಹೋರಾಟದ ಬದುಕಿನ ಗುರಿಯಾಗಿ ಬಳಸಿದ ಶಬ್ದ ಮತ್ತು
ಕಟ್ಟಿಕೊಟ್ಟ ಪರಿಕಲ್ಪನೆ ಎಂದರೆ 'ಸ್ವ'–ರಾಜ್ಯ. ಅದು ತನ್ನನ್ನು ತಾನು ಅರಿತು
ಆ ಅರಿವಿನ ಮೂಲಕ ತನ್ನನ್ನು ತಾನೇ ಆಳಿಕೊಳ್ಳಲು ಸಾಧ್ಯವಿರುವ ರಾಜ್ಯ

ಅದು ಪ್ರತಿ ಮನುಷ್ಯನೂ ತನ್ನೊಳಗೆ ಮತ್ತು ಹೊರಗೆ ಅನುಭವಿಸಲು ಸಾಧ್ಯವಿರುವ ಒಂದು ಗರಿಷ್ಠ (ಒಳ ಮತ್ತು ಹೊರಗಳ ನಡುವೆ ಸಮತುಲಿತವಾದ) ಸ್ವಾತಂತ್ರ್ಯದ ಚೌಕಟ್ಟು. ಇದು ಹೆಚ್ಚು ಸ್ಪಷ್ಟವಾಗಿ ಅರ್ಥವಾಗಲು, ಅವರು ಭಾರತದಲ್ಲಿ ಸ್ವಾತಂತ್ರ್ಯ ಹೋರಾಟವೆಂಬ ಜಗತ್ತಿನ ಇತಿಹಾಸದಲ್ಲೇ ಹೊಸ ನೆಲೆಯ, ಹೊಸ ಸ್ವರೂಪದ ಹೋರಾಟವನ್ನು ರೂಪಿಸಿದ್ದರ ಹಿನ್ನೆಲೆಯನ್ನು ಗಮನಿಸಬೇಕು. ಈ ಹೋರಾಟ ದಕ್ಷಿಣ ಆಫ್ರಿಕಾದಲ್ಲಿ ಅವರು ವಕೀಲರಾಗಿ ಎರಡು ದಶಕಗಳ ಕಾಲ ನಡೆಸಿದ ಬದುಕಿನಲ್ಲಿ ಪಡೆದ ಅನುಭವ ಮತ್ತು ಅದನ್ನಾಧರಿಸಿ ನಡೆಸಿದ ಚಿಂತನೆ ಹಾಗೂ ಪ್ರಯೋಗಗಳ ಮುಂದುವರಿಕೆಯಾಗಿತ್ತು ಎಂಬುದನ್ನು ನಾವು ಗಮನಿಸಿಸಬೇಕು.

ಅಲ್ಲಿ ಗಾಂಧಿ ಒಂದು ದೇಶವನ್ನು(ಸಂಸ್ಕೃತಿಯನ್ನು) ಇನ್ನೊಂದು ದೇಶ(ಸಂಸ್ಕೃತಿ) ಆಕ್ರಮಿಸಿಕೊಂಡು, ಆ ದೇಶದ ಮೂಲನಿವಾಸಿಗಳನ್ನು ಎರಡನೇ, ಮೂರನೇ ದರ್ಜೆಯ ಪ್ರಜೆಗಳನ್ನಾಗಿ ಮಾಡಿ ಅವರ ಸಂಪತ್ತನ್ನು ದೋಚುವ ಕೆಲಸ(ವಸಾಹತುಶಾಹಿ) ಯಾವುದೇ ಎಗ್ಗಿಲ್ಲದೆ ಏಕೆ ಮತ್ತು ಹೇಗೆ ಮಾಡಲು ಸಾಧ್ಯ ಎಂಬುದರ ಬಗ್ಗೆ ಆಳವಾಗಿ ಯೋಚಿಸಿದರು. ದಕ್ಷಿಣ ಆಫ್ರಿಕಾದಲ್ಲಿನ ಭಾರತೀಯ ಮೂಲ ವಂಶಸ್ಥರ ಘನತೆ-ಗೌರವಗಳ ಸಂರಕ್ಷಣೆಯ ಕೆಲಸವನ್ನು, ಅದು ತಮ್ಮದೇ ವೈಯಕ್ತಿಕ ಘನತೆ-ಗೌರವಗಳ ಸಂರಕ್ಷಣೆಯ ಹೋರಾಟವೆಂಬ ತೀವ್ರತೆಯಲ್ಲಿ ರೂಪಿಸಿ ನಡೆಸಿದರು. ಅದರಲ್ಲಿ ಅವರು ಸಾಕಷ್ಟು ಯಶಸ್ವಿಯೂ ಆದರು. ಆ ಯಶಸ್ಸಿಗೆ ಅರ್ಧ ಕಾರಣ ತಮ್ಮ ಹೋರಾಟದಷ್ಟೇ, ಅಲ್ಲಿನ ದಮನಕಾರಿ ಸರ್ಕಾರದ 'ಸಹಕಾರ'ವೂ ಕಾರಣ ಎಂದು ಅವರು ಕಂಡುಕೊಂಡರು. ಅಂದರೆ ವೈಯುಕ್ತಿಕ ನೆಲೆಯ ಅಧ್ಯಾತ್ಮಿಕ (ಅಂದರೆ, ಅಹಂಕಾರ ವರ್ಜನೆಯ) ತೀವ್ರತೆಯಿಂದ ಹದಗೊಂಡ ಹೋರಾಟದ ಮೂಲಕ ತಮ್ಮ ಎದುರಾಳಿಗೆ ಆತ ಎಸಗುತ್ತಿರುವ ಅನ್ಯಾಯಗಳನ್ನು ಮನದಟ್ಟು ಮಾಡಲು, ಅದರ ಬಗ್ಗೆ ನಾಚಿಕೆಪಟ್ಟುಕೊಂಡು ತಾನೂ ಸ್ವಲ್ಪ ಮಟ್ಟಿನ ಅಹಂಕಾರ ವರ್ಜಿಸುವಂತೆ ಮಾಡಲು ಸಾಧ್ಯ ಎಂದು ಅವರು ಕಂಡುಕೊಂಡರು. ಹೀಗೆ ಅವರ ಹೋರಾಟ ವೈಯುಕ್ತಿಕ ನೆಲೆಯ-ತನ್ನನ್ನು ತಾನು ಕಂಡುಕೊಳ್ಳುವ-ಹೋರಾಟವೂ ಹೌದು; ಮತ್ತು ಅದರಿಂದ ಶಕ್ತಿ ಪಡೆದ ಸಾಮೂಹಿಕ ನೆಲೆಯ-ಸಂಘಜೀವಿತ್ವದಲ್ಲಿ ತನ್ನನ್ನು ತಾನು ಗುರುತಿಸಿಕೊಳ್ಳುವ-ಹೋರಾಟವೂ ಹೌದು.

ಇದರ ಹಿಂದಿನ ಮೂಲ ಚಿಂತನೆ ಎಂದರೆ, ನಾವು ನಮ
ಬೇರುಗಳಿರುವ ಸಾಮೂಹಿಕ ಬದುಕಿನ ಮಾದರಿಯ ಗಡಿಗಳಾಚೆ ನಮ
ಬದುಕಿನ ದಾಹಗಳನ್ನು ಸೃಷ್ಟಿಸಿಕೊಳ್ಳುತ್ತಾ ಹೋದರೆ ಅಸ್ತಿತ್ವದ ಬೇರುಗಳ
ಸಡಿಲಗೊಂಡು ನಾವು ನಮಗೇ ಪರಕೀಯರಾಗಿ ಕಷ್ಟಗಳಿಗೆ ಈಡಾಗುವೆವು
ನಾವು ಪಾಶ್ಚಾತ್ಯರಾಗುವ ಆಸೆಗೆ ಸಿಲುಕಿ ನಾವು ನಮ್ಮ ಸ್ವಾತಂತ್ರ್ಯವನ್ನು
ಕಳೆದುಕೊಂಡೆವು. ಹಾಗಾಗಿ ನಾವು ನಿಜವಾಗಿ ಸ್ವತಂತ್ರರಾಗುವುದೆಂದರೆ
ನಾವು ವೈಯುಕ್ತಿಕ ನೆಲೆಯಿಂದ ಆರಂಭವಾದಂತೆ ಪಾಶ್ಚಾತ್ಯತೆಯ
ಮರುಳಿನಿಂದ ಮುಕ್ತರಾಗಿ ನಾವು ನಾವಾಗುವುದರ ಮೂಲಕ ಮಾತ್ರ
ನಮ್ಮತನವನ್ನು ಪುನರನ್ವೇಷಿಸಿಕೊಳ್ಳುವ ಮೂಲಕ ಮಾತ್ರ. ಇದು ಹಿಂದ
ಇದ್ದಲ್ಲಿಗೇ ಹಿಂದಿರುಗುವ ಸರಳ ವಾಪಸು ಪ್ರಯಾಣವಲ್ಲ. ಏಕೆಂದರ
ಇದರಲ್ಲಿ, ನಾವು ನಮ್ಮತನವನ್ನು ಕಳೆದುಕೊಂಡು ಪರತ್ವವನ್ನು
ಆವಾಹಿಸಿಕೊಳ್ಳುವಂತೆ ಮಾಡಿದ ನಮ್ಮತನವೆಂಬುದರ ದೌರ್ಬಲ್ಯಗಳೇನ
ಎಂಬುದರ ಮನನವು ಅಡಗಿದೆ. ಮತ್ತು ಅದನ್ನು ಆಧರಿಸಿ ನಮ
ಸಮೂಹ ಅಥವಾ ಸಮುದಾಯದ ಬದುಕಿನ ಪರಂಪರೆಯನ್ನು ಇಂದಿ
ಪ್ರಸ್ತುತಮಾಡಿಕೊಳ್ಳುವಂತಹ ಅದರ ಪುನಾರಚನೆಯ ಕೆಲಸವೂ ಸೇರಿದ
ಈ ಕೆಲಸ ಬದುಕಿನ ಎಲ್ಲ ಸಂಗತಿಗಳಿಗೂ–ರಾಜಕಾರಣ, ಸಾಮಾಜಿ
ವ್ಯವಸ್ಥೆ, ದುಡಿಮೆಯ ರೀತಿ ನೀತಿಗಳು, ಆಡಳಿತ ವಿಧಾನ, ನ್ಯಾಯ ಪದ್ಧ
ಭಾಷೆ, ಶಿಕ್ಷಣ, ಧಾರ್ಮಿಕತೆ ಇತ್ಯಾದಿಗಳಿಗೆ–ಸಂಬಂಧಿಸಿದ್ದು. ಈ
ಹಿನ್ನೆಲೆಯಲ್ಲಿ, ಗಾಂಧಿ ನೆನಪು 'ನಮಗೆ ಸ್ವಾ–ತಂತ್ರ್ಯವೇನೋ ಸಿಕ್ಕಿತು; ಅದ
'ಸ್ವ'–ರಾಜ್ಯ ಸಿಕ್ಕಿತೇ?' ಎನ್ನುವುದು ದೊಡ್ಡ ಪ್ರಶ್ನೆಯಾಗಿಗಿ ನಮ್ಮನ್ನು ಕಾಡಲ
ಕಾರಣವಾಗಬಲ್ಲುದು.

ಆರಂಭದಲ್ಲಿ ಶೂಮಾಕರ್‌ರ ಉಪನ್ಯಾಸದಲ್ಲಿ ಉಲ್ಲೇಖಿಸಿ
ಪ್ರಶ್ನೆಗಳಿಗೂ ಗಾಂಧಿ ಚಿಂತನೆಗೂ ಇರುವ ಸಂಬಂಧ ಮತ್ತು ಅದ
ಪ್ರಸ್ತುತತೆ ಬಹುಶಃ ಈಗ ಹೆಚ್ಚು ಸ್ಪಷ್ಟಗೊಂಡಿರಬಹುದು. ಗಾಂಧಿ ಪಾಶ್ಚಾತ್ಯ
ಅಥವಾ ಅದಕ್ಕೆ ಆಧಾರವಾದ ಪಶ್ಚಿಮದ ನಾಗರೀಕತೆಯನ್ನು–ಅದ
ಧಾರ್ಮಿಕ ಆಯಾಮವೂ ಸೇರಿದಂತೆ–ಒಂದು ಪೂರ್ಣ ಲೌಕಿ
ವಿದ್ಯಮಾನವೆಂದು ಗುರುತಿಸಿದರು. ನಮ್ಮ ಪಾಲಿನ ಅದರ ರಾಜಕೀಂ
ರೂಪವೇ 'ಈಸ್ಟ್ ಇಂಡಿಯಾ ಕಂಪನಿ'ಯಾಗಿದ್ದು, ಅದ
ಕೈಗಾರಿಕೋತ್ಪನ್ನಗಳಿಗೆ ಮರುಳಾದ ನಾವು ನಮ್ಮ ಬದುಕಿನ ರೀ

ನೀತಿಗಳನ್ನೇ, ಆ ಮೂಲಕ ನಮ್ಮ ಜೀವನ ದೃಷ್ಟಿಯನ್ನೇ, ಅಂದರೆ ನಮ್ಮ ಸ್ವ-ರಾಜ್ಯವನ್ನು ಕಳೆದುಕೊಂಡು ನಮ್ಮ ಸ್ವಾತಂತ್ರಾಪಹರಣಕ್ಕೆ ನಾವೇ ಕಾರಣರಾದೆವು ಎಂದು ಅವರು ವಿಶ್ಲೇಷಿಸಿದರು.

ಪಾಶ್ಚಾತ್ಯ ನಾಗರೀಕತೆಗೆ-ಅದು ನಂಬಿರುವ ಧರ್ಮದ ಮಾದರಿಯೂ ಸೇರದಂತೆ-ಆಧಾರವಾದ ಭೌತ ವೈಜ್ಞಾನಿಕತೆಯು ಸಂಕೀರ್ಣ (ಜನ ಸಾಮಾನ್ಯರನ್ನು ಬೆರಗು-ಭಯಗೊಳಿಸಿ ಶರಣಾಗುವಂತೆ -ಚೈತನ್ಯ ಉಡುಗುವಂತೆ-ಮಾಡುವಷ್ಟು ಜಟಿಲವಾದ) ಯಂತ್ರೋಪ ಕರಣಗಳನ್ನು ವಿನ್ಯಾಸಗೊಳಿಸಿದೆ. ಅವು ಮನುಷ್ಯನ ದೇಹವನ್ನು ಅದರ ಸೃಜನಾತ್ಮಕ (ಅಂದರೆ, ಆಳದ ಶಾಂತಿ-ಸಮಾಧಾನಗಳನ್ನು ನೀಡಬಲ್ಲ) ಚಟುವಟಿಕೆ-ಸಾಮರ್ಥ್ಯಗಳಿಂದ ವಿಮುಖಗೊಳಿಸುವ ಮೂಲಕ ಅದನ್ನು ಕೇವಲ ಸುಖಭೋಗದ ಮಾಧ್ಯಮವನ್ನಾಗಿ ಪರಿವರ್ತಿಸಲೆಳಸುತ್ತಿದೆ. ಇದರಿಂದಾಗಿ ಮನುಷ್ಯನ ದೇಹಾತ್ಮ ಸ್ಥಿತಿ ಕೇವಲ ದೇಹ ಸ್ಥಿತಿಗೆ ಇಳಿದು ಅವನನ್ನು ಶಾಶ್ವತ ತಪ್ತ(ಅಪೂರ್ಣತೆಯ ತಹತಹಿಕೆಯ ದಾಹಿ)ನನ್ನಾಗಿಸಿ ಅವನನ್ನು ಸೂಕ್ಷ್ಮ ಮತ್ತು ಸ್ಥೂಲ ಹಿಂಸಾತ್ಮಕ ದಾರಿಗೆ ದೂಡಬಲ್ಲುದೆಂದು ಅವರು ಭಾವಿಸಿದರು.

ಇಂತಹ ಚಿಂತನೆಯ ಭಾಗವಾಗಿಯೇ ಗಾಂಧಿ ಮುಖ್ಯವಾಗಿ, ಪಟ್ಟಭದ್ರ ಹಿತಾಸಕ್ತಿಗಳ ಆಮಿಷಗಳಿಗೆ ಯಾವುದೇ ನಿಗಾ ಇಲ್ಲದೆ ಸುಲಭವಾಗಿ ಒಳಗಾಗಬಹುದಾದ ಜನಪ್ರತಿನಿಧಿಗಳಿಂದ ಕೂಡಿದ ಸಂಸತ್ತು ನಡೆಸುವ ಪರೋಕ್ಷ ಪ್ರಜಾಪ್ರಭುತ್ವವನ್ನು ಆದರ್ಶ ಸಕಾರದ ಮಾದರಿ ಎಂದು ನಂಬುವುದರ ವಿರುದ್ಧ ಎಚ್ಚರಿಸಿದ್ದರು; ಬದುಕಿನ ಮಾದರಿಯ ವಿಕಾಸದ ಸಹಜ ವೇಗವನ್ನು ಅಸ್ತವ್ಯಸ್ತಗೊಳಿಸಿ ಅವನನ್ನು ಲೋಕಮತ್ತನನ್ನಾಗಿಸಬಲ್ಲ ರೈಲು ಮುಂತಾದ ವೇಗ ವಾಹನಗಳ ಬಗ್ಗೆ ಎಚ್ಚರಿಸಿದರು; ಮನುಷ್ಯ ತನ್ನ ಸಹಜ ದೈಹಿಕ ಸಂಯಮಗಳನ್ನು ಗಾಳಿಗೆ ತೂರಲು ಪ್ರೇರೇಪಿಸುವ ದೇಹದ ಕಾರ್ಯಶೀಲತೆಯ ಗುಟ್ಟನ್ನು ಕಂಡುಹಿಡಿದು ಸರ್ವರೋಗಾಪಹಾರಿಣಿಯೆಂದು ತನ್ನನ್ನು ವರ್ಣಿಸಿಕೊಳ್ಳುತ್ತಾ ಹೊಸ ಹೊಸ ರೋಗಗಳಿಗೆ ಕಾರಣವಾಗಿರುವ ಆಧುನಿಕ ವೈದ್ಯ ಪದ್ಧತಿಯ ಬಗ್ಗೆ ಎಚ್ಚರಿಸಿದರು; ಮನುಷ್ಯನ ಆತ್ಮ ಸಾಕ್ಷಿಯ ಪಾವಿತ್ರ್ಯ ಮತ್ತು ಮೌಲಿಕತೆಗಳನ್ನೇ ಬರವಣಿಗೆಯ ದಾಖಲಾತಿಗಳು ಮತ್ತು ಜಾಣ ಮಾತುಗಾರಿಕೆ ಮತ್ತು ವಾದ ಮಂಡನೆಯ ವಕೀಲಿಕೆಯನ್ನಾಧರಿಸಿದ

ಆಧುನಿಕ ನ್ಯಾಯ ಪದ್ಧತಿಯ ಬಗ್ಗೆ ಎಚ್ಚರಿಸಿದರು. ಮರೆವು ಮ
ಕ್ಷಮಾಗುಣವನ್ನೇ ನಾಶಮಾಡಬಲ್ಲ ಹಳೆಯದನ್ನೆಲ್ಲ ಅದು ಸಂಭವಿ
ರೂಪದಲ್ಲೇ ಪುನಾರಚಿಸಬಯಸುವ ಆಧುನಿಕ ಇತಿಹಾಸ ಬರವಣಿಗೆ
ಪದ್ಧತಿಯ ಬಗ್ಗೆ ಎಚ್ಚರಿಸಿದರು. ಇವೆಲ್ಲಕ್ಕೂ ಮಾಧ್ಯಮವಾಗಿರುವ ಇಂಗ್ಲಿ
ಭಾಷೆ ಮತ್ತು ಶಿಕ್ಷಣ ಪದ್ಧತಿಗಳು ಭಾರತವಲ್ಲಿ ಆಂತರಿಕವಾಗಿ ವ್ಯಕ್ತಿಯನ್
ಬಾಹ್ಯವಾಗಿ ಸಮಾಜವನ್ನೂ ಒಡೆಯುತ್ತಾ ಹೋಗುತ್ತವೆ ಎಂದು ಅವ
ವಿಶ್ಲೇಷಿಸಿದರು. ಆ ಮೂಲಕ ಬದುಕು ಮತ್ತು ಅದಕ್ಕೆ ಧಾರಣ ಶಕ್ತಿ ನೀಡು
ಧರ್ಮವು ಪರಸ್ಪರ ಸಂಬಂಧವಿರದಂತೆ ಬೇರೆಯಾಗಿ ಎರಡೂ ಬ
ಭೌತಿಕ (ಆಚರಣೆಗಳ) ರೂಪಕ್ಕೆ ಅವನತಿಗೊಳ್ಳುವ ಆತ್ಯಂತಿಕ ದುರ
ಸ್ಥಿತಿಯನ್ನು ಅವರು ಸೂಚಿಸಿದರು.

ಈ ಹಿನ್ನೆಲೆಯಲ್ಲೇ ಗಾಂಧಿ ಚಿಂತನೆಯನ್ನು ಸಂಕ್ಷಿಪ್ತವಾಗಿ: ಆ
ಸಮಗ್ರವಾಗಿ ಹಿಡಿದಿಡಬಲ್ಲ ಅವರ ಎರಡು ಮುಖ್ಯ ಹೇಳಿಕೆಗಳು ನೆನ
ಬರುವುದು:

೧. ಧರ್ಮಾಚರಣೆ ಮತ್ತು ನೈತಿಕತೆಗಳ ನಡುವೆ ಆ
ಮಾಡಿಕೊಳ್ಳಬೇಕಾದ ಸಂದರ್ಭ ಬಂದರೆ ನಾನು ನೈತಿಕತೆಯನ್ನೇ ಆ
ಮಾಡಿಕೊಂಡೇನು. (ಈ ನಂಬಿಕೆಯ ಭಾಗವಾಗಿಯೇ ಅವರು ಅಸ್ಪ
ಹಿಂದೂ ಧರ್ಮಶಾಸ್ತ್ರಗಳ ಭಾಗವಾಗಿದ್ದರೆ ಆ ಶಾಸ್ತ್ರಗಳನ್ನು ನಾ
ತಿರಸ್ಕರಿಸುತ್ತೇನೆ ಎಂಬುದಾಗಿ ಘೋಷಿಸಿದ್ದು.)

೨. ಈ ಭೂಮಿ ಮನುಷ್ಯನ ಎಲ್ಲ ಅಗತ್ಯಗಳನ್ನು ಪೂ
ಬಲ್ಲುದೇ ಹೊರತು ಅವನ ಎಲ್ಲ ಆಸೆಗಳನ್ನಲ್ಲ. (ಈ ನಂಬಿಕೆ
ಭಾಗವಾಗಿಯೇ ಅವರು ಮಾನವ ಸಂಪನ್ಮೂಲಗಳನ್ನು ನಿಷ್ಪ್ರಯೋ
ಗೊಳಿಸಿ ನೈಸರ್ಗಿಕ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆಯುವ ಮ
ಸುಖಲೋಲುಪತೆಗೆ ಎಡೆ ಮಾಡಿಕೊಡುವ ಯಂತ್ರ ನಾಗರೀಕತೆಯ
ವಿರೋಧಿಸಿದ್ದು.)

ಮನುಷ್ಯನ ಮಿತಿಯಿಲ್ಲದ ಎಲ್ಲ ಆಸೆಗಳನ್ನು ನೈತಿಕಗೊ
ಬಿಟ್ಟಿರುವ ಇಂದಿನ (ಆಧುನಿಕ ಬದುಕಿನ ಆತ್ಯಂತಿಕ ಹಂತವಾದ
ಜಾಗತೀಕರಣದ ಸಂದರ್ಭದಲ್ಲಿ ಜಗತ್ತಿನ ಹಿತಚಿಂತಕರಿಗೆ ಗಾಂಧಿ ನೆನ
ಬರುತ್ತಿರುವುದು ಇಂದಿಗೆ ಅಗತ್ಯವಾದ ನಮಗೆ ಎಷ್ಟು ಬೇಕು ಮತ್ತು ಎ
ಸಾಕು ಎಂಬ ಮಿತಿಗಳನ್ನು ನಿರ್ಧರಿಸುವ ವಿವೇಕದ ಪ್ರತೀಕವಾಗಿ. ಆ ವಿ

ಒಂದು ರೂಪಕದ ಮಾದರಿಯಲ್ಲಿ ಅಡಕವಾಗಿರುವುದು ಅವರ 'ಹಿಂದ್ ಸ್ವರಾಜ್' ಕೃತಿಯಲ್ಲಿ. ಅದೊಂದು, ಪಶ್ಚಿಮದ ನಾಗರೀಕತೆಯನ್ನು ವಿಮರ್ಶಿಸಿ, ವಿಶ್ಲೇಷಿಸಿ ಅದರಿಂದ ಪಾರಾಗಬೇಕಾದ ಅಗತ್ಯ ಮತ್ತು ಅನಿವಾರ್ಯತೆಗಳನ್ನು ರೂಪಕಗಳ ಭಾಷೆಯಲ್ಲಿ ವಿಷದೀಕರಿಸಲು ಯತ್ನಿಸುವ ಯುಗಪ್ರವರ್ತಕವೆನ್ನಬಹುದಾದ ಮಹತ್ಕೃತಿ. ಬೇರೆ ಪರ್ಯಾಯವೇ ಇಲ್ಲ ಎಂಬಂತೆ ಸ್ಥಾಪನೆಯಾಗಿರುವ ಸಮಕಾಲೀನ ಬದುಕಿನ ಆಕರ್ಷಣೆ-ವಿಕರ್ಷಣೆಗಳ ಸಂಕೀರ್ಣ ಬಲೆಯಲ್ಲಿ ಸಿಕ್ಕಿಹಾಕಿ ಕೊಂಡಿರುವ ಇಂದಿನ ನಮ್ಮ ಜಗತ್ತಿಗೆ ಇದು ಮೊದಲ ನೋಟಕ್ಕೆ ಬರೀ ಕಲ್ಪನಾತ್ಮಕವಾದ, ಅವ್ಯಾವಾಹರಿಕ ಕೃತಿಯಾಗಿ ಕಾಣುತ್ತದೆ. ಆದರೆ ಇಂದಿನ ಬದುಕಿನ ಮಾದರಿ ಹುಟ್ಟಿಸುತ್ತಿರುವ ಹಿಂಸೆಯ ವಿವಿಧ ರೂಪಗಳು ಮತ್ತು ಪರಿಸರ ನಾಶದ ಪ್ರಶ್ನೆಗಳು ಎಷ್ಟು ದಿನ ವ್ಯಾವಹಾರಿಕವೆನ್ನಿಸೀತು ಎಂದು ಯೋಚಿಸಬಲ್ಲವರಿಗೆ ಇದು ಬೇರೆಯೇ ಸಂದೇಶವನ್ನು ನೀಡಬಲ್ಲುದಾಗಿದೆ. ಅ ಸಂದೇಶದ ಸಾಕಾರ ರೂಪವೇ 'ಗ್ರಾಮ ಸ್ವರಾಜ್ಯ.' ಇಲ್ಲಿ ಗ್ರಾಮವೆಂದರೆ ಹಿಂದಿನ ಅಥವಾ ಇಂದಿನ ಹಳ್ಳಿಯಲ್ಲ. ಬದಲಿಗೆ, ಮನುಷ್ಯನ ನೆಮ್ಮದಿಯ-ಸಮತೋಲನದ- ಬದುಕಿಗೆ ಅಗತ್ಯವಾದ ಭೌತಿಕ ಹಾಗೂ ಮಾನಸಿಕ ಮಿತಿಗಳಿಗೆ ಒಂದು ರೂಪಕ.

ಕನಿಷ್ಟ ಅಗತ್ಯಗಳಿಗೆ ಬೇಕಾದ ಸರಳ ದುಡಿಮೆಯ ಮಾದರಿಗಳು ಹಾಗೂ ಸಂಘ ಜೀವಿತ್ವದಲ್ಲಿ ನೈತಿಕತೆ ಮತ್ತು ಆನಂದದ ಸ್ರೋತಗಳನ್ನು ಕಾಣಲಾಗುವ ರೀತಿಯಲ್ಲಿ ನಮ್ಮ ಹಳ್ಳಿಗಳನ್ನು ಶಾಂತಿ ಮತ್ತು ನೆಮ್ಮದಿಯ ತಾಣಗಳಾಗಿ ಪುನಾರಚಿಸಿ ಅವುಗಳನ್ನೇ ರಾಷ್ಟ್ರದ ಮೂಲ ಆಡಳಿತ ಘಟಕಗಳನ್ನಾಗಿಸುವ ಮೂಲಕ ಅಧಿಕಾರದ ಸಂಪೂರ್ಣ ವಿಕೇಂದ್ರೀ ಕರಿಸಿದಲ್ಲಿ 'ಸ್ವ'-ರಾಜ್ಯ ತಾನೇ ತಾನಾಗಿ ರೂಪುಗೊಳ್ಳುವುದು. ಗಾಂಧೀಜಿಯ ಇಂತಹ ಆದರ್ಶ ಗ್ರಾಮದ ಚಿತ್ರ ಹೀಗಿದೆ:

ಅಲ್ಲಿ ಗಾಳಿ-ಬೆಳಕಿಗೆ ಕೊರತೆಯಿಲ್ಲದ ಮತ್ತು ನೆರೆಹೊರೆಯಲ್ಲಿ ಸಿಗುವ ಸಾಮಗ್ರಿಗಳಿಂದಲೇ ಕಟ್ಟಲ್ಪಟ್ಟ ಸರಳ ವಿನ್ಯಾಸಗಳ ಮನೆಗಳಿರುತ್ತವೆ. ಅಲ್ಲಿ ವಿಶಾಲ ರಸ್ತೆಗಳೂ, ಬೀದಿ ದೀಪಗಳೂ, ಸ್ವಚ್ಛ ಕುಡಿಯುವ ನೀರಿನ ಮತ್ತು ಸಮರ್ಪಕ ಸಾರಿಗೆ ಹಾಗೂ ಸಂಪರ್ಕ ವ್ಯವಸ್ಥೆಯೂ ಇರುತ್ತದೆ. ಹಳ್ಳಿಗೊಂದು ಸುಸಜ್ಜಿತ ಅಂಚೆ ಕಛೇರಿಯೂ. ಸಾಮುದಾಯಿಕ ಚಟುವಟಿಕೆಗಳಿಗಾಗಿಯೂ ಬಳಸಬಹುದಾದ ಸರ್ವಧರ್ಮ ಪ್ರಾರ್ಥನಾ

ಮಂದಿರವೂ, ರಂಗ ಮಂದಿರವೂ, ಮೂಲ ಅಕ್ಷರ ಶಿಕ್ಷಣ ಮತ್ತು ವೃತ್ತಿ ಕೌಶಲಗಳನ್ನು ಕಲಿಸುವ ಶಾಲೆಯೂ, ಪ್ರಾಥಮಿಕ ಚಿಕಿತ್ಸಾ ಕೇಂದ್ರವೂ ಇರುತ್ತದೆ. ಹಳ್ಳಿಗೊಂದು ಗೋಮಾಳ, ಕಾವಲು, ವನ ಮತ್ತು ಗೋಶಾಲೆಯೂ ಇರುತ್ತದೆ. ನ್ಯಾಯ ಪಂಚಾಯ್ತಿಗಾಗಿ ಹಳ್ಳಿಯವರೇ ವಯಸ್ಕ ಮತದಾನದ ಅಥವಾ ಒಮ್ಮತದ ಮೂಲಕ ಆಯ್ಕೆ ಪಂಚರಿರುತ್ತಾರೆ. ಈ ಹಳ್ಳಿ ತನ್ನ ಎಲ್ಲ ಮೂಲ ಅವಶ್ಯಕತೆಗಳನ್ನು ತಾನೇ ಪೂರೈಸಿಕೊಳ್ಳಬಲ್ಲದಾಗಿರುತ್ತದೆ ಮತ್ತು ಅನಿವಾರ್ಯವಾದ ಹೆಚ್ಚುವರಿ ಅವಶ್ಯಕತೆಗಾಗಿ ಮಾತ್ರ ಹಳ್ಳಿಯ ಜನರ ಸಮ್ಮತಿಯೊಂದಿಗೆ ಹತ್ತಿರದ ಊರೊಂದನ್ನು ಸಂಪರ್ಕಿಸಬಹುದಾಗಿದೆ.

ಇಂತಹ ಹಳ್ಳಿಗಳ ನಿರ್ಮಾಣದ ಸಂಕಲ್ಪವೇ ಇಂದು ನಾವು ಗಾಂಧೀಜಿಯನ್ನು ನೆನಪಿಸಿಕೊಳ್ಳಬಹುದಾದ ನಿಜ ಮಾರ್ಗ ಎಂದು ನಾನು ಭಾವಿಸಿದ್ದೇನೆ.

(‘ಜನಪದ ವಿಚಾರ’ ಪತ್ರಿಕೆಯ ಅಕ್ಟೋಬರ್, ೨೦೧೮ ಸಂಚಿಕೆಯಲ್ಲಿ ಪ್ರಕಟವಾದ ಲೇಖನದ ಪರಿಷ್ಕೃತ ರೂಪ)

ಗಾಂಧೀಜಿಯ ಆಹಾರ ಮಾರ್ಗ ಅಥವಾ ಅಸ್ವಾದ ವ್ರತ

ಈ ಕಾರ್ಯಕ್ರಮದ ಸಂಘಟಕರಾದ ವೈದೇಹಿಯವರು ಅಡುಗೆ ಮನೆ ಜಗತ್ತನ್ನು ಕುರಿತು ಏರ್ಪಡಿಸಿರುವ ಈ ಎರಡು ದಿನಗಳ ರುಚಿ ಸಂಭ್ರಮದಲ್ಲಿ ಮೊಸರಿಗೆ ಕಲ್ಲು ಬೆರೆಸಿದಂತೆ ಈ ಉಪನ್ಯಾಸವನ್ನು ಏಕೆ ಸೇರಿಸಿದ್ದಾರೋ ತಿಳಿಯದು. ಏಕೆಂದರೆ, ಗಾಂಧಿಯವರ ಆಹಾರ ಮಾರ್ಗದ ಮುಖ್ಯ ಲಾಂಛನ ಅಸ್ವಾದ, ಅಂದರೆ ಅರುಚಿ! ಈ ಸಂದರ್ಭದ ನನ್ನ ಇನ್ನೊಂದು ಮುಜುಗರವೆಂದರೆ, ನನ್ನ ಆಪ್ತ ವಲಯದಲ್ಲಿ ಬಹು ರುಚಿಗಾರ ಎಂದು ಕುಪ್ರಸಿದ್ಧನಾದ ನಾನು ದಿನ ನಿತ್ಯವೂ ಹೆಚ್ಚೆಚ್ಚು ರುಚಿಗಾಗಿ ನನ್ನಿಂದ ಪೀಡಿಸಲ್ಪಡುವ ನನ್ನ ಹೆಂಡತಿಯನ್ನು ಈ ಸಭೆಯಲ್ಲಿ ಎದುರಿಗೆ ಕೂರಿಸಿಕೊಂಡು ಮತ್ತು ಅವಳಂತೆಯೇ ತಮ್ಮ ಗಂಡಂದಿರಿಂದ ಬಹುಶಃ ದಿನನಿತ್ಯವೂ ಪೀಡಿತರಾಗಿರಬಹುದಾದ ಅನೇಕ ಗೃಹಿಣಿಯರಿರುವ ಈ ಸಭೆಯಲ್ಲಿ ಅಸ್ವಾದದ ಬಗ್ಗೆ ಮಾತಾಡಬೇಕಾಗಿರುವುದು! ಮುಂದೆ ನಾನು ಆಡುವ ಮಾತುಗಳೆಲ್ಲ ಗಾಂಧೀಜಿಯದ್ದೇ ಹೊರತು, ನನ್ನದಲ್ಲ ಎಂಬ ಭಂಡ ಧೈರ್ಯದಿಂದ ನಾನು ಮಾತಾಡಿಬಿಡಬಹುದಾದರೂ, ಹಾಗಾದರೆ ನಾನು ಗಾಂಧೀಜಿಯ ಮಾತುಗಳ ಮೂಟೆಯನ್ನು ನಿಮ್ಮಲ್ಲಿಗೆ ಒಯ್ಯುವ ಕತ್ತೆ ಮಾತ್ರವೇ ಎಂಬ ಪ್ರಶ್ನೆ ಎದುರಾದಾಗ ಮುಜುಗರ ಹೆಚ್ಚುತ್ತದೆ. ಆದರೆ ಅಸ್ವಾದ ವ್ರತದ ಅನುಷ್ಠಾನದ ವಿಷಯದಲ್ಲಿ ಈ ಮುಜುಗರ ಅಗತ್ಯವಿಲ್ಲ ಎಂಬ ಪರೋಕ್ಷ ಆಶ್ವಾಸನೆಯ ಮಾತುಗಳನ್ನು ಗಾಂಧಿಯವರೇ ಹೇಳಿರುವುದರಿಂದ ಅವುಗಳ ರಕ್ಷಣೆಯಲ್ಲಿ ಮುಂದಿನ ಮಾತುಗಳನ್ನು ಆಡುತ್ತಿದ್ದೇನೆ.

ಅಸ್ವಾದ, ಗಾಂಧಿ ಸತ್ಯಾಗ್ರಹಿಗಾಗಿ ರೂಪಿಸಿದ ಏಕಾದಶ ಅಂದರೆ ಹನ್ನೊಂದು ವ್ರತಗಳಲ್ಲಿ ಒಂದು. ಹಾಗೇ ಇದು ಗಾಂಧಿ ಸಾಮಾನ್ಯ ಮನುಷ್ಯನಿಗಾಗಿ ಶೋಧಿಸಿದ ಆಹಾರ ಮಾರ್ಗದ ಒಂದು ಮುಖ್ಯ ಅಂಶವೂ ಹೌದು. ಆದರೆ ಗಾಂಧಿ ಹನ್ನೊಂದು ವ್ರತಗಳ ಪೈಕಿ ಈ ಅಸ್ವಾದ ವ್ರತವನ್ನು ಸೇರಿಸುವಾಗ, ಅವರಿಗೆ ಇದೆಷ್ಟು ಕಷ್ಟಸಾಧ್ಯವಾದ ವ್ರತ ಎಂಬುದು ಗೊತ್ತಿತ್ತು.

ಪರಂಪರಾಗತವಾಗಿ ಬ್ರಹ್ಮಚಾರಿಯೊಬ್ಬನಿಗೆ ವಿಧಿಸುವ ವ್ರತಗಳಲ್ಲಿ ಅಸ್ವಾದವನ್ನು ಸೇರಿಸುವ ಬಗ್ಗೆ, ನಮ್ಮ ಹಲವಾರು ಋಷಿ ಮುನೀಶ್ವರರೇ ಈ ವ್ರತವನ್ನು ಪಾಲಿಸಲು ಸೋತಿರುವ ಹಿನ್ನೆಲೆಯಲ್ಲಿ, ನಮ್ಮ ಹಿರೀಕರಲ್ಲೇ ಒಮ್ಮತವಿರಲಿಲ್ಲ ಎಂದು ತಿಳಿಸುತ್ತಾ, ತಾವು ತುಂಬ ಯೋಚಿಸಿ ಈ ವ್ರತವನ್ನು ಸತ್ಯಾಗ್ರಹಿ ಪಾಲಿಸಬೇಕಾದ ವ್ರತಗಳ ಪಟ್ಟಿಗೆ ಸೇರಿಸುತ್ತಿರುವುದಾಗಿ ಹೇಳುತ್ತಾರೆ. ಜೊತೆಗೆ ಇನ್ನೊಂದು ಮಾತನ್ನೂ ಸೇರಿಸುತ್ತಾರೆ: ವ್ರತವನ್ನು ಪಾಲಿಸುವುದು ಕಷ್ಟವೆಂದು ಕೈಬಿಡಬಾರದು. ಹಲವು ಸೋಲುಗಳ ನಂತರವೂ ಅದನ್ನು ಪಾಲಿಸಲು ಕಾಯಾ ವಾಚಾ ಮನಸಾ ಜೀವನ ಪರ್ಯಂತ ಪ್ರಯತ್ನಿಸುತ್ತಿರಬೇಕು. ಹಾಗೆ ನೋಡಿದರೆ, ಗಾಂಧಿ ಬದುಕು ವ್ರತನಿರತಕ್ಕಿಂತ ಹೆಚ್ಚಾಗಿ ಒಂದು ಒಂದು ಪ್ರಯೋಗವೇ ಅಲ್ಲವೆ?

ಗಾಂಧಿಯ ಆಹಾರ ಮಾರ್ಗದ ಶೋಧನೆ ಆರಂಭವಾಗುವುದು, ಅವರು ಬ್ಯಾರಿಸ್ಟರ್ ಪರೀಕ್ಷೆ ಪಾಸು ಮಾಡಲು ಇಂಗ್ಲೆಂಡ್‌ಗೆ ತೆರಳಲು ನಿರ್ಧರಿಸಿ ಅದಕ್ಕೆ ತಮ್ಮ ತಾಯಿ ಪುತಳಿಬಾಯಿಯ ಅನುಮತಿ ಪಡೆಯಲು ಅವರಿಗೆ ನೀಡಿದ ವಾಗ್ದಾನಗಳಲ್ಲಿ ಒಂದಾದ ಮಾಂಸಾಹಾರ ಸೇವಿಸುವುದಿಲ್ಲ ಎಂಬುದನ್ನು ಪಾಲಿಸಲು ಪಡುವ ಪ್ರಯತ್ನಗಳೊಂದಿಗೆ. ಗಾಂಧಿ ನೀಡಿದ ಇನ್ನೆರಡು ವಾಗ್ದಾನಗಳೆಂದರೆ ಮದ್ಯ ಮುಟ್ಟುವುದಿಲ್ಲ ಮತ್ತು ಮಾನಿನಿಯರ ಸಂಗ ಮಾಡುವುದಿಲ್ಲ ಎಂಬುವು. ಆದರೆ ಗಾಂಧಿ ಆ ಹೊತ್ತಿಗೆ ತಮ್ಮ ಗೆಳೆಯನೊಬ್ಬನ ಸಹವಾಸದಲ್ಲಿ ಮಾಂಸವನ್ನೂ ತಿಂದಿದ್ದರು, ಸ್ವಲ್ಪ ಮಟ್ಟಿಗೆಮತ್ತಿನ ಸುಖವನ್ನೂ ಅನುಭವಿಸಿದ್ದರು. ಆದರೆ ಮಾನಿನಿಯ ಸಂಗ ಮಾಡಲು ಹೋಗಿ ಅಭಿಮಾನ ಭಂಗ ಅನುಭವಿಸಿ ಹಿಂತಿರುಗಿದ್ದರು ಎಂಬುದು ಬೇರೆ ವಿಷಯ. ಆದರೆ ಈ ಮೂರು ವಾಗ್ದಾನಗಳಲ್ಲಿ ಮೇಲ್ನೋಟಕ್ಕೆ ಅತ್ಯಂತ ಸುಲಭವಾಗಿ ಕಾಣುವ ಮಾಂಸಾಹಾರ ಸೇವಿಸುವುದಿಲ್ಲ ಎಂಬ ವಾಗ್ದಾನವೇ ಅವರಿಗೆ ಕಷ್ಟದಾಯಕವಾಯಿತು. ಇಂಗ್ಲೆಂಡ್‌ನಲ್ಲಿ ಹೊಟ್ಟೆ ತುಂಬುವಷ್ಟು ಸಸ್ಯಾಹಾರ ಅವರು ತಂಗಿದ್ದ ಇಂಗ್ಲಿಷ್ ಗೃಹಸ್ಥರ ಮನೆಗಳಲ್ಲಿ ದೊರೆಯುತ್ತಿರಲಿಲ್ಲವಾದ್ದರಿಂದ ಅವರು ಲಂಡನ್‌ನ ಬೀದಿಗಳಲ್ಲಿ ಸಸ್ಯಾಹಾರದ ಹೋಟೆಲ್‌ಗಳನ್ನು ಹುಡುಕಿಕೊಂಡು ಅಲೆಯಬೇಕಾಯಿತು. ಹಾಗೆ ಸಿಕ್ಕ ಒಂದು ಹೋಟೆಲ್‌ನಲ್ಲಿ ಸಸ್ಯಾಹಾರದ ಮಹತ್ವ ಕುರಿತು ಇಂಗ್ಲಿಷ್ ಲೇಖಕ ಸಾಲ್ಟ್ ಎಂಬುವವರು ಬರೆದಿದ್ದ 'ಶಾಕಾಹಾರ: ಒಂದು ವಿನಂತಿ' (A plea for Vegetarianism) ಎಂಬ

ಪುಸ್ತಕ ಅವರ ಗಮನ ಸೆಳೆದು, ಅವರು ಸಸ್ಯಾಹಾರಿ ಸಂಘದ ಸದಸ್ಯರಾಗಿ ಸ್ವಲ್ಪ ಕಾಲ ಸಸ್ಯಾಹಾರ ಪ್ರಚಾರ ಆಂದೋಲನದಲ್ಲೂ ತೊಡಗಿಕೊಂಡರು. ಅದಕ್ಕಾಗಿ ಇಂಗ್ಲಿಷ್ ಸಮಾಜದ ಶಿಷ್ಟಾಚಾರಗಳನ್ನು (ನೃತ್ಯ, ಪಿಟೀಲು, ಭಾಷಣ ಕಲೆ ಇತ್ಯಾದಿ) ಕಲಿಯುವ ತಮ್ಮ ಹುಚ್ಚಾಟಗಳ ಅರ್ಥಹೀನತೆ ಯನ್ನು ಈ ಶಿಷ್ಟಾಚಾರಗಳಿಗೇ ಸಂಬಂಧಿಸಿದ ಇನ್ನೊಂದು ಪುಸ್ತಕದ ಪ್ರಭಾವದಲ್ಲಿ ಮನಗಂಡ ಅವರು ಅನುಕರಣೆಯ ದುಂದು ವೆಚ್ಚದ ಬದುಕನ್ನು ತೊರೆದರು. ಮಿತವ್ಯಯ ಸಾಧಿಸಲು ತಮ್ಮ ಕೊಠಡಿಯಲ್ಲೇ ತಮ್ಮ ಆಹಾರ ತಯಾರು ಮಾಡಿಕೊಳ್ಳಲು ತೊಡಗಿದರು.ಇದರ ಪರಿಣಾಮವಾಗಿ ಅವರು ಸಸ್ಯಾಹಾರದಿಂದಲೇ ಮನುಷ್ಯನಿಗೆ ಬೇಕಾದ ಸಕಲ ಪೌಷ್ಟಿಕತೆ ಯನ್ನೂ ಪಡೆಯುವ ಅಡುಗೆ ಪ್ರಯೋಗಗಳನ್ನೂ ಮಾಡಲಾರಂಭಿಸಿದರು.

ಇದಕ್ಕಾಗಿ ಗಾಂಧಿ ಶಾಕಾಹಾರ ಕುರಿತ ಅನೇಕ (ಉದಾ: Moral basis of Vegetarianism ಮತ್ತು Diet and diet reforms) ಪುಸ್ತಕಗಳನ್ನೂ ಓದಿದರು ಮತ್ತು ಶಾಕಾಹಾರಿ ಸಂಘದ ಪದಾಧಿಕಾರಿಗಳೊಂದಿಗೆ ಚರ್ಚಿಸಿದರು. ಆಗಲೇ ಅವರು ಸಸ್ಯಾಹಾರಕ್ಕೆ ತಾತ್ವಿಕ ನೆಲೆಯೊಂದನ್ನೂ ಕಂಡುಕೊಂಡದ್ದು. ಆಹಾರ ಕ್ರಮಕ್ಕೂ ಒಂದು ನೈತಿಕತೆ ಇರಬೇಕೆಂಬ ತೀರ್ಮಾನಕ್ಕೆ ಬಂದದ್ದು. 'ಪ್ರಾಣಿಗಳ ಮೇಲೆ ಮನುಷ್ಯನ ಅಧಿಕಾರ ಅಥವಾ ಆಧಿಪತ್ಯದ ಸ್ಥಾಪನೆ ಎಂದರೆ ಪ್ರಾಣಿಗಳನ್ನು ಕೊಂದು ತಿನ್ನುವುದಲ್ಲ. ಶಕ್ತರು ಅಶಕ್ತರನ್ನು ಕಾಪಾಡಬೇಕು ಎಂಬ ತತ್ವದ ಪ್ರಕಾರ ಮನುಷ್ಯರು ಒಬ್ಬರನ್ನೊಬ್ಬರು ಕಾಪಾಡುವಂತೆ ಮನುಷ್ಯರಿಗೂ ಪ್ರಾಣಿಗಳಿಗೂ ಅನ್ಯೋನ್ಯ ಸಹಾಯ ಇರಬೇಕು' ಎಂಬುದು ಅವರು ತಮ್ಮ ಆಹಾರ ಮಾರ್ಗಕ್ಕಾಗಿ ಕಂಡುಕೊಂಡ ತಾತ್ವಿಕ ಮತ್ತು ನೈತಿಕ ನೆಲೆ. ಇದರ ಹಿಂದೆ ಇದ್ದುದು ಆಹಾರ ಸೇವನೆ ಒಂದು ಭೋಗವಲ್ಲ. ಅದು ಅಗತ್ಯವಾಗಿರುವುದು, ಶರೀರ ರಕ್ಷಣೆ ಮತ್ತು ಸಂರಕ್ಷಣೆ ಅಂದರೆ ಜೀವ ಕಾಪಾಡಿಕೊಳ್ಳುವುದಕ್ಕಾಗಿ ಮಾತ್ರ; ಅದನ್ನು ಔಷಧಿಯಂತೆಯೇ–ಹೆಚ್ಚೂ ಅಲ್ಲದೆ, ಕಡಿಮೆಯೂ ಅಲ್ಲದೆ–ಸ್ವೀಕರಿಸಬೇಕು ಎಂಬ ಅರಿವು. ಜೊತೆಗೆ ಅವರು ಕಂಡುಕೊಂಡ ಇನ್ನೊಂದು ಹೊಸ ಸಂಗತಿ ಎಂದರೆ, ಮನುಷ್ಯ ಶರೀರ ವಿಕಾಸವಾಗಿರುವುದೇ ಸಸ್ಯಾಹಾರದ– ಅದೂ ಬೇಯಿಸದ್ದು–ಆಧಾರದ ಮೇಲೆ ಎಂಬುದು. ಈ ಸಂಬಂಧ ಅವರು ಪಿಷ್ಟ, ಸಸಾರಜನಕ, ಜೀವಸತ್ವಗಳ ಪ್ರಮಾಣ ಮತ್ತು ಅಗತ್ಯಗಳನ್ನು ಕುರಿತಂತೆ ತಮ್ಮ ಮೇಲೇ ಆಹಾರ ಸೇವನೆಯ ಅನೇಕ ಪ್ರಯೋಗಗಳನ್ನು

ಮಾಡಿಕೊಂಡರು. ಇವುಗಳಲ್ಲಿ ಮೊಟ್ಟೆ, ಹಾಲು, ಮಿಠಾಯಿ, ಮಸಾಲೆಗಳನ್ನು ತ್ಯಜಿಸಿದ್ದೂ ಸೇರಿತು. ಗಾಂಧಿ ಕುಟುಂಬ ತಾತ್ವಿಕವಾಗಿ ಮೂಲದಲ್ಲಿ ಜೈನರಾಗಿದ್ದ ಗುರುಗಳೊಬ್ಬರ ಉಪದೇಶಗಳ ಕಟ್ಟುನಿಟ್ಟಾದ ಪರಿಧಿಯಲ್ಲಿ ಬೆಳೆದದ್ದು ಎಂಬ ಸಂಗತಿಯನ್ನೂ ಈ ಹಿನ್ನೆಲೆಯಲ್ಲಿ ಗಮನಿಸಬೇಕು.

-೨-

ಗಾಂಧಿ ಅಸ್ವಾದ ವ್ರತವನ್ನು ತಾವು ಸತ್ಯಾಗ್ರಹಿಗಾಗಿ ರೂಪಿಸಿದ ಹನ್ನೊಂದು ವ್ರತಗಳಲ್ಲಿ ಸೇರಿಸಲು ಇದೆಲ್ಲ ಹಿನ್ನೆಲೆಯೂ ಇದ್ದಂತಿದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು, ಈ ವ್ರತಗಳು ಸತ್ಯಾಗ್ರಹಿಗಾಗಿ ರೂಪಿತವಾದವು ಎಂಬುದು ಮತ್ತು ಅಸ್ವಾದ ವ್ರತದ ಜೊತೆಯ ಸತ್ಯ, ಅಹಿಂಸೆ, ಬ್ರಹ್ಮಚರ್ಯ, ಅಸ್ಪೃಶ್ಯತಾ ನಿವಾರಣೆ, ಅಸ್ತೇಯ (ತನ್ನದಲ್ಲದ ಅಥವಾ ತನಗೆ ಅಗತ್ಯವಿಲ್ಲದ ವಸ್ತುವಿಗಾಗಿ ಆಸೆ ಪಡದಿರುವುದು), ಅಪರಿಗ್ರಹ (ತನ್ನದಲ್ಲದ ಮತ್ತು ತನಗೆ ಅಗತ್ಯವಿಲ್ಲದ ವಸ್ತುಗಳನ್ನು ತನ್ನದಾಗಿಸಿಕೊಳ್ಳದಿರುವುದು), ಅ-ಭಯ, (ಸರ್ವಧರ್ಮ) ಸಹಿಷ್ಣುತೆ, ಶರೀರ ಶ್ರಮ, ನಮ್ರತೆಗಳೆಂಬ ವ್ರತಗಳು ಒಂದಕ್ಕೊಂದು ಸಂಬಂಧಿಸಿ ಒಂದು ಅವಿಭಾಜ್ಯ ಮಹಾವ್ರತವನ್ನು ರೂಪಿಸುವಂಥವು. ಗಾಂಧಿಯ ಸತ್ಯಾಗ್ರಹ ಅಥವಾ ಸತ್ಯಾಗ್ರಹಿ ಎಂದರೇನು ಎಂಬುದನ್ನು ಪೂರ್ಣವಾಗಿ ಅರ್ಥ ಮಾಡಿಕೊಳ್ಳದ ಹೊರತು ಈ ವ್ರತಗಳ ಔಚಿತ್ಯ ಯಾರಿಗೂ ಅರ್ಥವಾಗದು. ಇದೆಲ್ಲವನ್ನೂ ಇಲ್ಲಿ ವಿವರವಾಗಿ ಹೇಳಲಾಗದಾದರೂ, ಸಂಕ್ಷಿಪ್ತವಾಗಿ ಇಷ್ಟನ್ನು ಹೇಳಬಹುದು: ಗಾಂಧೀಜಿಯನ್ನು ರಾಷ್ಟ್ರಪಿತ ಅಥವಾ ಸ್ವಾತಂತ್ರ್ಯ ತಂದು ಕೊಟ್ಟವರು ಎಂದು ವರ್ಣಿಸುವವರು ಅಥವಾ ಗುರುತಿಸುವವರು ಅವರ ವ್ಯಕ್ತಿತ್ವ ಮತ್ತು ಬದುಕನ್ನು ಪೂರ್ಣವಾಗಿ ಅರ್ಥ ಮಾಡಿಕೊಂಡಿಲ್ಲದವರು ಎಂದೇ ಹೇಳಬೇಕು. ಏಕೆಂದರೆ ಈ ಸ್ವಾತಂತ್ರ್ಯ ಸಾಧನೆ ಮತ್ತು ರಾಷ್ಟ್ರ ಸೃಷ್ಟಿ ಎಂಬುವು ಅವರ ಬದುಕಿನ ವಿರಾಟ್ ತಾತ್ವಿಕ ಅನ್ವೇಷಣೆಯ ಭಾಗಶಃ ಪರಿಣಾಮಗಳಷ್ಟೇ ಆಗಿದ್ದವು. ಅವರು ಸತ್ಯದೊಡನೆ ಪ್ರಯೋಗ ಎಂದು ವರ್ಣಿಸಿಕೊಂಡಿರುವ ಅವರ ಬದುಕಿನ ಮೂಲ ಕಾಳಜಿ ತಮ್ಮೊಳಗಿನ ದೇವರ ಸಾಕ್ಷಾತ್ಕಾರ ಅಥವಾ ಸ್ವಸ್ವರೂಪ ದರ್ಶನ ಆಗಿತ್ತು. ಹಾಗೆ ನೋಡಿದರೆ ಮನುಷ್ಯ ಜನ್ಮದ ಗುರಿಯೇ ಇದು ಅಥವಾ ಮನುಷ್ಯನ ಬದುಕೆಂದರೆ ಈ ಗುರಿಯತ್ತ ಸಾಗುವ ಮಾರ್ಗ ಎಂದು ಅವರು ಭಾವಿಸಿದ್ದರು. ಅದನ್ನು ಅವರು ತಮ್ಮ ಬದುಕಿನಲ್ಲಿ, ದೇವರು ಸತ್ಯ ಎಂಬ

ಆವರೆಗಿನ ಜನಪ್ರಿಯ ನಂಬಿಕೆಯನ್ನು ಸತ್ಯವೇ ದೇವರು ಎಂದು ತಿರುಗುಮುರುಗಾಗಿಸುವ ಮೂಲಕ ಆರಂಭಿಸಿದ್ದನ್ನೂ ನಾವು ಗಮನಿಸಬೇಕು. ಈ ಅನ್ವೇಷಣೆಯ ಭಾಗವಾಗಿ ಅವರು ಸತ್ಯದ ಮೊನಚನ್ನು ಕಂಡದ್ದು ಈ ಭೂಮಿಯ ಮೇಲಿನ ದಟ್ಟ ದರಿದ್ರರ ರೂಪದಲ್ಲಿ ಎಂಬುದನ್ನೂ, ಅವರ ಸೇವೆಯೇ–ಸಂಕಟ ನಿವಾರಣೆಯೇ–ಸತ್ಯದ ಸಾಕ್ಷಾತ್ಕಾರ ಅಥವಾ ಧರ್ಮ ಮಾರ್ಗ ಎಂದೂ ಅವರು ವಿವರಿಸಿದ್ದನ್ನೂ ಅರಿಯಬೇಕು.

ಈ ಸತ್ಯಾನ್ವೇಷಣೆಯ ಮಾರ್ಗದಿಂದ ತಮ್ಮನ್ನು ವಿಚಲಿತ ಗೊಳಿಸುವ ದೈಹಿಕ (ಐಂದ್ರಿಯಿಕ) ಆಸಕ್ತಿಗಳನ್ನು ಕೆರಳಿಸುವ ಅಂಶಗಳನ್ನೂ ಅವರು ಅಧ್ಯಯನ ಮಾಡಿ ಅವುಗಳ ಮೂಲವನ್ನು ಆಧುನಿಕವೆಂದು ಕರೆಯಲಾಗುವ ನಾಗರೀಕತೆಯಲ್ಲಿ ಗುರುತಿಸಿದರು ಮತ್ತು ಆ ನಾಗರೀಕತೆ ಯನ್ನು ರೋಗವೆಂದು ಕರೆದರು. ಆಧುನಿಕ ನಾಗರೀಕತೆಯ ಮುಖ್ಯ ಲಕ್ಷಣವಾದ ವೇಗ ಮತ್ತು ಭೋಗಗಳ ಆಕಾಂಕ್ಷೆ–ಹಪಾಹಪಿಗಳೇ ಈ ರೋಗದ ಉತ್ಪತ್ತಿಗೆ ಕಾರಣವೆಂದು ವಿಶ್ಲೇಷಿದ ಅವರು ಈ ರೋಗ ನಿವಾರಣೆಯ ಭಾಗವಾಗಿಯೇ ಸ್ವಾತಂತ್ರ್ಯ ಹೋರಾಟದ ನೇತೃತ್ವವನ್ನು ವಹಿಸಿದ್ದು ಎಂಬುದನ್ನೂ ನಾವು ಗಮನಿಸಬೇಕು. ಗಾಂಧಿ ತಾತ್ವಿಕತೆಯ ಸಾರ ಸಂಗ್ರಹವೆನಿಸಿರುವ 'ಹಿಂದ್ ಸ್ವರಾಜ್'ನಲ್ಲಿ ಅವರು ಹೇಳುವ ಈ ಮಾತನ್ನೂ ಈ ಹಿನ್ನೆಲೆಯಲ್ಲಿ ಗ್ರಹಿಸಬೇಕು: 'ಭಾರತ ಇಂದು ತಿಣುಕುತ್ತಿರುವುದು ಬ್ರಿಟಿಷ್ ಪ್ರಭುತ್ವದ ಭಾರದಿಂದಲ್ಲ; ಬದಲಿಗೆ ಆಧುನಿಕ ನಾಗರೀಕತೆಯ ಭಾರದಿಂದ'. ಅವರ ಪ್ರಕಾರ ಭಾರತ ಬ್ರಿಟಿಷರ ಕೈವಶವಾದದ್ದು ಅವರ ಯಂತ್ರ ನಾಗರೀಕತೆಯ ಆವಿಷ್ಕಾರಗಳು ಮತ್ತು ಉತ್ಪನ್ನಗಳಿಗೆ ಭಾರತದ ಜನ ಮಾರುಹೋಗಿ ತಮ್ಮ ಬದುಕಿನ ಮಾದರಿಗಳ ಬಗ್ಗೆ ಕೀಳರಿಮೆ ಬೆಳೆಸಿಕೊಂಡು ತಮ್ಮ ಜೀವನ ದೃಷ್ಟಿ ಮತ್ತು ಮೌಲ್ಯಗಳನ್ನು, ರುಚಿ–ಅಭಿರುಚಿಗಳನ್ನು ಕಳೆದುಕೊಂಡದ್ದರಿಂದ.

ಗಾಂಧಿಯ ಈ ಸತ್ಯಾನ್ವೇಷಣೆ ಒಂದು ನಾಗರೀಕತೆಯನ್ನು ಪಳಗಿಸುತ್ತಲೇ ಇನ್ನೊಂದು (ತನ್ನದೇ) ನಾಗರೀಕತೆಯನ್ನು ಪುನರನ್ವೇಷಿಸಿ ಕೊಳ್ಳುವ ಕೆಲಸಗಳನ್ನೂ ಒಳಗೊಂಡಿದ್ದುದರಿಂದ ಅದು ವೈಯಕ್ತಿಕ ಮಾತ್ರವಾದುದಾಗಿರಲಿಲ್ಲ. ಅದೊಂದು ಸಾಮೂಹಿಕ ಹೋರಾಟದ ರೂಪವಾಗಿ ಮಾರ್ಪಾಡಾಗಿದ್ದು ಸಹಜವೇ ಆಗಿತ್ತು. ಭಾರತವು

'ಪ್ರಗತಿಪರ'ವಾಗಬೇಕಾದ ಒಂದು 'ಹಿಂದುಳಿದ' ಸಮಾಜವೆಂದು ಪ್ರತಿಬಿಂಬಿಸಲ್ಪಟ್ಟ ಮತ್ತು ಹಾಗೆಂದು ನಮ್ಮನ್ನೇ ನಂಬಿಸಿದ ವಸಾಹತುಶಾಹಿ ರಾಜಕಾರಣದಿಂದಾಗಿ ಸರ್ವ ದಿಕ್ಕುಗಳಿಂದಲೂ ತಾಡಿಸುತ್ತಿದ್ದ ಆಧುನಿಕ ನಾಗರೀಕತೆಯ (ಅಂದರೆ ಜೀವನ ದೃಷ್ಟಿ ಮತ್ತು ಬದುಕಿನ ಮಾದರಿಯ) ವೇಗ ಮತ್ತು ಭೋಗಾಕಾಂಕ್ಷೆಗಳಿಂದ ವಿಚಲಿತರಾಗದೆ ಇಂತಹ ಮಹಾ ಹೋರಾಟವನ್ನು ತಮ್ಮೊಂದಿಗೆ ಮುನ್ನಡೆಸಬಲ್ಲ ಇಂದ್ರಿಯ ಸಂಯಮ ಶಿಸ್ತಿಗೆ ಒಳಪಟ್ಟ ಕಾರ್ಯಕರ್ತರನ್ನು ಅವರು ತಯ್ಯಾರು ಮಾಡಬೇಕಿತ್ತು. ಅಂತಹವರನ್ನೇ ಗಾಂಧಿ ಸತ್ಯಾಗ್ರಹಿಗಳು ಎಂದು ಕರೆದದ್ದು. ಇವರ ಸತ್ಯಾಗ್ರಹ ನಡೆಯಬೇಕಾಗಿದ್ದುದು ಆಧುನಿಕ ನಾಗರೀಕತೆಯ ಮೋಹಗಳಿಂದ ಆಗಬೇಕಾದ ವಿಮೋಚನೆಯ ಭಾಗವಾಗಿ ಸಂಭವಿಸಬೇಕಾದ ಭಾರತದ ರಾಜಕೀಯ ವಿಮೋಚನೆಗಾಗಿ. ಹಾಗಾಗಿ ಈ ವ್ರತಗಳ ವಿಧಿ. ನನ್ನ ಪ್ರಕಾರ ಈ ವ್ರತಗಳೆಲ್ಲವನ್ನೂ ಪರಸ್ಪರ ಸಂಬಂಧಿಸುವ ವ್ರತವೇ ಅಸ್ವಾದ ವ್ರತ.

'ಹಿಂದ್ ಸ್ವರಾಜ್' ಓದಿದವರಿಗೆ ಗೊತ್ತಿದೆ, ಗಾಂಧಿ ಭಾರತಕ್ಕೆ ರೈಲಿನ ಆಗಮನ ಮತ್ತು ಅಲೋಪತಿ ಎಂಬ ಆಧುನಿಕ ವೈದ್ಯ ಪದ್ಧತಿಯ ಪ್ರವೇಶವನ್ನು ಹೇಗೆ ಅವು ಈ ಆಧುನಿಕ ನಾಗರೀಕತೆಯ ಅನಗತ್ಯ ವೇಗ ಮತ್ತು ಅನುಚಿತ ಭೋಗಗಳ ಸಂಕೇತವಾಗಿ ಕಂಡು ಅವನ್ನು ಟೀಕಿಸಿದ್ದಾರೆಂದು. ವೇಗ ಅಂದರೆ ಮಿತಿ ಇಲ್ಲದ್ದು, ತೀವ್ರತೆ ಮತ್ತು ಪ್ರಮಾಣಗಳೆರಡರಲ್ಲೂ. ಭೋಗ ಎಂದರೆ ಔಚಿತ್ಯ ಪ್ರಜ್ಞೆ ಕಳೆದುಕೊಂಡ ದೇಹ ಸುಖದ ಹಪಾಹಪಿ. ರೈಲು ಬರುವವರೆಗೆ ತನ್ನ ಸಮುದಾಯ ಮತ್ತು ತನ್ನ ದೇಹ ಇವುಗಳೊಂದಿಗೆ ತಾಳಮೇಳ ಹೊಂದಿದ್ದ ಸಹಜ ವ್ಯವಧಾನದ ಬದುಕು ನಡೆಸುತ್ತಿದ್ದ ಮನುಷ್ಯ ರೈಲು ಹತ್ತಿ ತನ್ನ ಸಹಜ ವ್ಯವಧಾನ ಕಳೆದುಕೊಂಡು ವೇಗದ ಜೀವನದ ಮಾನಸಿಕ ಕ್ಲೇಶಕ್ಕೆ ತುತ್ತಾದರೆ, ಆಹಾರ ಮತ್ತು ಹವ್ಯಾಸಗಳನ್ನು ಒಂದು ಮಿತಿಯಲ್ಲಿಟ್ಟುಕೊಂಡು ದೇಹಾರೋಗ್ಯದ ಬಗ್ಗೆ ಎಚ್ಚರದಿಂದಿದ್ದ ಮನುಷ್ಯ, ಎಲ್ಲಕ್ಕೂ ತನ್ನಲ್ಲಿ ಔಷಧಿ ಇದೆ ಅಥವಾ ಬರಲಿದೆ ಎಂದೇ ಘೋಷಿಸಿಕೊಂಡು ಬಂದ ಅಲೋಪತಿ ಔಷಧಿ ಪದ್ಧತಿಗೆ ಮರುಳಾಗಿ ತನ್ನ ದೇಹವ ಬಗೆಗಿನ ಎಚ್ಚರ-ಸಂಯಮಗಳನ್ನು ಕಳೆದುಕೊಂಡ ನಿತ್ಯ ರೋಗಿಯಾಗತೊಡಗಿದ್ದಾನೆ ಎಂಬುದು ಆಧುನಿಕ ನಾಗರೀಕತೆ ಕುರಿತ ಗಾಂಧಿಯವರ ಮುಖ್ಯ ಒಳನೋಟಗಳಾಗಿದ್ದವು.

ಹಾಗಾಗಿ ಗಾಂಧಿ ಈ ವೇಗ ಮತ್ತು ಭೋಗಗಳ ರೋಗಕ್ಕೆ ಮೂಲ ಮದ್ದಾಗಿ ಅಸ್ವಾದವನ್ನು ಒಂದು ಮಿತಿ ಮತ್ತು ಒಂದು ಔಚಿತ್ಯದ ಪ್ರತೀಕವಾಗಿ ಪ್ರತಿಪಾದಿಸಿದರು ಎಂದೂ ಹೇಳಬಹುದು.

–೩–

ಗಾಂಧಿ ಅಸ್ವಾದವನ್ನು ರುಚಿಹೀನತೆ ಎಂದು ಭಾವಿಸಲಿಲ್ಲ ಅಥವಾ ಅವರು ರುಚಿ ಬಹಿಷ್ಕಾರವನ್ನೂ ಮಾಡಲಿಲ್ಲ. ಬದಲಿಗೆ ಅವರು ಅಸ್ವಾದವನ್ನು ವಿವರಿಸಿದ್ದು ರುಚಿಯನ್ನು ಭೋಗಿಸಬಾರದು ಎಂದು ಹೇಳುತ್ತಾ. ಅಂದರೆ ಅವರು ಬೇಡವೆಂದದ್ದು ರುಚಿಯನ್ನಲ್ಲ; ರುಚಿಯ ದಾಹವನ್ನು; ಒಂದು ರುಚಿಗಾಗಿನ ಹಪಾಹಪಿಯನ್ನು. ಅವರ ಪ್ರಕಾರ ರುಚಿಯಿರುವುದು ಮನಸ್ಸಿನಲ್ಲಿ; ನಾಲಗೆಯಲ್ಲಲ್ಲ. ನಾಲಗೆಯ ಮೇಲಿನ ರುಚಿ ಗ್ರಂಥಿಗಳು ಸಹಜವಾದುವಲ್ಲ; ನಾವು ರುಚಿಯ ಹುಡುಕಾಟಗಳಲ್ಲಿ ಬೆಳೆಸಿಕೊಂಡದ್ದು! ಒಮ್ಮೆ ಸತ್ಯಾಗ್ರಹಿ ರುಚಿಯ ಹುಡುಕಾಟದಲ್ಲಿ ತೊಡಗಿದನೆಂದರೆ, ಅವನು ಸತ್ಯದ ಆಗ್ರಹದಿಂದ ವಿಚಲಿತನಾದಂತೆಯೇ. ಏಕೆಂದರೆ, ರುಚಿಗಾಗಿ ಹಪಹಪಿಸಿ ಉಪ್ಪು–ಹುಳಿ–ಖಾರ–ಮಾಸಾಲೆಗಳ ಹಿಂದೆ ಬಿದ್ದವನು ಮನೋಬಲ ಕಳೆದುಕೊಂಡು ಇಂದ್ರಿಯ ನಿಗ್ರಹದಲ್ಲಿ ವಿಫಲನಾಗುತ್ತಾನೆ. ಇದರ ಪರಿಣಾಮವೆಂದರೆ ಕೇವಲ ಅಸ್ವಾದದ ವ್ರತದ ಉಲ್ಲಂಘನೆ ಮಾತ್ರವಲ್ಲದೆ ಇತರೆಲ್ಲ ಹತ್ತೂ ವ್ರತಗಳ ಉಲ್ಲಂಘನೆ ಸಂಭವಿಸುತ್ತದೆ. (ಹನ್ನೊಂದು ವ್ರತಗಳನ್ನೂ ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದ ಗಾಂಧಿಯಂತಹ ಗಾಂಧಿಯೇ, ತಮ್ಮ ೬೭ನೇ ವಯಸ್ಸಿನಲ್ಲಿ ಒಂದು ಸಂಜೆ ಕಾಮವಶರಾಗಿ ಹೆಂಗಸಿನ ಸಹವಾಸದ ಹಂಬಲದಿಂದ ಒದ್ದಾಡಿ, ತಮ್ಮ ಬದುಕಿನ ಆ 'ಕರಾಳ' ಘಳಿಗೆಯನ್ನು ಹೇಗೋ ಗೆದ್ದು ಪಾರಾದುದನ್ನು ಸ್ವತಃ ಅವರೇ ಒಂದೆಡೆ ಬರೆದುಕೊಂಡಿದ್ದಾರೆ–ಎಂದ ಮೇಲೆ ಇತರರ ಪಾಡೇನು!) ಈ ಎಲ್ಲ ಹಿನ್ನೆಲೆಯಲ್ಲಿ ಶರೀರ ರಕ್ಷಣೆ ಮತ್ತು ಸಂರಕ್ಷಣೆಗೆ ಅಗತ್ಯವಾದ ಎಲ್ಲ ಪೋಷಕಾಂಶಗಳೂ ಸಮತುಲಿತವಾಗಿರುವ ಒಂದು ಆಹಾರ ಮಾದರಿಯನ್ನು ಅವರು ರೂಪಿಸಿದ್ದರು. (ಯಾತ್ರೆಯಲ್ಲಿದ್ದಾಗ ಗಾಂಧಿ ಆಹಾರವಾಗಿ ಸ್ವೀಕರಿಸುತ್ತಿದ್ದುದು ನೆನೆಸಿದ ಕಡಲೆಕಾಯಿಯನ್ನು ರುಬ್ಬಿ ಮಾಡಿದ ಹಿಟ್ಟು ಮತ್ತು ಬಾಳೇಹಣ್ಣನ್ನು) ಅದು ಅನಾಕರ್ಷಕವಾದ ಆಹಾರವೇನಾಗಿರಲಿಲ್ಲ ಎಂಬುದು ಈ ಕೆಳಗಿನ ವಿವರ ನೋಡಿದರೆ ಗೊತ್ತಾಗುತ್ತದೆ. ಅವರ ಪ್ರಕಾರ ಒಬ್ಬ ಬ್ರಹ್ಮಚಾರಿಗೆ ದಿನವೊಂದಕ್ಕೆ ಬೇಕಾದ ಆಹಾರ ಮಾದರಿ ಹೀಗಿತ್ತು:

೧. ಒಂದು ಲೀಟರ್‌ನಷ್ಟು ಹಸು ಅಥವಾ ಆಡಿನ ಹಾಲು
೨. ೧೭೦ ಗ್ರಾಂಗಳಷ್ಟು ಸಿರಿಧಾನ್ಯಗಳು
೩. ೮೫ ಗ್ರಾಂಗಳಷ್ಟು ಎಲೆ ತರಕಾರಿ
೪. ೧೪೦ ಗ್ರಾಂ ಇತರ ತರಕಾರಿಗಳು
೫. ೩೦ ಗ್ರಾಂ ಹಸಿ ತರಕಾರಿ
೬. ೪೦ ಗ್ರಾಂ ತುಪ್ಪ
೭. ೬೦ ಗ್ರಾಂ ಬೆಣ್ಣೆ
೮. ೪೦ ಗ್ರಾಂ ಬೆಲ್ಲ
೯. ಆಯಾ ಕಾಲದ ಹಣ್ಣುಗಳು
೧೦. ಎರಡು ನಿಂಬೆ ಹಣ್ಣು(ಪಾನಕ ರೂಪದಲ್ಲಿ) ಮತ್ತು
೧೧. ರುಚಿಗೆ ತಕ್ಕಷ್ಟು ಉಪ್ಪು

ಗಾಂಧಿ ಹಸುವಿನ ಹಾಲನ್ನೂ ಮಾಂಸಾಹಾರವೆಂದು ಪರಿಗಣಿಸುತ್ತಿದ್ದರಾದರೂ, ಅವರೊಮ್ಮೆ ಅತಿಸಾರಕ್ಕೆ ಒಳಗಾಗಿ ಬಹಳ ಕಾಲ ಚೇತರಿಸಿಕೊಳ್ಳಲಾಗದಿದ್ದಾಗ ತಮ್ಮ ವೈದ್ಯ ಮತ್ತು ಪತ್ನಿಯ ಒತ್ತಾಯಕ್ಕೆ ಮಣಿದು ತಮ್ಮ ನಂಬಿಕೆಗೂ ಧಕ್ಕೆ ಬಾರದ ಹಾಗೆ ಆಡಿನ ಹಾಲನ್ನು ಕುಡಿದರು. ಈ ಬಗ್ಗೆ ಗಾಂಧೀಜಿಗೆ ಸಮಾಧಾನವೇನೂ ಇರಲಿಲ್ಲ. ಅವರು ಹಾಲಿನಲ್ಲಿ ಮತ್ತು ಮಾಂಸದಲ್ಲಿ ಮಾತ್ರ ದೊರೆಯುವುದೆಂದು ಹೇಳಲಾಗುವ ಪೋಷಕಾಂಶಗಳಿಗಾಗಿ ಸಸ್ಯಸಮೂಹದಲ್ಲಿ ಹುಡುಕುತ್ತಲೇ ಇದ್ದರು ಮತ್ತು ಆಹಾರ ತಜ್ಞರಿಗೆ ಈ ಹುಡುಕಾಟದಲ್ಲಿ ತೊಡಗುವಂತೆ ಸೂಚಿಸಿದ್ದರು ಹಾಗೂ ಮನುಷ್ಯ ಶರೀರವನ್ನು ಶಾಕಾಹಾರಕ್ಕಾಗಿಯೇ ವಿಕಾಸಗೊಳಿಸಿರುವ ಸೃಷ್ಟಿಯಲ್ಲಿ ಅದು ಇರಲೇಬೇಕು ಎಂದು ಅವರು ನಂಬಿದ್ದರು.

ಗಾಂಧಿ ಆಶ್ರಮದಲ್ಲಿ ಆಹಾರವು ಗಾಂಧಿಯವರ ಕಟ್ಟುನಿಟ್ಟಿನ ಮೇಲ್ವಿಚಾರಣೆಯಲ್ಲಿ ನಡೆಯುತ್ತಿತ್ತು. ಬೇವಿನ ಚಟ್ನಿ ಮತ್ತು ಒಂದು ತುಂಡು ನಿಂಬೆ ಹಣ್ಣು ಎಲೆಯ ಮೇಲೆ ಬಿದ್ದ ನಂತರ ಚಪಾತಿ, ಅನ್ನ ಹಸಿ ತರಕಾರಿ, ಬೇಯಿಸಿದ ಪಲ್ಯಗಳನ್ನು ಬಡಿಸಲಾಗುತ್ತಿತ್ತು. ಲಭ್ಯವಿದ್ದಾಗ ಹಣ್ಣುಗಳ ಚೂರುಗಳೂ ಇರುತ್ತಿದ್ದವು. ಸಮೂಹ ಪಾಕಶಾಲೆಯ ಪರವಾಗಿದ್ದ ಗಾಂಧಿ ಯಾರೊಬ್ಬರ ನಿರ್ದಿಷ್ಟ ರುಚಿಗಾಗಿ ಅಡುಗೆ ತಯಾರಾಗುವುದನ್ನು ಇದು ತಡೆಯುತ್ತದೆ ಎಂದು ನಂಬಿದ್ದರು. ಆಹಾರ ಮತ್ತು ವಸತಿ ಬಿಟ್ಟು ಇನ್ನಾವ

ಅಗತ್ಯಗಳೂ ಇಲ್ಲದವರು ಮಾತ್ರ ಆಶ್ರಮವಾಸಿಗಳಾಗಲು ಅರ್ಹರಾಗಿದ್ದುದರಿಂದ ಆಶ್ರಮದ ಆಹಾರದ ಬಗ್ಗೆ ಯಾರದೇ ತಕರಾರಿಗೆ ಅವಕಾಶವಿರಲಿಲ್ಲ. ಆದರೂ ಹೊಸದಾಗಿ ಮದುವೆಯಾಗಿ ಗಾಂಧಿ ಕುಟುಂಬಕ್ಕೆ ಸೇರಿಕೊಂಡ ಸೊಸೆಯಂದರಿಗೆ ಇದು 'ತಿನ್ನಲರ್ಹವಲ್ಲದ' ಆಹಾರವಾಗಿ ಕಂಡದ್ದೂ ಉಂಟು! ಮಣಿಲಾಲರ ಪತ್ನಿ ಸುಶೀಲ ಮೊದಲ ಬಾರಿಗೆ ಸಬರ್ಮತಿ ಆಶ್ರಮದಲ್ಲಿ ಊಟಕ್ಕೆ ಕೂತಾಗ ಒಣರೊಟ್ಟಿ, ಬೇಯಿಸಿದ ಬದನೆಕಾಯಿ ಮತ್ತು ಬೀಟ್‌ರೂಟ್ ಹಾಗೂ ಎಂಥದೋ ತರಕಾರಿ ಚೂರೊಂದು ತೇಲುತ್ತಿದ್ದ ಸಾರನ್ನು ಕಂಡು ಹೌಹಾರಿ 'ಅಂದು ಊಟವನ್ನು ಔಷಧಿಯಂತೆ ತಿಂದೆ' ಎಂದು ಒಂದೆಡೆ ಬರೆದುಕೊಂಡಿದ್ದಾರೆ. ಗಾಂಧಿ ನಿರೀಕ್ಷಿಸುತ್ತಿದ್ದುದೂ ಅದನ್ನೇ ತಾನೆ? ಆದರೆ ಇದೇ ಸುಶೀಲರ ಮಗಳು ಇಳಾ ಮಗುವಾಗಿದ್ದಾಗ ಸೇವಾಗ್ರಾಮದಲ್ಲಿ ಹಲವು ದಿನಗಳು ಊಟ ಮಾಡಿ ಅದರಲ್ಲಿ ದಿನವೂ ಸೋರೇಕಾಯಿ ಇರುತ್ತಿದ್ದುದನ್ನು ಕಂಡು, ಒಂದು ದಿನ ಗಾಂಧಿಯನ್ನು ಹೀಗೆ ಚುಡಾಯಿಸಿದಳು: "ಈ ಸತ್ಯಾಗ್ರಹ ಆಶ್ರಮದ ಹೆಸರನ್ನು ಸೋರೇಕಾಯಿ ಆಶ್ರಮವೆಂದು ಬದಲಾಯಿಸುವುದು ಒಳ್ಳೆಯದು!" ಇದನ್ನು ಕೇಳಿ ನಕ್ಕ ಗಾಂಧಿ ಆಶ್ರಮದ ಮೇಲ್ವಿಚಾರಕರಿಗೆ ಮುಂದಿನ ದಿನಗಳಲ್ಲಿ ಬೇರೆ ಕಾಯಿಗಳನ್ನು ತಂದು ಪೂರೈಸುವಂತೆ ಸೂಚಿಸಿದರು!

ಆದರೆ ಗಾಂಧಿ ತಮ್ಮ ಈ ಆಹಾರ ಪದ್ಧತಿಯೇ ಶ್ರೇಷ್ಠವೆಂದು ಎಂದೂ ಪ್ರತಿಪಾದಿಸಲಿಲ್ಲ ಮತ್ತು ಯಾರ ಮೇಲೂ ಅದನ್ನು ಹೇರಲಿಲ್ಲ. ಹೇರಲು ಪ್ರಯತ್ನಿಸಿದ ತಮ್ಮ ಅನುಯಾಯಿ ಗಳಿಗೆ ಹಾಗೆ ಮಾಡದಂತೆ ಸೂಚಿಸಿದರು ಕೂಡ. ಅವರು ಪೂರ್ಣ ಸಸ್ಯಾಹಾರಿಯಾಗಿದ್ದರೂ ಕೂಡ ಮಾಂಸಾಹಾರಿಗಳ ನಂಬಿಕೆಯನ್ನು ಗೌರವಿಸುತ್ತಿದ್ದರು. ಗೋ ರಕ್ಷಣೆ ಪ್ರತಿ ಹಿಂದೂವಿನ ಕರ್ತವ್ಯ ಎಂದು ಭಾವಿಸುವವರು, ಅದರ ರಕ್ಷಣೆಗಾಗಿ ಅಗತ್ಯವೆನಿಸಿದರೆ ತನ್ನ ಪ್ರಾಣವನ್ನು ತೆರಬೇಕೇ ಹೊರತು ಇತರರ ಪ್ರಾಣವನ್ನು ತೆಗೆದುಕೊಳ್ಳುವುದು ಹಿಂದೂ ಧರ್ಮಕ್ಕೆ ವಿರುದ್ಧವಾದದ್ದು ಎಂದು ಅವರು ನಂಬಿದ್ದರು. ಅವರು ತಮ್ಮ ಆಶ್ರಮಕ್ಕೆ ಬಂದು ತಂಗಿದ್ದ ಮುಸ್ಲಿಂ ಅತಿಥಿಯೊಬ್ಬರಿಗೆ ಮುಸ್ಲಿಂ ಹಬ್ಬವೊಂದರ ದಿನ ಮಾಂಸ ತರಿಸಿ ಅವರ ಭೋಜನಕ್ಕೆ ಅನುಕೂಲ ಮಾಡಿಕೊಟ್ಟದ್ದೂ ಉಂಟು. ಆಶ್ರಮದೊಳಕ್ಕೆ ಎಂದೂ ಗಿರಣಿ ಸಕ್ಕರೆ ಪ್ರವೇಶಿಸಬಾರದೆಂದು ಆಜ್ಞೆ ಮಾಡಿದ್ದ ಗಾಂಧಿ,

ಈ ಆಜ್ಞೆ ಕಸ್ತೂರಬಾ ಅಲ್ಲಿರುವವರೆಗೆ ಕಟ್ಟುನಿಟ್ಟಾಗಿ ಜಾರಿಯಾಗುವಂತಿಲ್ಲ ಎಂದೂ ಸೂಚಿಸಿದ್ದರು! ಏಕೆಂದರೆ ಕಸ್ತೂರಬಾ ಆಶ್ರಮದಲ್ಲಿ ತಮ್ಮದೇ ಒಂದು ಪುಟ್ಟ ಖಾಸಗಿ ಅಡುಗೆ ಮನೆ ಮಾಡಿಕೊಂಡು ತಮ್ಮ ಮೊಮ್ಮಕ್ಕಳಿಗೆ ಮತ್ತು ಆಶ್ರಮದ ಇತರ ಮಕ್ಕಳಿಗೆ ಸಿಹಿ ತಿಂಡಿ ಮಾಡಿಕೊಡುವ ಅಭ್ಯಾಸವನ್ನಿಟ್ಟುಕೊಂಡಿದ್ದರು. ಇದಕ್ಕೆ ಗಾಂಧೀಜಿಯ ನಿಷೇಧ ಇರಲಿಲ್ಲ! ಕಸ್ತೂರಬಾ ಒಮ್ಮೆ ತೀವ್ರ ಅಸ್ವಸ್ಥರಾದಾಗ ಗಾಂಧಿ ಅವರಿಗೆ ಬೇಳೆ ಮತ್ತು ಉಪ್ಪನ್ನು ಬಿಡಲು ಸೂಚಿಸುತ್ತಾರೆ. ಗಾಂಧಿಯ ಇಂತಹ ಆಹಾರ ನಿರ್ಬಂಧಗಳಿಂದ ಬೇಸತ್ತು ಹೋಗಿದ್ದ ಕಸ್ತೂರಬಾ ಗಾಂಧಿಗೆ 'ಒಮ್ಮೆ ನೀವು ಬಿಟ್ಟು ತೋರಿಸಿ' ಎಂದು ಸವಾಲೆಸೆದರು. ಗಾಂಧಿ ಅವನ್ನು ಒಂದು ವರ್ಷದ ಕಾಲ ತ್ಯಜಿಸಿ ತಮ್ಮ ಸಂಯಮ ಬಲದ ಪ್ರದರ್ಶನ ಮಾಡಿ ಕಸ್ತೂರಬಾರ ಬಾಯಿ ಮುಚ್ಚಿಸಿದರಷ್ಟೇ ಅಲ್ಲ, ಆರೋಗ್ಯದ ದೃಷ್ಟಿಯಿಂದ ಅವನ್ನು ಮತ್ತೆ ಸೇವಿಸಲಾರಂಭಿಸುವಂತೆ ತಮ್ಮನ್ನು ಅವರು ಗೋಗರೆಯುವಂತೆ ಮಾಡಿದರು!

–೪–

ಗಾಂಧೀಜಿಯ ಈ ಅಸ್ವಾದ ವ್ರತ ನಮಗೆ ಇಂದು ಈ ಜಾಗತೀಕರಣದ ದಿನಗಳಲ್ಲಿ ಪ್ರಸ್ತುತವಾಗುವುದು, ಅದರ ಅಕ್ಷರಶಃ ಅರ್ಥದ ನೆಲೆಯಲ್ಲಲ್ಲ. ಅದರ ರೂಪಕಾರ್ಥದಲ್ಲಿ. ಅಸ್ವಾದ ಎಂದರೆ ಬದುಕಿನ ಸಮತೋಲನಕ್ಕೆ ಅಗತ್ಯವಾದ ಒಂದು ಸಂಯಮ, ಒಂದು ಮಿತಿ, ಸಾಕು ಅಥವಾ ಬೇಡ ಅನ್ನುವ ವಿವೇಕ ಎಂದು ನಾವು ಅರ್ಥೈಸಬಹುದಾದರೆ, ಅದನ್ನು ಆಧುನಿಕ ನಾಗರೀಕತೆ ತನ್ನ ಉತ್ತುಂಗವನ್ನು ಮುಟ್ಟಿರುವ ಇಂದಿನ ಜಾಗತೀಕರಣ ಹುಟ್ಟಿಸಿರುವ ಸುಖ-ಭೋಗಗಳ ಪ್ರಳಯವನ್ನು ತಹಬಂದಿಗೆ ತರುವ ಸಾಂಸ್ಕೃತಿಕ ಅಸ್ತ್ರವಾಗಿ ಪರಿಣಾಮಕಾರಿಯಾಗಿ ಬಳಸಬಹುದು. ಗಾಂಧಿವಾದಿಯಾದ ಸಮಾಜವಾದಿ ಚಿಂತಕ ರಾಮಮನೋಹರ ಲೋಹಿಯಾ ಆಧುನಿಕ ನಾಗರೀಕತೆಯ ಬದುಕಿನ ಮಾದರಿಯನ್ನು ಸದಾ ಏರುತ್ತಾ ಹೋಗುವ ಜೀವನಶೈಲಿ ಎಂದು ಗುರುತಿಸಿ, ಇದು ಭಾರತದಂತಹ ವಸಾಹತುಶಾಹಿ ರಾಜಕಾರಣದಿಂದ ಶೋಷಿತವಾದ ರಾಷ್ಟ್ರಗಳಿಗೆ ಮಾರಕವೆಂದು ಹೇಳುತ್ತಿದ್ದರು. ಆದರೆ ಈ ಮಾದರಿ ಭಾರತದಂತಹ ದೇಶಗಳಿಗೆ ಮಾತ್ರವಲ್ಲ, ಅದು ಮಾಡುತ್ತಿರುವ ಜೀವ ಪರಿಸರ ನಾಶದಿಂದಾಗಿ ಇಡೀ ಜಗತ್ತಿಗೇ ಮಾರಕವಾಗುತ್ತಿದೆ ಎಂಬುದು ಇಂದು

ಸ್ಪಷ್ಟವಾಗುತ್ತಿದೆ. ಇದನ್ನೇ ಗಾಂಧಿ ಈ ಭೂಮಿ ಎಲ್ಲರ ಅಗತ್ಯಗಳನ್ನು ಮಾತ್ರ ಪೂರೈಸಬಲ್ಲುದೇ ಹೊರತು ಎಲ್ಲರ ಆಸೆಗಳನ್ನಲ್ಲ ಎಂದು ಹೇಳಿದ್ದುದು. ಇದನ್ನು ಆಗ ಗಾಂಧಿಯ ಕನಿಷ್ಠ ಅಗತ್ಯಗಳ ಸಂತ ಜೀವನದ ಪ್ರತಿಪಾದನೆಯ ಮಾತೆಂದು ಕೆಳಾರ್ಥ ಮಾಡಿಕೊಂಡಿದ್ದ ಜಗತ್ತು ಈಗ ಅದರ ಪೂರ್ಣಾರ್ಥಕ್ಕೆ ತೆರೆದುಕೊಳ್ಳುತ್ತಿದೆ. ಪೂರ್ಣಾರ್ಥದ ಅನಾವರಣದ ಭಾಗವಾಗಿಯೇ, ಇಂದು ನಾವು ಪಶ್ಚಿಮದ ಸದಾ ಏರುತ್ತಾ ಹೋಗುವ ಜೀವನ ಮಟ್ಟದ ಬದುಕಿನ ಮಾದರಿಗೆ ಪ್ರತಿಯಾಗಿ ಲೋಹಿಯಾ ಪ್ರತಿಪಾದಿಸಿದ್ದ ಒಂದು ಸರಳ ಸಭ್ಯ ಜೀವನ ಮಟ್ಟದ ಅರ್ಥ ನಿರೂಪಣೆ ಮಾಡಬೇಕಿದೆ. ಅಂದರೆ, ಜಾಗತೀಕರಣದ ಮಿತಿ ಇಲ್ಲದ ಹೊಸ ಉಪಭೋಗಗಳಿಂದ ಮೈಮರೆಯುತ್ತಿರುವ ಭಾರತದಂತಹ ದೇಶಗಳು ಗಾಂಧಿಯ ಅಸ್ವಾದ ವ್ರತವನ್ನು ಮಿತಿಗಳುಳ್ಳ ಬದುಕು ಎಂಬ ವ್ರತವಾಗಿ ಮಾರ್ಪಡಿಸಿಕೊಂಡು ಜಾಗತೀಕರಣದ ರಾಜಕಾರಣವನ್ನು ಎದುರಿಸ ಬೇಕಿದೆ. ಈ ಮಿತಿಗಳು ಕೊರತೆಗಳಲ್ಲ. ಮತ್ತು ಲೌಕಿಕ ಅಗತ್ಯಗಳಿಗೆ ಮಾತ್ರ ಸೀಮಿತವಾಗಿ ಉಳಿಯುವವೂ ಅಲ್ಲ. ಅದೊಂದು ಜೀವನ ಮೀಮಾಂಸೆಯಾಗಿ ಬೆಳೆದು ತನ್ನದೇ ಸೌಂದರ್ಯಶಾಸ್ತ್ರವನ್ನು ಸೃಷ್ಟಿಸಿಕೊಳ್ಳಬಲ್ಲದ್ದು ಕೂಡ.

ಹೇಗೂ ಮಿತಿಗಳುಳ್ಳ ಬದುಕಿನ ಮಾದರಿ ನಮ್ಮ ಪಾರಂಪರಿಕ ಬದುಕಿನ ಮಾದರಿಗಳಲ್ಲೊಂದು. ಶ್ರೀರಾಮ ಇಂತಹ ಬದುಕಿನ ಮಾದರಿಯ ಸೌಂದರ್ಯಕ್ಕೊಂದು ಪ್ರತೀಕವಾಗಿದ್ದು, ಆಧುನಿಕ ಕಾಲದಲ್ಲಿ ಗಾಂಧಿ ಈ ಮಾದರಿಯ ಸೌಂದರ್ಯಕ್ಕೆ ಪ್ರತೀಕವಾಗಿದ್ದರೆಂದು ಲೋಹಿಯಾ ವಿಶ್ಲೇಷಿಸಿರುವುದನ್ನು ನಾವು ಗಮನಿಸಬಹುದು. (ಅವರ 'ರಾಮ, ಕೃಷ್ಣ, ಶಿವ' ಲೇಖನವನ್ನು ಓದಿ). ಹಾಗಾಗಿ ಇಂದು ಗಾಂಧಿಯವರ ಅಸ್ವಾದ ವ್ರತವನ್ನು ಜಾಗತೀಕರಣದ ವಿರುದ್ಧ 'ಮಿತಿಗಳುಳ್ಳ ಬದುಕಿನ ಮಾದರಿ'ಯ ಪರವಾದ ಸತ್ಯಾಗ್ರಹದ ಮೂಲಭಿತ್ತಿಯನ್ನಾಗಿ ಅಭಿವೃದ್ಧಿಪಡಿಸಬಹುದಾಗಿದೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುವೆ. ನಮಸ್ಕಾರ.

ಅನುಬಂಧ:

ಬದುಕಿನ ಮಿತಿ ಎಂದರೇನು? : ಒಂದು ಉಪಕಥೆ:

ಗಾಂಧಿ ಅಸ್ವಾದದ ವಿಸ್ತರಣೆಯಾಗಿ ನಂಬಿದ್ದ ಮಿತಿಗಳುಳ್ಳ

ಬದುಕು ಎಂಬುದರಲ್ಲಿನ ಮಿತಿಯ ಅರ್ಥ ಏನು ಎಂಬುದನ್ನು ವಿಶದಪಡಿಸಲು ಅವರದೇ ಬದುಕಿನ ಒಂದು ಉದಾಹರಣೆ ಕೊಡಬಹುದು: ಗಾಂಧಿ ಒಮ್ಮೆ ಹಡಗಿನಲ್ಲಿ ಪಯಣಿಸುತ್ತಿದ್ದಾಗ ಹಡಗಿನ ಒಂದು ಕಡೆ ಜನ ಸೇರಿದ್ದುದನ್ನು ಗಮನಿಸಿ ಕಾರಣವೇನೆಂದು ಕೇಳಿದರಂತೆ. ಅದಕ್ಕೆ ಆ ಜನ ಸೇರಿಸಿದ್ದ ಮನುಷ್ಯ, ಈಗ ದೂರದರ್ಶಕವೆಂಬುದೊಂದು ವೈಜ್ಞಾನಿಕ ಸಾಧನ ಬಂದಿದೆ. ಅದರಲ್ಲಿ ನೋಡಿದರೆ ಬರಿಗಣ್ಣಿಗೆ ಕಾಣದ ದೂರಾಕಾಶದ ವಸ್ತುಗಳೆಲ್ಲ ಕಾಣುತ್ತವೆ ಎಂದು ಹೇಳುತ್ತಾ, ಗಾಂಧಿಯನ್ನೂ ಅದಕ್ಕಾಗಿ ಆಹ್ವಾನಿಸಿದನಂತೆ. ಅದಕ್ಕೆ ಗಾಂಧಿ. ತಣ್ಣಗೆ 'ಬರಿಗಣ್ಣಿಗೆ ಕಾಣುವ ಜಗತ್ತೇ ನನಗೆ ಇನ್ನೂ ಅರ್ಥವಾಗಿಲ್ಲ. ಹೀಗಿರುವಾಗ ಇನ್ನು ಅದರಾಚೆಗಿನ ಜಗತ್ತಿನ ಗೊಡವೆ ನನಗೇಕೆ?' ಎಂದು ಹೇಳಿ ಮುಂದೆ ಹೋದರಂತೆ. ಹಾಗೆಂದು ಅವರೇನೂ ದೂರದರ್ಶಕದ ಉಪಯೋಗ ಅಥವಾ ಬಳಕೆಯನ್ನು ವಿರೋಧಿಸಲಿಲ್ಲ. ಆದರೆ ಅದು ತನ್ನ ಬದುಕಿನ ಗುರಿಗೆ, ಅರ್ಥ ನಿರೂಪಣೆಗೆ, ಪರಿಹಾರಗಳಿಗೆ ಅಗತ್ಯವಿಲ್ಲವೆಂದಷ್ಟೇ ತೀರ್ಮಾನಿಸಿದರು. ಇದು ಪ್ರತಿ ಮನುಷ್ಯನೂ ತನ್ನ ಮಿತಿಯನ್ನು ಅರಿತು ಗುರುತಿಸಿಕೊಂಡು ತನ್ನದೇ ನೆಮ್ಮದಿಯೊಂದಿಗೆ ಬದುಕುವ ಮಾದರಿಗೆ ಒಂದು ಉದಾಹರಣೆಯಾಗಬಹುದೇನೋ!

(ಇದು ಮಣಿಪಾಲ ವಿಶ್ವವಿದ್ಯಾಲಯದ ಡಾ.ಟಿ.ಎಂ.ಎ. ಪೈ ಭಾರತೀಯ ಸಾಹಿತ್ಯ ಪೀಠದ ಆಶ್ರಯದಲ್ಲಿ ಮಣಿಪಾಲದಲ್ಲಿ ೨೦೧೭ರ ಫೆಬ್ರುರಿ ೨೫ ಹಾಗೂ ೨೬ರಂದು 'ಅಡುಗೆಮನೆ ಜಗತ್ತು' ಎಂಬ ವಿಷಯವಾಗಿ ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಆಡಿದ ಮಾತುಗಳ ವಿಸ್ತೃತ ಲೇಖನ ರೂಪ; 'ಮಾತುಕತೆ' : ೧೨೧–೧೨೨ರಲ್ಲಿ ಪ್ರಕಟ.)

ಗಾಂಧಿ ಚರಿತ್ರೆ...

ಗಾಂಧಿಯವರ ಮೊಮ್ಮಗ ಗೋಪಾಲ ಕೃಷ್ಣ ಗಾಂಧಿ ತಮ್ಮ ತಾತನ ಸಮಗ್ರ ಸಾಹಿತ್ಯವನ್ನೊಮ್ಮೆ ಅವಲೋಕಿಸಿ, ಅವುಗಳಿಂದಾಯ್ದ ಪುಟ್ಟ ಪುಟ್ಟ ಭಾಗಗಳ ಆಧಾರದ ಮೇಲೆ ಅವರ ವ್ಯಕ್ತಿತ್ವವನ್ನು ಕಟ್ಟಿಕೊಡುವ ಪುಸ್ತಕ ರೂಪದ ಪ್ರಯತ್ನವೊಂದನ್ನು ಮಾಡಿದ್ದಾರೆ. ಆ ಪುಸ್ತಕದ (The Oxford India Gandhi: Essential Writings) ಕೆಲವು ಭಾಗಗಳನ್ನು ಆಯ್ದು ಇಲ್ಲಿ ಅನುವಾದಿಸಿ ಕೊಡುತ್ತಿದ್ದೇನೆ. ಇದರ ಮೂಲಕ ಬದುಕಿನ ಸಣ್ಣ–ಸಾಮಾನ್ಯ ವಿವರಗಳಲ್ಲೇ ಗಾಂಧಿ ನಿಜವಾಗಿ ಏನಾಗಿದ್ದರು ಎಂಬುದು ವ್ಯಕ್ತವಾಗಿರುವ ರೀತಿ ನೀತಿಗಳನ್ನು ನಿಮ್ಮೊಂದಿಗೆ ಅರ್ಥ ಮಾಡಿಕೊಳ್ಳಲು ಪ್ರಯತಿಸುತ್ತಿದ್ದೇನೆ.–ಲೇ.

ದರ್ಬಾನ್, ೧೮೯೮:

ಮನೆಯನ್ನು ಪಾಶ್ಚಿಮಾತ್ಯ ಮಾದರಿಯಲ್ಲಿ ಕಟ್ಟಲಾಗಿತ್ತು. ಶೌಚದ ನೀರು ಹೊರ ಹೋಗಲು ದಾರಿಯೇ ಇಲ್ಲವಾಗಿತ್ತು. ಹಾಗಾಗಿ ಪ್ರತಿಯೊಂದು ಕೊಠಡಿಯಲ್ಲೂ ಒಂದು ಮಲದ ಮಡಕೆ ಇಡಲಾಗಿತ್ತು. ಇವುಗಳನ್ನು ತೊಳೆಯುವ ಕೆಲಸವನ್ನು ಸೇವಕರಿಗೆ ಅಥವಾ ಭಂಗಿಗಳಿಗೆ ಬಿಡದೆ, ನಾವೇ ಮಾಡಿಕೊಳ್ಳುತ್ತಿದ್ದೆವು. ಬಹಳ ದಿನಗಳಿಂದ ಮನೆಯಲ್ಲೇ ಇದ್ದು ನಮ್ಮವರೇ ಆದವರು ತಂತಮ್ಮ ಮಡಕೆಗಳನ್ನು ತಾವೇ ಸ್ವಚ್ಛಗೊಳಿಸಿಕೊಳ್ಳುತ್ತಿದ್ದರು. ಆದರೆ ಹೊಸದಾಗಿ ಬಂದ ಕ್ರಿಶ್ಚಿಯನ್ ಗೆಳೆಯರೊಬ್ಬರ ಮಲಗುವ ಕೋಣೆಯನ್ನು ಸ್ವಚ್ಛಗೊಳಿಸುವುದು ನಮ್ಮದೇ ಕರ್ತವ್ಯವಾಗಿತ್ತು. ಆವರೆಗೆ ಇತರರ ಮಲದ ಮಡಕೆಗಳನ್ನು ಸ್ವಚ್ಛಗೊಳಿಸಲು ಅಷ್ಟೇನೂ ಹಿಂಜರಿಯದಿದ್ದ ನನ್ನ ಪತ್ನಿಗೆ ಈ ಅನ್ಯಮತದ ಪಂಚಮನ ಮಡಕೆಯನ್ನು ಸ್ವಚ್ಛಗೊಳಿಸುವುದು ತನಗೆ ಆಗದ ಕೆಲಸವಾಗಿ ಕಂಡಿತು. ತಾನು ಮಾಡುವುದಿರಲಿ, ನಾನು ಮಾಡುವುದೂ ಆಕೆಗೆ ಸಹ್ಯವಾಗಲಿಲ್ಲ. ಕೊನೆಗೆ ಆಕೆಯೇ ಅಂದು ನನ್ನನ್ನು ಶಪಿಸುತ್ತಾ, ದುಃಖದಿಂದ ಕೆಂಪಾದ ಕಣ್ಣುಗಳಿಂದ

ಅಶ್ರುಧಾರೆ ಹರಿಸುತ್ತಾ ಕೈಯಲ್ಲಿ ಮಡಕೆ ಹಿಡಿದು ಏಣಿ ಇಳಿಯುತ್ತಿದ್ದ ದೃಶ್ಯ ಇನ್ನೂ ನನಗೆ ಕಣ್ಣಿಗೆ ಕಟ್ಟಿದಂತಿದೆ.

ಆಕೆ ಮಡಕೆಯನ್ನು ಹಿಡಿದು ಹೊರಟಿವುದರಷ್ಟರಿಂದಲೇ ನನಗೆ ಸಮಾಧಾನವೆಂಬುದೇನೂ ಉಂಟಾಗಲಿಲ್ಲ. ಆಕೆ ಅದನ್ನು ಸಂತೋಷದಿಂದ ಮಾಡಬೇಕೆಂದು ನಾನು ಬಯಸಿದ್ದೆ. ಹಾಗಾಗಿ ನಾನು ದನಿ ಎತ್ತರಿಸಿ ಕೂಗಿ ಹೇಳಿದೆ: 'ಈ ತಲೆ ಹರಟೆಯನ್ನು ನನ್ನ ಮನೆಯಲ್ಲಿ ಸಹಿಸಲಾರೆ'.

ನನ್ನೀ ಮಾತುಗಳು ಆಕೆಯನ್ನು ಬಾಣದಂತೆ ಚುಚ್ಚಿದವು. ಅವಳು ನನ್ನತ್ತ ತಿರುಗಿ ಕಿರುಚಿ ಹೇಳಿದಳು: 'ನಿಮ್ಮ ಮನೆಯನ್ನು ನೀವೇ ಇಟ್ಟುಕೊಳ್ಳಿ. ನಾನು ಹೋಗುವೆ'. ನನ್ನ ಮೈ ಮೇಲಿನ ಪ್ರಜ್ಞೆ ಹಾರಿ ಹೋಯಿತು. ನನ್ನಲ್ಲಿ ಕರುಣೆ ಎಂಬುದು ಬತ್ತಿ ಹೋಯಿತು. ನಾನು ಅವಳ ಕೈ ಹಿಡಿದು, ಆ ಅಸಹಾಯಕ ಹೆಂಗಸನ್ನು ಹೊರ ದಬ್ಬಲು ಏಣಿಯ ಎದುರಿಗಿದ್ದ ಬಾಗಿಲ ಕಡೆ ಧಾವಿಸಿದೆ. ಅವಳ ಕೆನ್ನೆಗಳ ಮೇಲೆ ಧಾರಾಕಾರವಾಗಿ ಕಣ್ಣೀರು ಸುರಿಯುತ್ತಿತ್ತು. ಆಕೆ ನನ್ನತ್ತ ಮತ್ತೆ ಕಿರುಚಿ ಹೇಳಿದಳು:' ನಿಮಗೆ ನಾಚಿಕೆಯಾಗುವುದಿಲ್ಲವೇ? ಎಲ್ಲಿಗೆ ಹೋಗಲಿ ನಾನು? ಯಾರಿದ್ದಾರೆ ನನ್ನವರೆಂಬುವರು ಇಲ್ಲಿ? ನಿಮ್ಮ ಹೆಂಡತಿಯಾದ ಮಾತ್ರಕ್ಕೆ ನಿಮ್ಮ ಎಲ್ಲ ದುಂಡಾವರ್ತಿಗಳನ್ನು ಸಹಿಸಿಕೊಳ್ಳಬೇಕೇ? ಮೊದಲು ಬಾಗಿಲು ಹಾಕಿ. ನನ್ನೊಂದಿಗೆ ಸರಿಯಾಗಿ ನಡೆದುಕೊಳ್ಳುವುದನ್ನು ಕಲಿಯಿರಿ.'

ನಾನು ಏನೂ ಆಗದವನಂತೆ ದಿಟ್ಟನಾಗಿ ನಿಂತಿದ್ದರೂ, ಒಳಗೆ ನಿಜವಾಗಿಯೂ ನಾಚಿಕೆ ಆರಂಭವಾಗಿತ್ತು. ಬಾಗಿಲು ಮುಚ್ಚಿದೆ. ನನ್ನ ಹೆಂಡತಿ ನನ್ನನ್ನು ಬಿಟ್ಟು ಇರಲಾರದವಳಾದರೆ, ನಾನೂ ಅವಳನ್ನು ಬಿಟ್ಟು ಇರಲಾರೆ.

ಕಲ್ಕತ್ತಾ, ಡಿಸೆಂಬರ್, ೧೯೦೧-೦೨

ಕಾಂಗ್ರೆಸ್ ಅಧಿವೇಶನ ಆರಂಭವಾಗಲು ಇನ್ನೂ ಎರಡು ದಿನಗಳು ಬಾಕಿ ಇದ್ದವು. ಸ್ವಲ್ಪ ಅನುಭವ ಗಳಿಸಲು ನಾನು ಕಾಂಗ್ರೆಸ್ ಕಛೇರಿಯಲ್ಲಿ ಸೇವೆ ಸಲ್ಲಿಸಲು ನಿಶ್ಚಯಿಸಿದ್ದೆ. ಬಾಬು ಭೂಪೇಂದ್ರನಾಥ ಬಸು ಹಾಗೂ ಸಾರ್ಜೆಂಟ್ ಘೋಷಾಲ್ ಕಾರ್ಯದರ್ಶಿಗಳಾಗಿದ್ದರು. ನಾನು ಭೂಪೇನ್ ಬಾಬು ಬಳಿ ಹೋಗಿ ನನ್ನ ಉದ್ದೇಶವನ್ನು ತಿಳಿಸಿದೆ. ಅವರು ನನ್ನನ್ನೊಮ್ಮೆ ನೋಡಿ, 'ನನ್ನ ಬಳಿ ಕೆಲಸವಿಲ್ಲ. ಬಹುಶಃ ಘೋಷಾಲ್ ಬಾಬು

ನಿಮಗೆ ಸ್ವಲ್ಪ ಕೆಲಸ ಕೊಡಬಹುದು. ಅವರನ್ನು ಕಾಣಿರಿ' ಎಂದರು. ನಾನು ಅವರ ಬಳಿಗೆ ಹೋದೆ. ಅವರು ನನ್ನನ್ನು ಮೇಲಿನಿಂದ ಕೆಳಗಿನವರೆಗೆ ಒಮ್ಮೆ ನೋಡಿ ಮುಗುಳ್ನಗುತ್ತಾ, 'ನಿಮಗೆ ನಾನು ಗುಮಾಸ್ತ ಮಾಡುವಂತಹ ಕೆಲಸ ಕೊಡಬಲ್ಲೆ. ಮಾಡುವಿರಾ?' ಎಂದು ಕೇಳಿದರು.

ನಾನು, 'ಖಂಡಿತ. ನನ್ನ ಕೈಯಿಂದ ಆಗದ ಕೆಲಸದ ಹೊರತಾಗಿ ಯಾವ ಕೆಲಸವನ್ನಾದರೂ ಮಾಡಲೆಂದೇ ನಾನಿಲ್ಲಿ ಬಂದಿರುವೆ' ಎಂದೆ.

.....ಸಾ॥ ಘೋಷಾಲ್ ತಮ್ಮ ಅಂಗಿಯ ಗುಂಡಿಗಳನ್ನು ತಮ್ಮ ಸೇವಕನಿಂದ ಹಾಕಿಸಿಕೊಳ್ಳುತ್ತಿದ್ದರು. ಹಿರಿಯರ ಬಗೆಗೆ ನನಗೆ ಯಾವಾಗಲೂ ಗೌರವವಿದ್ದುದರಿಂದ, ನಾನು ಆ ಸೇವಕನ ಕೆಲಸ ಮಾಡುವುದಾಗಿ ಹೇಳಿದೆ. ನನಗೆ ಅದು ಇಷ್ಟದ ಕೆಲಸವೂ ಆಗಿತ್ತು. ಇದು ಗೊತ್ತಾದ ಮೇಲೆ ಅವರು ನನ್ನಿಂದ ಇಂತಹ ಅನೇಕ ವೈಯುಕ್ತಿಕ ಸೇವೆಗಳನ್ನು ಪಡೆಯಲು ಹಿಂಜರಿಯಲಿಲ್ಲ. ಬದಲಾಗಿ ಸಂತೋಷ ಪಟ್ಟರು. ತಮ್ಮ ಅಂಗಿ ಗುಂಡಿ ಹಾಕಲು ಹೇಳುತ್ತಾ ಅವರು, 'ನೋಡಿ, ಕಾಂಗ್ರೆಸ್ ಕಾರ್ಯದರ್ಶಿಗೆ ತನ್ನ ಅಂಗಿಯ ಗುಂಡಿಗಳನ್ನು ಹಾಕಿಕೊಳ್ಳಲೂ ಪುರುಸೊತ್ತಿಲ್ಲದಾಗಿದೆ. ಯಾವಾಗ ನೋಡಿದರೂ ಏನಾದರೂ ಕೆಲಸವಿರುತ್ತದೆ' ಎನ್ನುತ್ತಿದ್ದರು. ಸಾ॥ ಘೋಷಾಲರ ಈ ಭೋಳೆತನ ನನ್ನಲ್ಲಿ ಕೊಂಚ ನಗು ಉಕ್ಕಿಸುತ್ತಿತಾದರೂ, ಈ ತರಹದ ಸೇವೆ ಪಡೆಯುತ್ತಿದ್ದ ಕಾರಣದಿಂದಾಗಿ ಅವರ ಬಗ್ಗೆ ನನಗೆ ಬೇಸರವೇನೂ ಆಗಲಿಲ್ಲ.

ಕಾಶಿ, ಫೆಬ್ರವರಿ, ೧೯೦೨

ನಾನು ದರ್ಶನಕ್ಕಾಗಿ ಕಾಶಿ ವಿಶ್ವನಾಥ ಮಂದಿರಕ್ಕೆ ಹೋಗಿದ್ದೆ. ... ದಕ್ಷಿಣೆ ಕೊಡಲು ಮನಸ್ಸಿಲ್ಲದಿದ್ದರೂ, ಮೂರು ಕಾಸು ತಟ್ಟೆಗೆ ಹಾಕಿದೆ. ಪಂಡನಿಗೆ ಸಿಟ್ಟು ಬಂದು ಅದನ್ನು ನನ್ನತ್ತ ಎಸೆದುಬಿಟ್ಟ. ಅಲ್ಲದೆ, 'ನನಗೆ ನೀನು ಮಾಡಿದ ಅವಮಾನ ನಿನ್ನನ್ನು ನೇರವಾಗಿ ನರಕಕ್ಕೇ ಒಯ್ಯುತ್ತದೆ' ಎಂದು ಶಪಿಸಿದ. ಇದನ್ನು ಮನಸ್ಸಿಗೆ ಹಚ್ಚಿಕೊಳ್ಳದ ನಾನು, 'ನನ್ನ ವಿಧಿ ಹೇಗೇ ಇರಲಿ ಮಹಾರಾಜ್, ನೀವು ಬಳಸುತ್ತಿರುವ ಭಾಷೆ ನಿಮಗೆ ಶೋಭಿಸುವುದಿಲ್ಲ' ಎನ್ನುತ್ತಾ, 'ನಿಮಗೆ ಇಷ್ಟವಾದರೆ ಈ ಮೂರು ಕಾಸು ತೆಗೆದುಕೊಳ್ಳಿ. ಇಲ್ಲದೇ ಹೋದರೆ, ಅದನ್ನೂ ನೀವು ಕಳೆದುಕೊಳ್ಳುತ್ತೀರಿ' ಎಂದು ಎಚ್ಚರಿಸಿದೆ.

'ಇಲ್ಲಿಂದ ಮೊದಲು ತೊಲಗು. ನಿನ್ನ ಮೂರು ಕಾಸು ಯಾವನಿಗೆ ಬೇಕು!' ಎಂದು ಕೂಗಿದ ಪಂಡ ನನ್ನಮೇಲೆ ಕೆಟ್ಟ ಬೈಗುಳಗಳ ಸುರಿಮಳೆಯನ್ನೇ ಕರೆದ.

ನಾನು ಅವನು ಎಸೆದಿದ್ದ ಮೂರು ಕಾಸನ್ನು ಎತ್ತಿಕೊಂಡು, 'ಬ್ರಾಹ್ಮಣನಿಗೆ ಆದ ನಷ್ಟ ನನಗಾದ ಉಳಿತಾಯ...' ಎಂದುಕೊಂಡು ಉಲ್ಲಾಸದಿಂದ ನನ್ನ ದಾರಿ ಹಿಡಿದೆ.

ಜೋಹಾನ್ಸ್‌ಬರ್ಗ್, ಫೆಬ್ರುವರಿ೨, ೧೯೦೮

ಮಿಲಿ ಗ್ರಹಾಂ ಪೋಲಾಕ್: ಅವನಿಗೆ ಏನು ಬೇಕಂತೆ? ಏನಾದರು ವಿಶೇಷ?

ಮೋಹನದಾಸ ಕರಮಚಂದ ಗಾಂಧಿ: ಹೌದು, ಅವನು ನನ್ನನ್ನು ಕೊಲ್ಲ ಬಯಸಿದ್ದ.

ಪೋ: ಕೊಲ್ಲುವುದು? ನಿನ್ನನ್ನು ಕೊಲ್ಲುವುದು? ಭಯಂಕರ! ಅವನಿಗೇನಾದರೂ ಹುಚ್ಚು ಹಿಡಿದಿದೆಯೇ?

ಗಾ: ಇಲ್ಲ, ನಾನು ನಮ್ಮ ಜನತೆಗೆ ಸಂಬಂಧಪಟ್ಟಂತೆ ದೇಶದ್ರೋಹದ ಕೆಲಸ ಮಾಡುತ್ತಿದ್ದೇನೆ ಹಾಗೂ ಸರ್ಕಾರದಲ್ಲಿ ತಲೆ ತೂರಿಸಿ ಅವರ ವಿರುದ್ಧವೇ ಕೆಲಸ ಮಾಡುತ್ತ ಅವರ ಸ್ನೇಹಿತನಂತೆ, ನಾಯಕನಂತೆ ನಟಿಸುತ್ತಿದ್ದೇನೆ ಎಂದು ಅವನು ಭಾವಿಸಿದ್ದಾನೆ.

ಪೋ: ಅದೇನೇ ಇರಲಿ, ಅದು ದುಷ್ಟತನ ಹಾಗೂ ಭಯಾನಕ ಸಂಗತಿ. ಅಂತಹ ಮನುಷ್ಯನನ್ನು ಹಾಗೇ ಬಿಡುವುದು ಕ್ಷೇಮವಲ್ಲ. ಆತನನ್ನು ಬಂಧಿಸಬೇಕು. ಅವನನ್ನು ಹಾಗೇ ಹೋಗಲು ಏಕೆ ಬಿಟ್ಟೆ? ಆತ ನಿಜವಾಗಿಯೂ ಹುಚ್ಚನೇ ಇರಬೇಕು.

ಗಾ: ಇಲ್ಲ, ಆತ ಹುಚ್ಚನಲ್ಲ. ತಪ್ಪು ತಿಳುವಳಿಕೆಯವನಷ್ಟೆ. ನೀನೇ ನೋಡಿದೆಯಲ್ಲಾ, ನಾನು ಅವನೊಂದಿಗೆ ಮಾತನಾಡಿದ ಮೇಲೆ ನನ್ನ ಮೇಲೆ ಬಳಸಲು ಇಟ್ಟುಕೊಂಡಿದ್ದ ಚೂರಿಯನ್ನು ನನಗೇ ಕೊಟ್ಟುಬಿಟ್ಟ.

ಪೋ: ಕತ್ತಲಲ್ಲಿ ಅವನು ನಿನ್ನನ್ನು ಇರಿದೇ ಬಿಡುತ್ತಿದ್ದನೇನೋ, ನಾನು....

ಗಾ: ಈ ಬಗ್ಗೆ ಇಷ್ಟೊಂದು ತಲೆ ಕೆಡಿಸಿಕೊಳ್ಳಬೇಡ. ಅವನು ನನ್ನನ್ನು ಕೊಲ್ಲಬಹುದೆಂದುಕೊಂಡಿದ್ದ. ಆದರೆ, ಅವನಿಗೆ ಆ ಧೈರ್ಯವಿರಲಿಲ್ಲ. ನಾನು ಅವನು ತಿಳಿದಷ್ಟು ಕೆಟ್ಟವನಾಗಿದ್ದರೆ, ನಾನು ನಿಜವಾಗಿಯೂ ಸಾವಿಗೆ

ಅರ್ಹನೇ. ಈಗ ಈ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ. ಇದು ಮುಗಿದ ಅಧ್ಯಾಯ. ಆ ಮನುಷ್ಯ ನನ್ನ ಮೇಲೆ ಮತ್ತೆ ಆಕ್ರಮಣ ಮಾಡಲಾರನೆಂದೆನಿಸುತ್ತದೆ. ಅವನನ್ನು ದಸ್ತಗಿರಿ ಮಾಡಿಸಲು ನಾನೇನಾದರೂ ಯತ್ನಿಸಿದ್ದರೆ, ಅವನನ್ನು ನನ್ನ ಶತ್ರುವನ್ನಾಗಿ ಮಾಡಿಕೊಳ್ಳುತ್ತಿದ್ದೆನಷ್ಟೆ. ಆದರೆ, ಈಗವನು ನನ್ನ ಸ್ನೇಹಿತನಾಗಿದ್ದಾನೆ.

ಜೊಹಾನ್ಸ್‌ಬರ್ಗ್, ಮೇ ೧೮, ೧೯೧೧
(ಛಗನ್ ಲಾಲ್‌ಗೆ ಪತ್ರವೊದರಲ್ಲಿ)

ಅವನು(ಹರಿಲಾಲ್) ಸೋಮವಾರ ಸಂಜೆ ತನ್ನ ಮನಸ್ಸಿನಲ್ಲಿ ಇಟ್ಟುಕೊಂಡಿದ್ದೆಲ್ಲವನ್ನೂ ಹೊರಹಾಕಿದ. ಆತನ ಪ್ರಕಾರ ನಾನು ಎಲ್ಲ ನಾಲ್ಕು ಮಕ್ಕಳನ್ನೂ ಲೆಕ್ಕಕ್ಕೇ ಇಟ್ಟಿಲ್ಲದ ಹಾಗೆ; ಅವರ ಯಾವುದೇ ಆಶೋತ್ತರಗಳಿಗೂ ಬೆಲೆ ಕೊಡದೆ, ನಿರ್ದಯಿಯಾಗಿ ದಮನ ಮಾಡಿಟ್ಟಿದ್ದೇನೆ. ಆತ ಈ ಆಪಾದನೆಗಳನ್ನು ಸಂಕೋಚದಿಂದಲೇ, ಆದರೆ ಅತ್ಯಂತ ವಿನೀತನಾಗಿ ಮಾಡಿದ. ಈ ಸಂದರ್ಭದಲ್ಲಿ ಆತನ ಮನಸ್ಸಿನಲ್ಲಿ ಹಣದ ವಿಷಯ ಇರಲೇ ಇಲ್ಲ. ಆವನ ಮಾತುಗಳೆಲ್ಲವೂ ನನ್ನ ಸಾಮಾನ್ಯ ವರ್ತನೆಯ ಬಗ್ಗೆಯೇ ಇತ್ತು. ಇತರ ತಂದೆಯರಂತೆ ನಾನು ನನ್ನ ಮಕ್ಕಳ ಬಗ್ಗೆ ಒಂದು ಒಳ್ಳೆಯ ಮಾತಾಡಿರಲಿಲ್ಲ, ಅವರಿಗಾಗಿ ವಿಶೇಷವಾದುದೇನನ್ನೂ ಮಾಡಿರಲಿಲ್ಲ ಹಾಗೂ ಅವರು ಮತ್ತು ಅವರಮ್ಮ ನನ್ನ ಆದ್ಯತೆಯಲ್ಲಿ ಕೊನೆಯವರಾಗಿದ್ದರು ಎಂಬುದು ಅವನ ಆರೋಪವಾಗಿತ್ತು.

ಫೀನಿಕ್ಸ್, ಮೇ ೧೯೧೩

ದೇವದಾಸ್ ತಾನಿನ್ನು ಕದಿಯುವುದಿಲ್ಲ ಎಂದು ವಚನ ನೀಡಿದ್ದರೂ, ಇನಾಂಡ ಜಲಪಾತದ ಬಳಿ ಮೋಸಂಬಿಗಳನ್ನು ಕದ್ದು ತಿಂದಿದ್ದ. ಸಿಕ್ಕಿ ಬಿದ್ದಾಗ, ತುಂಬ ಜಾಣನಂತೆ, ಬುದ್ಧಿವಂತಿಕೆಯಿಂದ ಮಾತಾಡತೊಡಗಿದ. ಇದು ನನಗೆ ನೋವನ್ನುಂಟು ಮಾಡಿತು. ಆತ ನೀಡಿದ ನೆಪವಂತೂ ನನ್ನನ್ನು ಘಾಸಿಗೊಳಿಸಿತು. ನಾನು ಯಾವಾಗಲೂ ಅವನನ್ನು ಹೊಡೆಯುತ್ತೀನೇನೋ ಎಂಬಂತೆ, ಆತ ನನ್ನಿಂದ ಏಟು ಬೀಳುವುದೆಂಬ ಭಯದಲ್ಲಿ ತನ್ನ ತಪ್ಪನ್ನು ಹೇಳಿಕೊಳ್ಳಲಿಲ್ಲವೆಂದು ನುಡಿದ.

ಸರಿ, ನಾನು ಅವನಿಗೆ ಬುದ್ಧಿ ಕಲಿಸಲು ನನ್ನ ಕಪಾಳಕ್ಕೇ ಹೊಡೆದುಕೊಳ್ಳಲು ನಿರ್ಧರಿಸಿ ನಾಲ್ಕಾರು ಏಟು ಹಾಕಿಕೊಂಡಾಗ ನನ್ನ ಬಗ್ಗೆಯೇ ನನಗೆ ಎಷ್ಟು ದುಃಖವಾಯಿತೆಂದರೆ, ನನಗೆ ಜೋರಾಗಿ ಅಳುವೇ ಬಂದುಬಿಟ್ಟಿತು.

ಆಗಸ್ಟ್ ೧೦, ೧೯೨೦(ಗೆಳೆಯ ಕಲ್ಲೆನ್‌ಬ್ಯಾಕ್‌ಗೆ ಪತ್ರ)

.... ನಾನೀಗ ನನ್ನೊಡನೆ ಆಗಾಗ್ಗೆ ಪ್ರಯಾಣ ಮಾಡುವ ಮಹಿಳೆಯೊಬ್ಬಳೊಂದಿಗೆ ಆತ್ಮೀಯ ಸಂಪರ್ಕದಲ್ಲಿದ್ದೇನೆ. ನಮ್ಮ ಸಂಬಂಧ ವ್ಯಾಖ್ಯಾನವನ್ನು ಮೀರಿದ್ದು. ನಾನು ಆಕೆಯನ್ನು ನನ್ನ ಅಧ್ಯಾತ್ಮಿಕ ಪತ್ನಿ ಎಂದು ಕರೆಯುತ್ತೇನೆ. ನನ್ನ ಸ್ನೇಹಿತನೊಬ್ಬ ಇದನ್ನು ಬೌದ್ಧಿಕ ವಿವಾಹ ಎಂದು ಕರೆದಿದ್ದಾನೆ. ನೀನು ಒಮ್ಮೆ ಆಕೆಯನ್ನು ನೋಡಬೇಕೆಂಬುದು ನನ್ನ ಆಸೆ. ಅವಳ ಆಶ್ರಯದಲ್ಲೇ ನಾನು ಪಂಜಾಬ್‌ನ ಲಾಹೋರ್‌ನಲ್ಲಿ ಹಲವು ತಿಂಗಳುಗಳನ್ನು ಕಳೆದಿದ್ದೇನೆ. 'ಬಾ' ಆಶ್ರಮದಲ್ಲಿದ್ದಾಳೆ. ಆಕೆಗೆ ಸಾಕಷ್ಟು ವಯಸ್ಸಾಗಿದೆ; ಆದರೆ ಎಂದಿನಂತೆ ಚುರುಕಾಗಿಯೇ ಇದ್ದಾಳೆ. ಆಕೆ ನಿನಗೆ ತಿಳಿದಿರುವಂತೆ ತನ್ನ ದೌರ್ಬಲ್ಯ ಹಾಗೂ ಸದ್ಗುಣಗಳ, ಅದೇ ಹೆಂಗಸೇ. ಮಣಿಲಾಲ್ ಮತ್ತು ರಾಮದಾಸ್ ಫೀನಿಕ್ಸ್‌ನಲ್ಲಿದ್ದು ಇಂಡಿಯನ್ ಒಪಿನಿಯನ್ ನೋಡಿಕೊಳ್ಳುತ್ತಿದ್ದಾರೆ. ಹರಿಲಾಲ್ ಕಲ್ಕತ್ತಾದಲ್ಲಿದ್ದು ತನ್ನ ವ್ಯಾಪಾರ ನೋಡಿಕೊಳ್ಳುತ್ತಿದ್ದಾನೆ. ಅವನ ಹೆಂಡತಿ ಹೋಗಿ ಬಿಟ್ಟಳು. 'ಬಾ' ಅವನ ಮಕ್ಕಳನ್ನು ನೋಡಿಕೊಳ್ಳುತ್ತಿದ್ದಾಳೆ.

ಏಪ್ರಿಲ್ ೩೦, ೧೯೨೦(ಶ್ರೀಮತಿ ಜಿನ್ನಾಗೆ ಪತ್ರದಲ್ಲಿ)

ಶ್ರೀಯುತ ಜಿನ್ನಾಗೆ ನನ್ನ ನೆನಪು ತಿಳಿಸಿ ಹಾಗೂ ಅವರನ್ನು ಹಿಂದೂಸ್ಥಾನಿ ಅಥವಾ ಗುಜರಾತಿ ಕಲಿಯಲು ಪುಸಲಾಯಿಸಿ. ನಾನು ನಿಮ್ಮ ಸ್ಥಾನದಲ್ಲಿದ್ದಿದ್ದರೆ, ಈ ಹೊತ್ತಿಗೆ ಅವರೊಂದಿಗೆ ಗುಜರಾತಿ ಅಥವಾ ಹಿಂದೂಸ್ಥಾನಿಯಲ್ಲಿ ಮಾತನಾಡಲಾರಂಭಿಸುತ್ತಿದ್ದೆ. ಇದರಿಂದಾಗಿ ನೀವು ನಿಮ್ಮ ಇಂಗ್ಲಿಷ್‌ನ್ನು ಮರೆಯುವ ಅಥವಾ ನಿಮ್ಮ ನಡುವೆ ತಪ್ಪು ತಿಳುವಳಿಕೆ ಮೂಡುವ ಅಪಾಯವೇನೂ ಇರಲಾರದು. ಹೌದು ತಾನೇ?

ಇದನ್ನು ನೀವು ಮಾಡುವಿರಾ? ನೀವು ನನ್ನ ಬಗ್ಗೆ ಇಟ್ಟು ಕೊಂಡಿರುವ ಪ್ರೀತಿಯ ಸಲುವಾಗಿಯಾದರೂ ಮಾಡಿ ಎಂದು ಕೇಳುವೆ.

ಪೂನಾ, ಆಗಸ್ಟ್ ೨೩, ೧೯೩೩

ಗಾಂಧಿ: ಆನಂದ್, ಈ ಸಂದಿಗ್ಧದಲ್ಲಿ ನಾನೇನು ಮಾಡ ಬಹುದೆಂದು ನಿನಗನ್ನಿಸುತ್ತದೆ? ನನ್ನನ್ನು ಸಾಯಲು ಬಿಡುತ್ತಾರೆಂದು ಭಾವಿಸಿದ್ದೆ. ಹಾಗೆ ನೋಡಿದರೆ, ಅಂತಹ ಸಂದರ್ಭಕ್ಕೆ ನಾನು ಪೂರ್ಣವಾಗಿ ಸಿದ್ಧನಾಗಿದ್ದೆ ಕೂಡ. ಹಾಗಾಗಿಯೇ, ನನ್ನ ಬಿಡುಗಡೆಯ ಹಿಂದಿನ ಒಂದು ದಿನವಷ್ಟೇ ನಾನು ನನ್ನೆಲ್ಲಾ ಸಣ್ಣ ಪುಟ್ಟ ವೈಯುಕ್ತಿಕ ವಸ್ತುಗಳನ್ನು ಆಸ್ಪತ್ರೆಯ ದಾದಿಯರಿಗೆ ಹಾಗೂ ಸಹಾಯಕರಿಗೆ ಕೊಟ್ಟುಬಿಟ್ಟಿದ್ದೆ. ಉಪವಾಸ ಮಾಡಿ ತಂದುಕೊಳ್ಳುವ ನನ್ನ ಸಾವನ್ನು ಜನ ಹೇಗೆ ತೆಗೆದುಕೊಳ್ಳುತ್ತಿದ್ದರೋ ತಿಳಿಯದು.

ಆನಂದ್ ಹಿಂಗೋರಣಿ: ಏಕೆ, ಅದು ಅತ್ಯಂತ ಧೀರೋದಾತ್ತ ಸಾವಾಗಿರುತ್ತಿತ್ತು ಬಾಪು.

ಗಾ: ಛೇ! ಅಸಹ್ಯ. ಅದನ್ನು, ಉಪವಾಸ ಮಾಡಿ ಸಾಯುವುದನ್ನು, ನೀನು ಧೀರೋದಾತ್ತ ಸಾವೆಂದು ಪರಿಗಣಿಸುವೆಯ? ಅದರಲ್ಲಿ ಧೀರತೆ ಎಲ್ಲಿಂದ ಬಂತು? ಆದರೆ ನನ್ನ ಜಾತಕದಲ್ಲಿ ನಾನು ಧೀರನ ಸಾವನ್ನು ಅಪ್ಪುವೆನೆಂದು ಬರೆದಿದೆ ಎಂಬುದು ನಿನಗೆ ಗೊತ್ತಾ?

ಆ: ಆದರೆ ಬಾಪು, ಈ ಉಪವಾಸದ ಸಾವೂ ಧೀರೋದಾತ್ತ ಸಾವೇ. ಉದ್ದೇಶಪೂರ್ವಕವಾಗಿ ಅಂಗುಲ ಅಂಗುಲವಾಗಿ ಸಾವನ್ನು ಎದುರುಗೊಳ್ಳುವುದೇನೂ ಸುಲಭದ ಕೆಲಸವಲ್ಲ.

ಗಾ: ಇಲ್ಲ, ನನಗೆ ಹಾಗೆನ್ನಿಸುವುದಿಲ್ಲ. ನನ್ನ ಸಾವು ನೇಣುಗಂಬದ ಮೇಲೆ ಅಥವಾ ಗುಂಡಿನೆದುರಿಗೇ ಘಟಿಸುವಂತಹುದು. ಅದು ನಿಜವಾಗಿ ಧೀರೋದಾತ್ತ ಸಾವು; ಉಪವಾಸ ಮಾಡುತ್ತಾ ಹಾಸಿಗೆಯಲ್ಲಿ ಸಾಯುವುದಲ್ಲ.

ಜೈನ ಮಂದಿರ, ಮದ್ರಾಸ್, ಡಿಸೆಂಬರ್ ೨೨, ೧೯೩೩

ಈಗ ನಾನು ನನ್ನ ದಂಧೆ ಆರಂಭಿಸುತ್ತಿದ್ದೇನೆ. ನೀವು ದೂರದೂರದ ಸ್ಥಳಗಳಿಗೆ ಹೋಗಿ ಜನರನ್ನು ಲೂಟಿ ಮಾಡಿ ಗಂಟು ಮಾಡಿಕೊಳ್ಳುತ್ತೀರಿ. ನಾನೀಗ ನಿಮ್ಮನ್ನು ಲೂಟಿ ಮಾಡಲು ಹೊರಟಿರುವೆ. ಪ್ರೇಕ್ಷಕರು ಈ ಹೇಳಿಕೆಯನ್ನು ನಗುತ್ತಾ, ಘೋಷಣೆ ಕೂಗುತ್ತಾ

ಸ್ವಾಗತಿಸಿದರು. ದಂತದ ಕರಂಡವೊಂದನ್ನು ಹರಾಜಿಗಿಡುತ್ತಾ, 'ಇದಕ್ಕೆಷ್ಟು ಕೊಡುವಿರಿ?' ಎಂದು ಗಾಂಧಿ ಕೇಳಿದರು.

ಸುಮಾರು ೧೫ ರೂಪಾಯಿ ಬೆಲೆ ಬಾಳುವ ಆ ಕರಂಡಕ್ಕೆ ಮೊದಲ ಸವಾಲಿನಲ್ಲಿ ರಾಮನಾಥ ಗೋಯಂಕಾ ೧೦೧ ರೂಪಾಯಿಗಳನ್ನು ಕೂಗಿದರು.

'ಮುಂದೆ ಬನ್ನಿ. ಇಲ್ಲಿ ಸೇರಿರುವ ಗುಜರಾತಿಗಳಿಗೆ ೧೦೧ ರೂಪಾಯಿ ಏನೂನೂ ಅಲ್ಲ!' ಮುಂದಿನ ಕೂಗು ೨೦೧ ರೂಪಾಯಿಗಳಿಗೇರಿತು.

ಹಾಗಾದರೆ ಕೊಟ್ಟುಬಿಡಲಾ... ಒಂದು ಬಾರಿ... ಎರಡು ಬಾರಿ... ಮೂರನೇ ಬಾರಿ ಎಂದು ನಾನು ಹೇಳುವುದಿಲ್ಲ... ಇನ್ನೂ ಕಾಲ ಮಿಂಚಿಲ್ಲ... ಒಂದೆರಡು ನೂರು ನಿಮಗೆ ಏನೇನೂ ಅಲ್ಲ....

(ಹರಾಜು ಮುಗಿದು ಗಾಂಧಿ ವೇದಿಕೆಯ ಕೆಳಗೆ ಇಳಿಯುತ್ತಿದ್ದಂತೆ ಒಬ್ಬ ಹುಡುಗ ಅವರ ಬಳಿ ಓಡೋಡಿ ಬರುತ್ತಾನೆ)

ಹುಡುಗ: ನಿಮ್ಮ ಸಹಿ ಬೇಕು... ದಯವಿಟ್ಟು ಹಾಕಿ ಕೊಡಿ.

ಗಾ: ನೀನೇನು ಕೊಡುವೆ? ನನಗೆ ರೂಪಾಯಿ ಬೇಕು.

ಹು: ಒಂದು ರೂಪಾಯಿ ಕೊಡುವೆ.

ಗಾ: (ಅವನ ಕಿವಿಯ ಮುರಗಳನ್ನು ನೋಡುತ್ತಾ, ಮುಟ್ಟುತ್ತಾ) ಏನು ಇವು?

ಹು: ನೀವು ಅವುಗಳನ್ನು ತೆಗೆದುಕೊಳ್ಳಬಹುದು.

ಗಾ: ನಿನ್ನ ತಂದೆಯ ಅನುಮತಿ ಇದೆಯಾ?

ಹು: ಅವನ್ನು ನಿಮಗೆ ಕೊಡಲು ಅವರ ಅಭ್ಯಂತರವೇನೂ ಇರಲಾರದು.

ಗಾ: ನಿನಗೆ ಇಷ್ಟೊಂದು ಸ್ವಾತಂತ್ರ್ಯ ಇದೆಯಲ್ಲ! (ಮುರಗಳನ್ನು ಬಿಚ್ಚಿಕೊಂಡು) ನಿನಗಿದು ಅಗತ್ಯವಿಲ್ಲ. ಇನ್ನು ಮುಂದೆಯೂ ಮುರಗಳನ್ನು ಹಾಕಿಕೊಳ್ಳಬೇಡ. ಹೊಸವಕ್ಕಾಗಿ ನಿನ್ನ ತಂದೆಯನ್ನು ಕೇಳಬೇಡ. (ಸಹಿ ಹಾಕಿಕೊಡುತ್ತಾ) ನಿನ್ನ ಹೆಸರೇನು ಮರಿ?

ಹು: ಬಿ.ವಿ. ತಮ್ಮಪ್ಪ.

ಗಾ: ಎಷ್ಟು ವಯಸ್ಸು ನಿನಗೆ?

ಹು: ಹದಿಮೂರು

ಗಾ: ಓ! ಹದಿಮೂರನೇ ವಯಸ್ಸಿಗೇ ನಿನಗೆ ಸ್ವಾತಂತ್ರ್ಯ ದಕ್ಕಿದೆ. ನನಗೆ ಆ ಸೌಭಾಗ್ಯವಿರಲಿಲ್ಲ!

ಬಾಂಬೆ, ಜನವರಿ ೧೯೩೬

ನನ್ನ ಜೀವನದ ಅತ್ಯಂತ ಕರಾಳ ದಿನ ನಾನು ಬಾಂಬೆಯಲ್ಲಿದ್ದಾಗ ಸಂಭವಿಸಿತು....ಅದು ನನ್ನ ಕಾಮುಕತೆ ಇದ್ದಕ್ಕಿದ್ದಂತೆ ಕೆರಳಿದ ಸಮಯ. ನಾನು ಮಲಗಿದ್ದಾಗ, ನನಗೆ ಒಬ್ಬ ಹೆಂಗಸನ್ನು ನೋಡಬೇಕೆನಿಸಿತು. ಸುಮಾರು ನಲವತ್ತು ವರ್ಷಗಳ ಕಾಲ ದೇಹದ ಬಯಕೆಯನ್ನು ಗೆಲ್ಲುವ ಪ್ರಯತ್ನದಲ್ಲಿದ್ದ ಮನುಷ್ಯನಿಗೆ ಇಂತಹ ಭಯಾನಕ ಅನುಭವವಾದಾಗ ತುಂಬಾ ಹಿಂಸೆಯಾಗಲೇಬೇಕು. ಅಂತಿಮವಾಗಿ ನಾನು ಈ ಭಾವನೆಯನ್ನು ಗೆದ್ದೆನಾದರೂ, ನನ್ನ ಜೀವನದ ಅತ್ಯಂತ ನಾಚಿಕೆಗೇಡಿನ ಘಳಿಗೆಯೊಂದಿಗೆ ಮುಖಾಮುಖಿಯಾಗಿದ್ದೆ ಹಾಗೂ ನಾನೇನಾದರೂ ಆಗ ಸೋತು ಹೋಗಿದ್ದರೆ, ಅದು ನನ್ನನ್ನು ನಿರ್ನಾಮ ಮಾಡುತ್ತಿತ್ತು.

ಗಾಂಧಿ ಪುರಾಣ

ಉಡುಪಿಯ ಮಹಾತ್ಮ ಗಾಂಧಿ ಮೆಮೊರಿಯಲ್ ಕಾಲೇಜಿನಲ್ಲಿ ಗಾಂಧಿ ಅಧ್ಯಯನ ಕೇಂದ್ರ ಉದ್ಘಾಟನೆಗೊಂಡ ಸಂದರ್ಭದಲ್ಲಿ ನಡೆದ ವಿಚಾರ ಸಂಕಿರಣದ ಭಾಷಣಗಳು, ಯು.ಆರ್.ಅನಂತಮೂರ್ತಿಯವರ ಉದ್ಘಾಟನಾ ಭಾಷಣದ 'ಇಂದೂ ಇರುವ ಗಾಂಧಿ' ಎಂಬ ಅರ್ಥಪೂರ್ಣ ಶೀರ್ಷಿಕೆಯೊಂದಿಗೆ ಸಂಪಾದಿತವಾದ ಪುಸ್ತಕವೊಂದು ಹೊರಬಂದಿದೆ. ಅಂದು ಉದ್ಘಾಟನೆಯಾದ ಗಾಂಧಿ ಅಧ್ಯಯನ ಕೇಂದ್ರ ಪ್ರಕಟಿಸಿರುವ ಈ ಪುಸ್ತಕವನ್ನು ಗೆಳೆಯ ಜಯಪ್ರಕಾಶ ಮಾವಿನಕುಳಿ ಅಚ್ಚುಕಟ್ಟಾಗಿ ಸಂಪಾದಿಸಿಕೊಟ್ಟಿದ್ದಾರೆ. ಅನಂತಮೂರ್ತಿಯವರ ಉದ್ಘಾಟನಾ ಭಾಷಣಕ್ಕೆ ಜಿ.ಕೆ.ಗೋವಿಂದರಾಯರ ಪ್ರತಿಕ್ರಿಯೆ, ಹಿರಿಯ ಪತ್ರಕರ್ತ ಎಂ.ವಿ.ಕಾಮತರ ಗಾಂಧಿ ಯುಗದ ನೆನಪುಗಳು ಹಾಗೂ ಕೆ.ಕೆ. ಪೈ ಅವರ ಅಧ್ಯಕ್ಷ ಭಾಷಣಗಳಲ್ಲದೆ, ಗಾಂಧೀವಾದದ 'ಮೂಲಪಠ್ಯ'ವೆಂದು ಪರಿಗಣಿತವಾಗಿರುವ 'ಹಿಂದ್ ಸ್ವರಾಜ್' ಕುರಿತಂತೆ ಪಟ್ಟಾಭಿರಾಮ ಸೋಮಯಾಜಿ, ಜೆ.ಎಸ್. ಸದಾನಂದ, ರಾಜಾರಾಮ ತೋಳ್ಪಾಡಿ, ಎಂ.ಎಸ್.ಆಶಾದೇವಿ ಹಾಗೂ ಪಿ.ಎಲ್.ಧರ್ಮ ಅವರು ಭಾಗವಹಿಸಿರುವ ಕುತೂಹಲಕಾರಿ ಚರ್ಚೆಯನ್ನೂ ಈ ಪುಸ್ತಕ ಒಳಗೊಂಡಿದೆ.

ಎಂ.ವಿ. ಕಾಮತರ ಇಂಗ್ಲಿಷ್ ಭಾಷಣವನ್ನು ಕನ್ನಡಕ್ಕೆ ತಂದು ಪ್ರಕಟಿಸಬಹುದಿತ್ತು ಎಂಬೊಂದು ಕೊರತೆಯನ್ನು ಬಿಟ್ಟರೆ, ಈ ಪುಸ್ತಕ ಗಾಂಧಿ ವ್ಯಕ್ತಿತ್ವ ಮತ್ತು ಚಿಂತನೆಯ ಅವಿಭಾಜ್ಯತೆ ಕುರಿತಂತೆ ಅನೇಕ ಒಳನೋಟಗಳನ್ನು ಒದಗಿಸುತ್ತಾ, ಒಂದು ಸಣ್ಣ 'ಗಾಂಧಿ ಪುರಾಣ'ವನ್ನು ಸೃಷ್ಟಿಸುವಷ್ಟು ಸ್ಪಂದನಶೀಲವಾಗಿದೆ. ಇದರ ಕೆಲವು ಭಾಗಗಳನ್ನು ಆಯ್ದು(ಅವುಗಳಲ್ಲಿ ಎರಡನ್ನು ಅನುವಾದಿಸಿ) ಕೊಡುವ ಆಸೆ ನನ್ನದು.

ಅದನ್ನು ಮಾಡುವ ಮೊದಲು, ಯು.ಆರ್. ಅನಂತಮೂರ್ತಿ

ಯವರು ತಮ್ಮ 'ರುಜುವಾತು' ಪುಸ್ತಕದ ಒಂದು ಲೇಖನದಲ್ಲಿ ಪ್ರಸ್ತಾಪಿಸಿರುವ ಒಂದು ಕುತೂಹಲಕಾರಿ ಮಾತುಕತೆಯನ್ನು ಪೀಠಿಕೆಯಾಗಿ ಇಲ್ಲಿ ಉಲ್ಲೇಖಿಸುವ ಮನಸ್ಸಾಗುತ್ತಿದೆ: "ಒಮ್ಮೆ ಕೆಲವು ದಲಿತ ಸ್ನೇಹಿತರು ಕವಿ ಪುತಿನ ಅವರನ್ನು ನೋಡಲು ಹೋಗಿದ್ದರಂತೆ. ಹಣೆಯ ಮೇಲೆ ನಾಮ ಹಾಕಿ ನಿತ್ಯ ತಪ್ಪದೆ ಜಪ ಮಾಡುತ್ತಿದ್ದ ಈ ಶ್ರೀವೈಷ್ಣವ ಕವಿ ಪ್ರೀತಿ ತುಂಬಿದ್ದ ಹೃದಯದ ಮನುಷ್ಯ. ಅವರು 'ನೀವು ಗಾಂಧಿಯನ್ನು ಯಾಕೆ ಬೈಯುತ್ತೀರಿ?' ಅಂತ ದಲಿತರನ್ನು ಕೇಳಿದರಂತೆ. ದಲಿತರು ತಮ್ಮ ಕಾರಣಗಳನ್ನೆಲ್ಲ ಪಟ್ಟಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಪುತಿನ, 'ಮಹಾತ್ಮ ಗಾಂಧಿ ಈ ದೇಶದಲ್ಲಿ ಹುಟ್ಟದೇ ಇದ್ದಿದ್ದರೆ, ಈ ಜಾಗದಲ್ಲಿ ಕೂತು ನಿಮ್ಮ ಜತೆ ಮಾತಾಡುವ ಸಾಧ್ಯತೆಯೇ ನನಗೆ ಇರುತ್ತಿರಲಿಲ್ಲ' ಎಂದರಂತೆ."

* * *

ಇನ್ನು, ಈಪುಸ್ತಕದಲ್ಲಿನ ಅನಂತಮೂರ್ತಿಯವರ ಉದ್ಘಾಟನಾ ಭಾಷಣದ ಒಂದು ತುಣುಕು:

"ಒಮ್ಮೆ ಅಮೆರಿಕನ್ ಜರ್ನಲಿಸ್ಟ್ ಬಂದು ಗಾಂಧಿಯನ್ನು 'What is your Agenda?' ಅಂತ ಕೇಳುತ್ತಾನೆ. ಏನು ಹೇಳಬೇಕು ಗಾಂಧಿ– 'ರಾಷ್ಟ್ರದಲ್ಲಿ ರಾಜಕೀಯ ಸ್ಥಿತ್ಯಂತರ ನನ್ನ ಅಜೆಂಡಾ' ಅಂತ ಹೇಳಬೇಕು. ಅವನ ಆಶ್ಚರ್ಯಕ್ಕೆ ಗಾಂಧಿ ಅದನ್ನು ಹೇಳುವುದೇ ಇಲ್ಲ. 'My agendas are three. ಮೊದಲನೆಯದು ಹಿಂದೂ ಮುಸ್ಲಿಂ ಯೂನಿಟಿ, ಎರಡನೆಯದು removal of untouchability, ಮೂರನೆಯದು 'ಸ್ವದೇಶಿ'. ನಾಲ್ಕನೆಯದು ಯಾವುದು? ಅವರು ಹೇಳುವುದೇ ಇಲ್ಲ. ಯಾಕೆಂದರೆ, ಇವು ಮೂರೂ ಈಡೇರಿದರೆ ಬ್ರಿಟಿಷರಿಗೆ ಇಲ್ಲಿ ಇರುವ ಅಗತ್ಯವೇ ಇಲ್ಲ."

ಅನಂತಮೂರ್ತಿಯವರ ಭಾಷಣಕ್ಕೆ ಪ್ರತಿಕ್ರಿಯಿಸುತ್ತಾ ಪ್ರೊ॥ ಜಿ.ಕೆ.ಗೋವಿಂದರಾಯರು ಆಡಿರುವ ಈ ಮಾತುಗಳೂ ಇಲ್ಲಿ ಉಲ್ಲೇಖನಾರ್ಹ:

"ಸಾವಿರಾರು ವರ್ಷಗಳಿಂದ ಆಚರಣೆಯಲ್ಲಿದ್ದಂತಹ unequal societyಯಲ್ಲಿ equality ಸಾಧಿಸುವುದು ಎಂತಹ ಭಯಂಕರ ಕೆಲಸ

ಅನ್ನುವುದು ಇಬ್ಬರಿಗೂ ಗೊತ್ತಿತ್ತು. ಸಮುದ್ರದಿಂದ ಒಂದು ಹಿಡಿ ಉಪ್ಪು ತೆಗೆದು ಗಾಂಧಿ ಬ್ರಿಟಿಷರಿಗೆ ಹಾಕಿದ ಸವಾಲು. ಮಹರ್ ಸರೋವರದಿಂದ ಒಂದು ಬೊಗಸೆ ನೀರನ್ನು ಎತ್ತಿದ ಅಂಬೇಡ್ಕರ್ ಈ ಇಡೀ ಹಿಂದೂ ಸಮಾಜಕ್ಕೆ ಹಾಕಿದ ಸವಾಲು. ಎರಡೂ ಸಮಾನ. ಅದ್ಭುತ ಅದು. ಪ್ರಚೋದನೆ ನೀಡಿ ನಾಲ್ಕು ಜನ ಮೇಲ್ಜಾತಿಯವರ ತಲೆ ಒಡೆಯಿರೋ ಅಂದಿಬಿಡಬಹುದಿತ್ತು. ಅದರ ಬದಲು ಯಾವ ಸರೋವರಕ್ಕೆ ನಮಗೆ ಪ್ರವೇಶವಿಲ್ಲವೋ ಅಲ್ಲಿಗೆ ಹೋಗಿ ನನ್ನ ಪ್ರತಿಭಟನೆ ವ್ಯಕ್ತಪಡಿಸುತ್ತೇನೆ ಅನ್ನುವುದು ನಿರಂತರವಾಗಿ ನಡೆಯುವ ಮಾನಸಿಕ ಕ್ರಾಂತಿ. Living revolution. ಅದಕ್ಕೆ ದೇಶದ ಭವಿಷ್ಯವನ್ನು ರೂಪಿಸುವಾಗ ನಮ್ಮ ಮನಸ್ಸಿನಲ್ಲಿ ಉಳಿಯುವ ಎರಡು ಹೆಸರು ಗಾಂಧಿ ಮತ್ತು ಅಂಬೇಡ್ಕರ್, ನಂತರ ಲೋಹಿಯಾ.

* * *

ಇದೇ ಪುಸ್ತಕದಲ್ಲಿರುವ ಎಂ.ವಿ. ಕಾಮತರ ಒಂದು ನೆನಪು ಹಾಗೂ ಅವರು ನಿರೂಪಿಸಿರುವ ಗಾಂಧೀಜಿ ಬದುಕಿನ ಒಂದು ಘಟನೆ:

“೧೯೩೨ರಲ್ಲಿ ಗಾಂಧಿ ಉಪ್ಪಿನ ಸತ್ಯಾಗ್ರಹ ಆರಂಭಿಸಿದ ಕಾಲ. ಮಂಗಳೂರಿನ ಸೇಂಟ್ ಅಲೋಷಿಯಸ್ ಕಾಲೇಜಿನಲ್ಲಿ ಸತ್ಯಾಗ್ರಹಿಯಾಗಿದ್ದ ಉಪನ್ಯಾಸಕನೊಬ್ಬನಿದ್ದ. ಒಂದು ಸಂಜೆ ಆತ ತನ್ನಂತಹ ಹಲವು ಸತ್ಯಾಗ್ರಹಿಗಳ ಜೊತೆಯಲ್ಲಿ ಒಂದು ಕೈಯಲ್ಲಿ ಉಪ್ಪು ಮತ್ತೊಂದು ಕೈಯಲ್ಲಿ ಕಾಂಗ್ರೆಸ್ ಧ್ವಜ ಹಿಡಿದು ಮೆರವಣಿಗೆಯಲ್ಲಿ ಘೋಷಣೆ ಕೂಗುತ್ತಾ ನಡೆದಿದ್ದ. ಆತನನ್ನು ತಡೆದ ಪೋಲಿಸರು ಕೈಗಳಲಿದ್ದುದನ್ನು ಬಿಸಾಕುವಂತೆ ಆಗ್ರಹಿಸಿದರು. ಆತ ನಿರಾಕರಿಸಿದ. ಪೋಲೀಸರು ಆತನ ಎರಡೂ ಕೈಗಳನ್ನು ಲಾಠಿಗಳಿಂದ ಹೇಗೆ ಚಚ್ಚಿ ಹಾಕಿದರೆಂದರೆ ಅವನ ಎರಡೂ ಕೈಗಳು ಬರೀ ಮಾಂಸದ ಮುದ್ದೆಗಳಾಗಿ ಹೋದವು. ಆತ ಪ್ರಜ್ಞೆ ತಪ್ಪಿ ರಸ್ತೆಯ ಮೇಲೆ ಕುಸಿದು ಬಿದ್ದಾಗಲೂ ಆತನ ಕೈಗಳು ಉಪ್ಪು ಮತ್ತು ಧ್ವಜವನ್ನು ಬಲವಾಗಿ ಹಿಡಿದೇ ಇದ್ದವು.

.......ಒಚಿದು ದಶಕದ ನಂತರ ೧೯೪೨ರಲ್ಲಿ ಗಾಂಧೀಜಿ 'ಭಾರತ ಬಿಟ್ಟು ತೊಲಗಿ' ಚಳುವಳಿಗೆ ಕರೆ ಕೊಟ್ಟರು. ಆಗಲೂ ಈ ಉಪನ್ಯಾಸಕ ಇದರಲ್ಲಿ ಭಾಗವಹಿಸಿದ. ಈ ಸಂದರ್ಭದಲ್ಲಿ ಪೋಲೀಸರು ಆತನ

ಕಾಲುಗಳನ್ನು ಅಕ್ಷರಶಃ ಮುರಿದು ಹಾಕಿದರು. ಆಗಲೂ ಆತ 'ಮಹಾತ್ಮ ಗಾಂಧಿ ಕಿ ಜೈ! ಇನ್ಕ್ವಿಲಾಬ್ ಜಿಂದಾಬಾದ್' ಎಂದು ಕೂಗುತ್ತಲೇ ಇದ್ದ.

ಎಷ್ಟೋ ವರ್ಷಗಳ ನಂತರ ನಾನು ೧೯೯೦ರಲ್ಲಿ ನನ್ನ ಅಂಕಣ ಬರಹವೊಂದರಲ್ಲಿ ಇದನ್ನೆಲ್ಲ ನೆನಪು ಮಾಡಿಕೊಂಡು ಬರೆದಿದ್ದೆ. ಮಾರನೆಯ ದಿನ ನನಗೊಂದು ದೂರವಾಣಿ ಕರೆ ಬಂತು. ನಾನು ಯಾರ ಬಗ್ಗೆ ಬರೆದಿದ್ದನೋ ಆತನ ಕರೆ ಅದು. ಆತ ತಾನು ಬಂದು ನನ್ನನ್ನು ಭೇಟಿ ಮಾಡಬಹುದೇ ಎಂದು ಕೇಳಿದ. ನನಗೋ ರೋಮಾಂಚನ! ಮಾರನೆಯ ಸಂಜೆ ೫ ಘಂಟೆಗೆ ಬರಲು ಹೇಳಿದೆ ಹಾಗೂ ಆ ನನ್ನ ಅತಿಥಿಯನ್ನು ಸ್ವಾಗತಿಸಲು ನನ್ನ ಗೆಳೆಯರಿಗೆಲ್ಲ ಹೇಳಿ ವ್ಯಾಪಕ ಸಿದ್ಧತೆ ನಡೆಸಿದೆ. ಮಾರನೆಯ ದಿನ ಸಂಜೆ ನಾನು ನನ್ನ ಅತಿಥಿಯನ್ನು ಸಂಭ್ರಮದಿಂದ ಬರಮಾಡಿಕೊಳ್ಳಲು ಮಹಡಿಯಲ್ಲಿದ್ದ ನನ್ನ ಮನೆಯಲ್ಲಿ ಕುತೂಹಲದಿಂದ ಕಾಯುತ್ತಿದ್ದಾಗ ಕರೆಗಂಟೆಯ ಶಬ್ದವಾಯಿತು. ಬಾಗಿಲು ತೆಗೆದರೆ, ಮಹಿಳೆಯೊಬ್ಬರು ಬಾಗಿಲಲ್ಲಿ ನಿಂತಿದ್ದರು. ಅವರು 'ಕಾಮತರೆ, ದಯವಿಟ್ಟು ಕೆಳಗೆ ಬರುವಿರಾ? ನಿಮ್ಮ ಧೀರ ಅತಿಥಿ ಕೆಳಗೆ ಕಾಯುತ್ತಿದ್ದಾರೆ' ಎಂದರು. ನಾನು ಗಾಬರಿಯಾಗಿ 'ಅವರಿಗೆ ಮೇಲೆ ಬರಲು ಸಾಧ್ಯವಿಲ್ಲವೇ?' ಎಂದು ಕೇಳಿದೆ. ಅದಕ್ಕೆ ಆಕೆ 'ಕ್ಷಮಿಸಿ. ಅವರಿಗೆ ಮೆಟ್ಟಿಲು ಹತ್ತುವುದಿರಲಿ, ಏನನ್ನೂ ಆಧಾರವಾಗಿ ಹಿಡಿದುಕೊಳ್ಳಲೂ ಸಾಧ್ಯವಾಗುವುದಿಲ್ಲ. ಅವರು ಸರ್ಕಾರಿ ಅಂಬುಲೆನ್ಸ್‌ನಲ್ಲಿ ಗಾಲಿ ಕುರ್ಚಿಯಲ್ಲಿ ಕೂತು ನಿಮ್ಮನ್ನು ಕಾಣಲು ಬಂದಿದ್ದಾರೆ' ಎಂದರು.

ನಾನು ನನ್ನ ಬಾಲ್ಯ ಕಾಲದ ಆ ನಾಯಕನನ್ನು ಈಗ ಕಣ್ಣಾರೆ ಮತ್ತೆ ನೋಡಲು ದಡ ದಡನೆ ಮೆಟ್ಟಿಲಿಳಿದು ಹೋದೆ. ಮಹಿಳೆ ಹೇಳಿದ್ದು ನಿಜ. ನನ್ನ ನಾಯಕ ಒಂದಿಷ್ಟೂ ಚಲನೆ ಸಾಧ್ಯವಾಗದ ಸ್ಥಿತಿಯಲ್ಲಿದ್ದ. ಆತ. 'ಕಾಮತರೇ, ದಯವಿಟ್ಟು ನನ್ನನ್ನು ಕ್ಷಮಿಸಿ. ನಾನು ಮೇಲೆ ಬರಲಾರೆ. ಆರು ದಶಕಗಳ ಹಿಂದೆ ನಾನು ಮಾಡಿದ್ದನ್ನು ನೆನಪಿಸಿಕೊಂಡು ನೀವು ಬರೆದಿದ್ದಕ್ಕಾಗಿ ನಿಮಗೆ ಕೃತಜ್ಞತೆ ಹೇಳಲಷ್ಟೇ ಬಂದದ್ದು ನಾನು. ನಿಮ್ಮ ಈ ಬರವಣಿಗೆಗಿಂತ ದೊಡ್ಡ ಗೌರವ ನನಗೆ ಇನ್ನಾವುದಿದೆ? ನನಗಿನ್ನೇನೂ ಬೇಡ' ಎಂದು ಹೊರಟೇ ಬಿಟ್ಟರು. ನಾನು ಕಣ್ಣೀರಿನಿಂದ ಒದ್ದೆಯಾಗಿ ನಿಂತಿದ್ದೆ."

ಗಾಂಧಿ ಯುಗವೆಂದರೆ ಇದು!

ಕಾಮತರು; ಗಾಂಧಿ ಬದುಕಿನಿಂದ ನೇರವಾಗಿ ಉಲ್ಲೇಖಿಸಿರುವ ಘಟನೆ ಎಂದರೆ:

"ಗಾಂಧಿ ದ. ಆಫ್ರಿಕಾದಲ್ಲಿದ್ದಾಗ ಅಲ್ಲಿನ ಭಾರತೀಯರ ನಾಗರಿಕ ಹಕ್ಕುಗಳಿಗಾಗಿ ದೊಡ್ಡ ಹೋರಾಟವನ್ನೇ ಕೈಗೆತ್ತಿಕೊಂಡಿದ್ದರು. ಆ ಸಂದರ್ಭದಲ್ಲಿ ದ. ಆಫ್ರಿಕಾದ ಆಗಿನ ಮುಖ್ಯಸ್ಥ ಜ॥ ಸ್ಮಟ್ಸ್ ಅವರನ್ನು ಭೇಟಿಯಾಗಬೇಕಾದ ಸಂದರ್ಭವೊಂದರಲ್ಲಿ ಅವರು 'ನಿಮ್ಮ ಸರ್ಕಾರದ ವಿರುದ್ಧ ಹೋರಾಡಿಯೇ ತೀರುತ್ತೇನೆ' ಎಂದು ಸ್ಪಷ್ಟ ನಿರ್ಧಾರದ, ಆದರೆ ಪ್ರಶಾಂತ ಧ್ವನಿಯಲ್ಲಿ ಹೇಳಿದಾಗ, ಜ॥ ಸ್ಮಟ್ಸ್ 'ಇದನ್ನು ಹೇಳಲು ಇಲ್ಲಿಗೆ ಬಂದಿರಾ?' ಎಂದು ಸಿಟ್ಟು ಮತ್ತು ಗಾಬರಿಗಳಲ್ಲಿ ಕೇಳಿದರು. ಗಾಂಧಿ ಅದಕ್ಕೆ ಉತ್ತರ ಕೊಡುವ ಮುನ್ನವೇ, ಅವರಿಗೆ ಪರೋಕ್ಷವಾಗಿ ಇನ್ನು ನೀವು ಹೋಗಬಹುದು ಎನ್ನುವುದನ್ನು ಸೂಚಿಸುವಂತೆ ಜ॥ ಸ್ಮಟ್ಸ್, 'ಇನ್ನೇನಾದರೂ ಇದೆಯಾ ನೀವು ಹೇಳುವುದು?' ಎಂದರು. 'ಹೌದು' ಎಂದ ಗಾಂಧಿ, ಅವರಿಗೆ ಹೇಳಿದ್ದು: 'ಈ ಹೋರಾಟದಲ್ಲಿ ಗೆಲ್ಲುವುದು ನಾನೇ!' ಕುತೂಹಲ ಚಕಿತರಾದ ಸ್ಮಟ್ಸ್, 'ಅದು ಹೇಗೆ ಸಾಧ್ಯ?' ಎಂದು ವಿಚಾರಿಸಿಕೊಳ್ಳಲು ಯತ್ನಿಸಿದರು. ತಕ್ಷಣವೇ ಗಾಂಧಿ ಉತ್ತರಿಸಿದರು: 'ನಿಮ್ಮ ಸಹಾಯದಿಂದ!' ಗಾಂಧಿ ಮಾತ್ರ ಇಂತಹ ಉತ್ತರ ಕೊಡಬಲ್ಲವರಾಗಿದ್ದರು."

ಅದೇನೇ ಇರಲಿ, ಗಾಂಧಿ ಮಾತಿನಿಂದ ಜ॥ ಸ್ಮಟ್ಸ್ ಮೂರ್ಛೆ ಹೋಗುವುದೊಂದು ಬಾಕಿ ಇತ್ತೇನೋ!

* * *

ಇನ್ನು ಕೊನೆಯದಾಗಿ, ಇದೇ ಪುಸ್ತಕದಲ್ಲಿನ 'ಹಿಂದ್ ಸ್ವರಾಜ್' ಕುರಿತ ಚರ್ಚೆಯಲ್ಲಿ ಪಟ್ಟಾಭಿರಾಮ ಸೋಮಯಾಜಿ ಹೇಳುವ ಅಹಿಂಸೆ ಕುರಿತ ಗಾಂಧಿ ಸಂಕಥನ ಹೀಗಿದೆ:

"ಭಾರತಕ್ಕೆ ಇನ್ನೇನು ಸ್ವಾತಂತ್ರ್ಯ ಬರುವ ಸಂದರ್ಭದಲ್ಲಿ ಒಬ್ಬ ಅಮೆರಿಕನ್ ಪತ್ರಕರ್ತ ಗಾಂಧಿಯ ಸಂದರ್ಶನ ಮಾಡುತ್ತಾನೆ. ಆಗ ಆತ ಗಾಂಧಿಗೆ ಕೇಳಿದ ಒಂದು ಪ್ರಶ್ನೆ: 'ಸ್ವತಂತ್ರ ಭಾರತಕ್ಕೆ ನಿಮ್ಮ ಮೊದಲ ಅಜೆಂಡಾ ಏನು?' ಅಂತ. ಗಾಂಧಿ ಹೇಳುತ್ತಾರೆ, 'ಲ್ಯಾಂಡ್ ರಿಫಾರ್ಮ್' ಅಂತ. ಆ ಅಮೆರಿಕಾದ ಪತ್ರಕರ್ತನಿಗೆ ದಿಗಿಲಾಗುತ್ತದೆ. 'ಭೂಸುಧಾರಣೆಯನ್ನು ಜಾರಿಗೆ ತರಲು ಹೊರಟರೆ, ಇಡೀ ಭಾರತ

ಕುರುಕ್ಷೇತ್ರವಾಗಿ ರಣರಂಗವಾಗುವುದಿಲ್ಲವೇ? ಇದು ನಿಮ್ಮ ಅಹಿಂಸಾತ್ಮಕ ತತ್ವಕ್ಕೆ ವಿರೋಧವಲ್ಲವೇ?' ಅಂತ ಆತನ ಪ್ರಶ್ನೆ. ಆಗ ಗಾಂಧಿ, 'ಎಷ್ಟು ದಿವಸ ನಡೆಯಬಹುದು, ಹಿಂಸೆ? ಹದಿನೈದು ದಿವಸ ನಡೆಯಬಹುದೋ?' ಅಂತಾರೆ. ಆ ಮೇಲೆ ಆ ಪತ್ರಕರ್ತ ಕೇಳುತ್ತಾನೆ, 'ಜಮೀನ್ದಾರರು ಬಹಳ ಭೀಕರ ಹಿಂಸೆ ಮಾಡುವ ಸಾಮರ್ಥ್ಯವುಳ್ಳವರು. ಅವರನ್ನು ಎದುರು ಹಾಕಿಕೊಳ್ಳುವುದು ಸಾಧ್ಯವೋ?' ಅಂತ. ಅದಕ್ಕೆ ಗಾಂಧಿ, 'ಅವರೂ ಯುದ್ಧವನ್ನು ಬಿಟ್ಟು ಪಲಾಯನ ಮಾಡುವ ಮೂಲಕ ಸಹಾಯ ಮಾಡಬಹುದು!' ಅಂತ ಪ್ರತಿಕ್ರಿಯಿಸುತ್ತಾರೆ. ಇದನ್ನು ಯಾಕೆ ಪ್ರಸ್ತಾಪ ಮಾಡಿದೆ ಎಂದರೆ, ಗಾಂಧಿಯ ಅಹಿಂಸೆಯ ಕಲ್ಪನೆಯಲ್ಲಿ ಈ ರೀತಿಯ ಅನಿವಾರ್ಯವಾದ, ನಿವಾರಿಸಿಕೊಳ್ಳಬಹುದಾದ ಹಿಂಸೆಯುನ್ನು ಒಳಗೊಳ್ಳಬಹುದಾದ ಸಾಧ್ಯತೆ ಇದೆ. ಅಹಿಂಸೆ ಅನ್ನುವುದು ಕೇವಲ ಎಡಗೆನ್ನೆಗೆ ಹೊಡೆದರೆ ಬಲಗೆನ್ನೆ ಒಡ್ಡುವುದು ಎಂಬ ಮೊದ್ದುತನವಲ್ಲ. ಗಾಂಧಿಯಲ್ಲಿನ ದೊಡ್ಡ ದರ್ಶನ ಅದು. 'ಯಾರೋ ಒಬ್ಬನ ಹೆಗಲ ಮೇಲೆ ಕೂತು ಸವಾರಿ ಮಾಡಿಕೊಂಡೇ ಜೀವನ ಮಾಡುವುದು ಅಭ್ಯಾಸ ಆಗಿರುವವನಿಗೆ ಒಂದು ದಿನ ಹೊತ್ತುಕೊಂಡಿರುವವನು, ಇನ್ನು ನನ್ನ ಕೈಯಲ್ಲಿ ಆಗುವುದಿಲ್ಲ ಅಂತ ಹೇಳಿ ಕೂತವನನ್ನು ಕೆಳಗೆ ಹೊತ್ತು ಹಾಕುತ್ತಾನೆ. ಬಿದ್ದವನಿಗೆ ತರಚು ಗಾಯಗಳಾಗುತ್ತವೆ. ಅದನ್ನೇ ಹಿಂಸೆ ಎಂದು ಕರೆದರೆ ಹೇಗೆ?' ಅಂತ ಗಾಂಧಿ ಕೇಳುತ್ತಾರೆ. ಈ ದರ್ಶನ ಗಾಂಧಿಗೆ ಸಾಧ್ಯವಾಗಿರುವುದು ಹಿಂಸಾ ಪಂಥದ ಜೊತೆಗೆ ಅವರು ನಡೆಸಿದ ವಾಗ್ವಾದದ ಮೂಲಕ."

ವರ್ಣಧರ್ಮ ಮತ್ತು ಜಾತಿ ಪದ್ಧತಿ ಕುರಿತ ಗಾಂಧಿ ಚಿಂತನೆಗಳು

(ಗಾಂಧಿ ಓರ್ವ ಸನತಾನ ಹಿಂದೂ ಎಂದೂ, ಅವರು ಚಾತುರ್ವರ್ಣ್ಯವನ್ನೂ, ಜಾತಿ ಪದ್ಧತಿಯನ್ನೂ ಮಾನ್ಯ ಮಾಡುತ್ತಿದ್ದರೆಂದೂ ಹೇಳುತ್ತಾ ಅವರನ್ನು, ಜಾತಿ ಪದ್ಧತಿಯ ಕಾರಣದಿಂದಾಗಿಯೇ ಹಿಂದೂ ಧರ್ಮದ ವಿರುದ್ಧ ಸಮರ ಸಾರಿದ ಅಂಬೇಡ್ಕರ್ ಅವರ ವಿರುದ್ಧ ಖಳನಾಯಕನಂತೆ ನಿಲ್ಲಿಸಿ ಚರ್ಚಿಸುವ, ಪ್ರಚಾರ ಮಾಡುವ ಪ್ರವೃತ್ತಿಯೊಂದು ಈಗ ನಮ್ಮ ಕೆಲ ಬುದ್ಧಿಜೀವಿಗಳ ಗುಂಪಿನಲ್ಲೂ ಚಾಲ್ತಿಯಲ್ಲಿದೆ. ಆದರೆ ವರ್ಣ ಮತ್ತು ಜಾತಿ ವ್ಯವಸ್ಥೆ ಮಾತ್ರವಲ್ಲ, ಇಡೀ ಹಿಂದೂ ಧರ್ಮದ ಬಗ್ಗೆ ಗಾಂಧಿ ಆಲೋಚನೆಗಳು ಹೇಗಿದ್ದವು, ಯಾವ ರೂಪಾಂತರ ತಾಳುತ್ತಾ ಹೋದವು ಎಂಬುದನ್ನು ಕಾಲಾನುಕ್ರಮದ ಅವರ ಬರಹಗಳನ್ನು ಗಮನಿಸುತ್ತಾ ಬಂದರೆ, ನಮಗೆ ಸಂಪೂರ್ಣ ಬೇರೆಯೇ ಚಿತ್ರ ದೊರಕುತ್ತದೆ. ವಿಶೇಷವಾಗಿ, ಧರ್ಮ ಕುರಿತ ತಮ್ಮ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಹಿಂದೂ ಧರ್ಮವನ್ನು ತಮ್ಮ ಕಾಲದ ಹೊಸ ಸವಾಲುಗಳ ಎದುರಿಗೆ ಅವರು ಮರುರೂಪಿಸಲು ಮಾಡಿದ ಕ್ರಾಂತಿಕಾರಿ ಎನ್ನಬಹುದಾದ ಪ್ರಯತ್ನಗಳ ಬಗ್ಗೆ ಸ್ವತಃ ಅಂಬೇಡ್ಕರ್ ಏಕೆ ಗಮನ ಹರಿಸಲಿಲ್ಲ ಎಂದೂ, ನಮ್ಮ ಇಂದಿನ ಚಿಂತಕರು ಮತ್ತು ಬುದ್ಧಿಜೀವಿಗಳೂ ಏಕೆ ಗಾಂಧಿ ಕುರಿತಂತೆ ಆಳವಾದ ಅಭ್ಯಾಸ ಮಾಡದೆ, ಅವರನ್ನು ಕುರಿತ ಹಳೇ ಗಿಳಿ ಪಾಠಗಳನ್ನೇ ಮತ್ತೆ ಮತ್ತೆ ಹೇಳುತ್ತಿದ್ದಾರೆ ಎಂದು ಆಶ್ಚರ್ಯವಾಗುತ್ತದೆ. ಈ ಆಶ್ಚರ್ಯದ ಹಿನ್ನಲೆಯಲ್ಲಿ ಈ ಲೇಖನ–ಲೇ.)

> ....ಡಾ॥ ಅಂಬೇಡ್ಕರರು ನಮ್ಮಲ್ಲಿ ಹಲವರು ನಾಚಿಕೆ ಪಡುವಷ್ಟು ಬುದ್ಧಿವಂತರು ಹಾಗೂ ಜಾಣರು. ತಮ್ಮ ಚುರುಕಾದ ಬುದ್ಧಿಯಿಂದ ಅವರು ಹಲವು ಜನರ ಹೃದಯವನ್ನು ಮುಟ್ಟಿದ್ದಾರೆ. ಅವರ ತ್ಯಾಗ ತುಂಬ ದೊಡ್ಡದು. ಅವರು ಯಾವಾಗಲೂ ತಮ್ಮ ಕೆಲಸದಲ್ಲಿ ಮಗ್ನರು. ಅವರು ಸರಳ ಜೀವನ ನಡೆಸುವರು. ಅವರು ತಿಂಗಳಿಗೆ ಒಂದೆರಡು

ಸಾವಿರ ರೂಪಾಯಿಗಳನ್ನಾದರೂ ಸಂಪಾದಿಸಬಲ್ಲವರು. ಅವರು ಯೂರೋಪಿಗೆ ಹೋಗಿ ನೆಲಸಲು ಕೂಡ ಸಾಧ್ಯ. ಆದರೆ ಅವರಿಗೆ ಅಲ್ಲಿಗೆ ಹೋಗಲು ಇಷ್ಟವಿಲ್ಲ. ಅವರಿಗೆ ಹರಿಜನರ ಕ್ಷೇಮಾಭ್ಯುಯದ್ದೇ ಚಿಂತೆ. ಆದರೆ ಇಂದು ಸಮಾಜದಲ್ಲಿ ಇಂತಹ ಮನುಷ್ಯನ ಸ್ಥಾನಮಾನವಾದರೂ ಏನು? 'ನಾನು ವಿಧಾನ ಸಭೆ ಅಧಿವೇಶನಕ್ಕೆಂದು ಪೂನಾಗೆ ಹೋದಾಗ, ಇತರರೆಲ್ಲ ಅವರ ಸ್ನೇಹಿತರ ಮನೆಗಳಲ್ಲಿ ತಂಗಿ ತಮ್ಮ ದಿನಭತ್ಯೆಯನ್ನು ಉಳಿಸಿಕೊಳ್ಳುವವರಾದರೆ, ನಾನು ಹೋಟೆಲಿನಲ್ಲಿ ತಂಗಿ ಆ ಇಡೀ ೧೦ ರೂಪಾಯಿಗಳನ್ನು ಖರ್ಚು ಮಾಡಿಕೊಳ್ಳಬೇಕಾಗಿದೆ. ನನ್ನನ್ನು ಒಬ್ಬ ಸಹೋದ್ಯೋಗಿಯೆಂದಾಗಲೀ, ಸ್ನೇಹಿತನೆಂದಾಗಲೀ ಒಪ್ಪಿಕೊಳ್ಳುವ ಒಂದು ಹಿಂದೂ ಕುಟುಂಬವೂ ಪೂನಾದಲ್ಲಿ ಇಲ್ಲ' ಎಂದು ಅವರು ಹೇಳುತ್ತಾರೆ. ಯಾರ ಅವಮಾನವಿದು? ಅವರದದೋ ಅಥವಾ ಸವರ್ಣೀಯರೆನಿಸಿಕೊಳ್ಳುವ ಹಿಂದೂಗಳದೋ?

ನಾವು ಅಸ್ಪೃಶ್ಯರ ಮೇಲೆ ಇಷ್ಟು ವರ್ಷಗಳ ಕಾಲ ನಡೆಸಿರುವ ದೌರ್ಜನ್ಯಗಳಿಗಾಗಿ ಅವರಿನ್ನೂ ನಮ್ಮ ತಲೆಗಳನ್ನು ಒಡೆಯಲು ಮುಂದಾಗದಿರುವುದು ನಮ್ಮ ಪುಣ್ಯ. ಅದಕ್ಕಾಗಿಯಾದರೂ ನಾವು ಅವರಿಗೆ ಕೃತಜ್ಞರಾಗಿರಬೇಕು.

– **ಮಹಾತ್ಮ ಗಾಂಧಿ** (ಕರಾಚಿ, ಜುಲೈ ೧೦, ೧೯೩೪)

ಇತ್ತೀಚೆಗೆ ನಾನು ಗಾಂಧಿ ಸಾಹಿತ್ಯವನ್ನು ಓದಿದಾಗಲೆಲ್ಲ ನನ್ನಲ್ಲಿ ಹೊಸ ಹುರುಪು, ಉತ್ಸಾಹ ಉಂಟಾದಂತೆನಿಸುತ್ತದೆ. ಬಹು ಒಳ್ಳೆಯ ಕಾವ್ಯವನ್ನು ಓದಿದಂತಹ ರೋಮಾಂಚನವೂ ಉಂಟಾಗುತ್ತದೆ ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಈ ರೋಮಾಂಚನಕ್ಕೆ ಕಾರಣವೇನೆಂದು ನಾನು ಯೋಚಿಸಿದಾಗ ನನಗೆ ಹೊಳೆದದ್ದು, ಇಂದಿನ ಕಟು ನಿಷ್ಠುರ ವಾಸ್ತವದಾಚೆಗೆ ನಮ್ಮ ಮನಸ್ಸು ಜಿಗಿಯಬಯಸುವ ಹಂಬಲದ ಪ್ರತೀಕವಾಗಿ ಗಾಂಧಿ ನನ್ನಲ್ಲಿ ಕಾಣಿಸಿಕೊಂಡಿದ್ದಾರೆ ಎಂಬುದು. ಹೀಗೆ ಗಾಂಧಿ ಒಂದು ನೆಲೆಯಲ್ಲಿ ಇಂದು ಅಧ್ಯಾತ್ಮಿಕ ಬಿಡುಗಡೆಯ ಸಂಕೇತವೂ ಆಗಿದ್ದಾರೆ ಎನಿಸುತ್ತದೆ. ಇದೇ ಇಂದು ಗಾಂಧೀಜಿಯನ್ನು ಪ್ರಸ್ತುತಗೊಳಿಸಿಕೊಳ್ಳಲು ಇರುವ ತೊಂದರೆಯೂ ಆಗಿ ಪರಿಣಮಿಸಿದೆ.

ಹಾಗಾಗಿಯೇ, ವರ್ಣಧರ್ಮ (ವರ್ಣಾಶ್ರಮ ಧರ್ಮವೆಂಬ ಸಂಬೋಧನೆ ಈಗ ಅಸಂಗತ ; ಏಕೆಂದರೆ ಬ್ರಹ್ಮಚರ್ಯ, ಗೃಹಸ್ಥ, ಸಂನ್ಯಾಸ

/ ವಾನಪ್ರಸ್ಥ ಎಂಬ ಆಶ್ರಮ ಅವಸ್ಥೆಗಳು ಈಗ ರೂಢಿಯಲ್ಲಿಲ್ಲ ಎನ್ನುತ್ತಾರೆ ಗಾಂಧಿ.) ಮತ್ತು ಜಾತಿ ಪದ್ಧತಿ ಕುರಿತ ಗಾಂಧಿ ಚಿಂತನೆಗಳನ್ನು ಕುರಿತು ಇಂದು ಮಾತಾಡುವುದು ಕಷ್ಟದ ಕೆಲಸವೇ ಆಗಿದೆ. ವಿಶೇಷವಾಗಿ, ಸಾಮಾಜಿಕ ನ್ಯಾಯವೆಂಬುದು ಅತಿಗೆ ಹೋಗಿ ನಮ್ಮ ಸಮಾಜ ಹೆಚ್ಚು ಜಾತೀಯವಾಗಿ ಒಡೆದುಹೋಗಿರುವ ಈ ದಿನಗಳಲ್ಲಿ. ಮತ್ತು ಜಾತಿ ಪದ್ಧತಿಯನ್ನು ತಾತ್ವಿಕವಾಗಿ ವಿರೋಧಿಸುತ್ತಲೇ ಅದರೊಳಗೇ ತಮ್ಮ ಕಾಲುಗಳನ್ನು ಅನಿವಾರ್ಯವೆಂಬಂತೆ ಆಳವಾಗಿ ಊರಿಕೊಂಡಿರುವ ನಮ್ಮ ಜನಸಮುದಾಯದ (ಬುದ್ಧಿಜೀವಿಗಳೂ ಸೇರಿದಂತೆ) ಮಧ್ಯೆ. ಗಾಂಧಿ ತಮ್ಮ ಪ್ರಕಾರ ವರ್ಣಧರ್ಮವೆಂದರೇನು ಎಂಬುದನ್ನು ವಿವರಿಸಿರುವುದನ್ನು ವಿವರವಾಗಿ ಓದುವ ಗೋಜಿಗೆ ಹೋಗದ ಕೆಲ ಗಾಂಧಿವಾದಿ ಚಿಂತಕರೂ ಸಹ, ಸಾರಾಸಗಟಾಗಿ ಅದನ್ನೊಪ್ಪಲು ಸಾಧ್ಯವಿಲ್ಲವೆಂತಲೂ, ಗಾಂಧಿ ಜಾತಿ ಪದ್ಧತಿಗೆ ಬೆಂಬಲವಾಗಿದ್ದರು ಎಂಬ ಕೆಲ ಅರೆಸಾಕ್ಷರ 'ಪ್ರಗತಿಪರ' ಚಿಂತಕರ ಸ್ಥೂಲ ಮಾತುಗಳನ್ನು ಸರಿಯೆಂತಲೂ ಹೇಳುತ್ತಾ ಗಾಂಧಿಗೆ ಅನ್ಯಾಯವನ್ನೇ ಮಾಡುತ್ತಿದ್ದಾರೆನಿಸುತ್ತದೆ. ಈ ಹಿನ್ನೆಲೆಯಲ್ಲಿ, ಅಂಬೇಡ್ಕರ್ ಅವರ 'ಜಾತಿ ವಿನಾಶ' ಪ್ರಬಂಧದ ಬಗ್ಗೆ ಗಾಂಧಿ ಮತ್ತು ಅಂಬೇಡ್ಕರ್ ನಡುವೆ ನಡೆದ ಸಂವಾದದಲ್ಲಿ ಗಾಂಧಿ ಸಂಪೂರ್ಣವಾಗಿ ಸೋತುಹೋಗಿದ್ದಾರೆ ಎಂದು ಸ್ವತಃ ಗಾಂಧಿಯವರ ಮೊಮ್ಮಗ ರಾಜ್‌ಮೋಹನ್ ಗಾಂಧಿ ಅವರು ಬರೆದಿರುವುದನ್ನು ಓದಿಯಂತೂ ನನಗೆ ಆಶ್ಚರ್ಯವೇ ಆಯಿತು. (ನೋಡಿ: 'Independence and Social Justice: Understanding the Ambedkar-Gandhi debate' mesco: 2016)

ವರ್ಣಧರ್ಮ ಮತ್ತು ಜಾತಿಪದ್ಧತಿ ಕುರಿತ ಗಾಂಧಿ ಚಿಂತನೆಗಳನ್ನು ಅರಿಯಲು ನಾವು ವರ್ಣ ಧರ್ಮ ಮತ್ತು ಅಸ್ಪೃಶ್ಯತೆ ಕುರಿತು ಗಾಂಧಿ ಆಡಿದ ಮಾತುಗಳು ಮತ್ತು ನೀಡಿದ ಅಭಿಪ್ರಾಯಗಳು ವಿಕಾಸವಾಗುತ್ತಾ ಹೋದ ಬಗೆಯನ್ನು ಅರಿಯಬೇಕಾಗುತ್ತದೆ. ಜೊತೆಗೇ, ಈ ಸಂಬಂಧವಾಗಿ ಅವರಿಗೆ ನಿಜವಾದ ಸವಾಲೆಸೆದ ಅಂಬೇಡ್ಕರ್ ಅವರೊಡನೆಯ ಅವರ ಸಂವಾದಗಳನ್ನೂ ಮತ್ತು ವಾಗ್ವಾದಗಳನ್ನೂ ಗಮನಿಸಬೇಕಾಗುತ್ತದೆ. ಗಾಂಧಿ ಕುರಿತು ಲೋಹಿಯಾ ಹೇಳುವ, 'ಬದುಕಿನುದ್ದಕ್ಕೂ ನಿಲುವು ಗಳನ್ನು ಬದಲಿಸುತ್ತಾ ಹೋಗುವ-ಒಮ್ಮೊಮ್ಮೆ ಪರಸ್ಪರ ತದ್ವಿರುದ್ಧ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ-ವ್ಯಕ್ತಿ ಗಾಂಧಿಯಂತಹ ದಿಟ್ಟ

ಪಾರದರ್ಶಕ, ವಿಕಾಸಶೀಲ ವ್ಯಕ್ತಿತ್ವವಾಗಿರದಿದ್ದಲ್ಲಿ ಆತನನ್ನು ಜಗತ್ತು ಅನುಸರಿಸಲಾರದು' ಎಂಬ ಮಾತು ಇಲ್ಲಿ ಮುಖ್ಯವೆನಿಸುತ್ತದೆ.

ಈ ಸಂಬಂಧದ ಇನ್ನೂ ಮುಖ್ಯ ಮಾತೆಂದರೆ, ಗಾಂಧಿಯ ಎಲ್ಲ ಚಿಂತನೆಗಳನ್ನೂ ನಾವು ಪಶ್ಚಿಮದ ಆಧುನಿಕ ನಾಗರೀಕತೆ ಕುರಿತಂತೆ ಅವರು ಮಾಡಿದ ವಿಮರ್ಶೆ ಮತ್ತು ಅದರ ಭಾಗವಾಗಿ ಅವರು ಮುನ್ನೋಡಿ ರೂಪಿಸಬಯಸಿದ ಹೊಸ 'ಸಭ್ಯತೆ'ಯ ಬಗ್ಗೆ ಅವರು ನೀಡಿದ ಸೂಚನೆಗಳ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕೆಂಬುದು. ಪಶ್ಚಿಮದ ಆಧುನಿಕ ನಾಗರೀಕತೆ ಕುರಿತ ಅವರ ವಿಮರ್ಶೆಯನ್ನೊಳಗೊಂಡ 'ಹಿಂದ್ ಸ್ವರಾಜ್'ನ(1909) ಬೀಜವಾಕ್ಯವೆಂದರೆ, 'ಭಾರತ ಇಂದು ತಿಣು ಕುತ್ತಿರುವುದು ಬ್ರಿಟಿಷ್ ಪ್ರಭುತ್ವದ ಭಾರದಿಂದಲ್ಲ; ಬದಲಿಗೆ, ಆಧುನಿಕ ನಾಗರೀಕತೆಯ ಭಾರಗಳಿಂದ' ಎಂಬುದನ್ನು ನಾವು ಗಮನಿಸಬೇಕು. ವೇಗ ಮತ್ತು ಭೋಗಗಳೇ ಈ ನಾಗರೀಕತೆಯ ಲಕ್ಷಣಗಳೆಂದು ಗುರುತಿಸುವ ಗಾಂಧಿ ಅದನ್ನು 'ರೋಗ'ವೆಂದು ಕರೆಯುತ್ತಾರೆ. ಅದರ ಈ ಗುಣಗಳಿಗೆ ಮುಖ್ಯ ಕಾರಣವಾದ ಹೊಸ ತಂತ್ರಜ್ಞಾನ ಮತ್ತು ಅದು ಸೃಷ್ಟಿಸುವ ನಗರೀಕೃತ ಸಮಾಜವನ್ನು ಅವರು ಸಂದೇಹದಿಂದ ನೋಡುತ್ತಾರೆ.

ಹಾಗಾಗಿ, ಭಾರತೀಯ ಸಮಾಜ ಕುರಿತಂತೆ ಗಾಂಧಿ ಏನೇ ಹೇಳಿದರೂ, ಅದು ಆಧುನಿಕ ತಂತ್ರಜ್ಞಾನದ ವ್ಯಾಮೋಹಕ್ಕೆ ಸಿಗದ ಅವರ ಕಲ್ಪನೆಯ ಗ್ರಾಮ ಪ್ರಧಾನವಾದ ಸಮಾಜವನ್ನೇ ಗಮನದಲ್ಲಿಟ್ಟುಕೊಂಡು ಹೇಳಿರುವರು ಎಂಬುದನ್ನು ನಾವು ಮರೆಯಬಾರದು. ಅಂದರೆ, ಗಾಂಧಿಯ ಎಲ್ಲ ಆಲೋಚನೆಗಳನ್ನೂ ಅವರು ಕನಸಿದ್ದ, ಕಟ್ಟಬಯಸಿದ್ದ ಹೊಸ ಗ್ರಾಮ ಸಮಾಜದ ಪರಿಪ್ರೇಕ್ಷ್ಯದಲ್ಲೇ ನಾವು ನೋಡಬೇಕಾಗುತ್ತದೆ. ಈಗ ನಾವು ಮಾಡುತ್ತಿರುವ ತಪ್ಪೆಂದರೆ, ಇಂದಿನ ಸಮಾಜಕ್ಕೆ ಗಾಂಧಿ ಆಲೋಚನೆಗಳನ್ನು ಅನ್ವಯಿಸಿಕೊಂಡು ಅವುಗಳ ವಿಮರ್ಶೆ ಮಾಡುತ್ತಿರುವುದೇ ಆಗಿದೆ. ಗಾಂಧಿ 125 ವರ್ಷ ಬದುಕಬಯಸಿದ್ದರು ಮತ್ತು ಆಧುನಿಕ ನಾಗರೀಕತೆಗೆ ಪ್ರತಿಯಾಗಿ ಭಾರತಕ್ಕೆ ಮಾತ್ರವಲ್ಲದೆ ಜಗತ್ತಿಗೇ ಒಂದು ಹೊಸ ಸಭ್ಯತೆಯನ್ನು ಕಟ್ಟಿಕೊಡಬಯಸಿದ್ದರು ಎಂಬುದನ್ನು ನಾವು ಗಮನಿಸದಿರಲಾಗದು. ಹಾಗಾಗಿ ನಾವು ಗಾಂಧಿಯನ್ನು ಈ ಪರಿಮಾಣದಲ್ಲೇ ನೋಡಿ ಅವರ ಆಲೋಚನೆಗಳ ಮೌಲಿಕತೆಯನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಧರ್ಮ ಮತ್ತು ಹಿಂದೂ ಧರ್ಮ: ಗಾಂಧಿ ಆಲೋಚನೆಗಳು

ಗಾಂಧಿ ಬದುಕಿನ ಬಹುಮುಖ್ಯ ಮೌಲ್ಯವೆಂದರೆ ಧರ್ಮ. ಹಾಗಾಗಿಯೇ ಅವರು ಧರ್ಮವಿಲ್ಲದ ರಾಜಕಾರಣವಿಲ್ಲ ಎನ್ನುತ್ತಿದ್ದರು. ಅಂದರೆ ಲೌಕಿಕ ಬದುಕಿನ ಮುಖ್ಯ ಕೇಂದ್ರವೂ ಧರ್ಮವೇ. ಹಾಗಾಗಿ ಅವರ ಪ್ರಕಾರ ಧರ್ಮದ ಒಂದು ತುದಿ ಅಧ್ಯಾತ್ಮಿಕವಾಗಿದ್ದರೂ ಇನ್ನೊಂದು ತುದಿ ಲೌಕಿಕವಾದದ್ದು. ಆ ದೃಷ್ಟಿಯಿಂದಲೇ ಅವರಿಂದ ಆ ಕಾಲಕ್ಕೆ ಕ್ರಾಂತಿಕಾರಕವೆಂದು ಕರೆಯಬಹುದಾದ ಅವರ ಈ ಮುಖ್ಯ ಮಾತೂ ಹೊರಬಂದದ್ದು: 'ನನಗೆ ಎಂದಾದರೂ ಧರ್ಮ ಮತ್ತು ನೀತಿಗಳ ನಡುವೆ ಆಯ್ಕೆ ಮಾಡಿಕೊಳ್ಳುವ ಸಂದರ್ಭ ಬಂದರೆ ನಾನು ನೀತಿಯನ್ನು ಆಯ್ಕೆ ಮಾಡಿಕೊಂಡೇನು'. ಅಂದರೆ ಗಾಂಧಿ ತಮ್ಮನ್ನು (ಸನಾತನ) ಹಿಂದೂ ಎಂದು ಕರೆದುಕೊಂಡರೂ–ಅದು ಅವರಿಗೆ ಸಾರ್ವಜನಿಕ ಜೀವನದ ಒಂದು ಯುಕ್ತಿಯೂ ಆಗಿತ್ತೆಂದು ಕಾಣುತ್ತದೆ–ಅವರ ಆ ಎಲ್ಲ ಹಣೆಪಟ್ಟಿಗಳನ್ನೂ ಮೀರಿದ್ದರು.

ಗಾಂಧಿ ಹಿಂದೂ ಧರ್ಮವನ್ನು ಅಂದಿನ ಸವಾಲುಗಳಿಗೆ ತಕ್ಕಂತೆ–ಅಂದರೆ ಆಧುನಿಕ ನಾಗರೀಕತೆಯ ಒತ್ತಡಗಳಿಗೆ ಪ್ರತಿರೋಧ ಶಕ್ತಿಯಾಗಿ–ಪುನಾರಚಿಸುವುದೇ ತಾವು ಕಟ್ಟಬೇಕೆಂದಿದ್ದ ಹೊಸ ಸಭ್ಯತೆಯ ತಳಹದಿ ಹಾಕುವ ಕೆಲಸವೆಂದು ಭಾವಿಸಿದ್ದರು. ಹಿಂದೂ ಧರ್ಮಕ್ಕೆ ಸಂಬಂಧಿಸಿದಂತೆ ರಾಜಾರಾಂ ಮೋಹನರಾಯ್‌ರಿಂದ ಆರಂಭವಾಗಿ ಬ್ರಹ್ಮ ಸಮಾಜ, ಪ್ರಾರ್ಥನಾ ಸಮಾಜ, ರಾಮಕೃಷ್ಣ ಪರಮಹಂಸ, ವಿವೇಕಾನಂದ ಮತ್ತು ದಯಾನಂದ ಸರಸ್ವತಿಯವರ ಆರ್ಯಸಮಾಜದ ವರೆಗೆ ಕೈಗೊಳ್ಳಲಾಗಿದ್ದ ಸುಧಾರಣೆಗಳ ಮುಂದುವರಿಕೆಯಾಗಿ ಅವರು ಅದನ್ನು ಒಳಗಿಂದಲೇ ಬದಲಿಸಲು ಯತ್ನಿಸಿದರು. ಕಾಲಕ್ಕೆ ತಕ್ಕ ಹಿಂದೂ ಧರ್ಮವೊಂದನ್ನು ಪುನರನ್ವೇಷಿಸುವ ಮಹಾಪ್ರಯತ್ನ–ಪ್ರಯೋಗವೊಂದನ್ನು ಅವರು ಮಾಡಿದರು.

ಗಾಂಧಿ ಯಾವ ಧರ್ಮಗ್ರಂಥಗಳನ್ನೂ ನಿರಾಕರಿಸಲಿಲ್ಲವಾದರೂ, ಅವರ ಹಿಂದೂ ಧರ್ಮದ ಕೇಂದ್ರ ಮನುಷ್ಯನ ಆತ್ಮಸಾಕ್ಷಿಯಾಗಿತ್ತು. ಈ ಸಾರ್ವತ್ರಿಕ ಕೇಂದ್ರಪ್ರಜ್ಞೆಯನ್ನು ಅಳವಡಿಸಿಕೊಳ್ಳುವ ಮೂಲಕ ಅದು ಜಗತ್ತಿನ ಎಲ್ಲ ಧರ್ಮಗಳನ್ನೂ ಒಳಗೊಳ್ಳುವ ಶಕ್ತಿಯನ್ನೂ ಪಡೆಯಿತು.

ವೇದಗಳು ದೈವೀ ಮೂಲದವೆಂದು ಒಪ್ಪಿಕೊಂಡರೆ, ಬೈಬಲ್, ಕುರಾನ್, ಝೆಂದವೆಸ್ತಾಗಳು ಕೂಡ ದೈವೀ ಮೂಲದವೇ ಎಂದು ಒಪ್ಪಿಕೊಳ್ಳ ಬೇಕಾಗುತ್ತದೆ ಎನ್ನುವ ಮೂಲಕ ಅವರು, ತಮ್ಮನ್ನು ಸನಾತನ ಹಿಂದೂ ಎಂದು ಕರೆದುಕೊಂಡಾಗಲೆಲ್ಲ ಕೇವಲ ಹಿಂದೂ ಆಗಿರುತ್ತಿರಲಿಲ್ಲ; ಎಲ್ಲ ಧರ್ಮಗಳಿಗೂ ಸೇರಿದವರಾಗಿಬಿಡುತ್ತಿದ್ದರು. ಸನಾತನ ಎಂಬುದರ ಅರ್ಥವವೂ ಅದೇ ಆಗಿತ್ತು: ಆದಿಯಿಲ್ಲದ, ಅಂತ್ಯವಿಲ್ಲದ ನಿತ್ಯನೂತನತೆ ಅದು. ಅವರ ಪ್ರಕಾರ ಆತ್ಮಸಾಕ್ಷಿ ಎಂದರೆ ಅರಿವಿನ ಬಾಗಿಲು ತೆರೆದ ಹೃದಯ ಆಗಿತ್ತು. ಹಾಗಾಗಿಯೇ ಅವರು ತರ್ಕ ಮತ್ತು ಆತ್ಮಸಾಕ್ಷಿಗೆ ಸಲ್ಲದ ಯಾವುದೇ ಶಾಸ್ತ್ರವನ್ನು ಮಾನ್ಯ ಮಾಡಲು ನಿರಾಕರಿಸಿದರು. ಏಕೆಂದರೆ ಅವರ ಪ್ರಕಾರ ಅವು ಅನೀತಿಯುತವಾಗಿರುತ್ತಿದ್ದವು. ನೀತಿ ಎಂದರೆ ಅವರ ಪ್ರಕಾರ ಮಾನವತೆಯ–ನೆರೆಹೊರೆಯ–ಸೇವೆ ಆಗಿತ್ತು ಮತ್ತು ಆ ಸೇವೆಯ ಮೂಲಕವೇ ಸತ್ಯದ–ಅಂದರೆ ಭಗವಂತನ–ಸಾಕ್ಷಾತ್ಕಾರವಾಗಬೇಕಿತ್ತು. ಮತ್ತೆ ಅವರ ಪ್ರಕಾರ ಇದುವೇ ಮಾನವ ಬದುಕಿನ ಸಾರ್ಥಕತೆಯೂ ಆಗಿತ್ತು. ಹಿಂದೂ ಧರ್ಮವನ್ನು ಗಾಂಧಿ ವ್ಯಾಖ್ಯಾನಿಸಿದ್ದು ಹೀಗೆ: ಅಹಿಂಸೆಯ ಮೂಲಕ ಸತ್ಯದ ಅನ್ವೇಷಣೆ. ಇಂತಹ ವಿಶಿಷ್ಟ ಮತ್ತು ಆಧುನಿಕವಾದ ಧರ್ಮ ಮೀಮಾಂಸೆಯ ಕಾರಣದಿಂದಾಗಿಯೇ ಗಾಂಧಿ ತಮ್ಮ ಪ್ರಾಣದ ಬೆಲೆಯನ್ನೇ ತೆತ್ತು ತಾವು ತಮ್ಮ ೧೨೫ ವರ್ಷಗಳ ಬದುಕಿನಲ್ಲಿ ಹಾಕಬೇಕೆಂದಿದ್ದ ಹೊಸ ಸಮಾಜದ, ಹೊಸ ಸಭ್ಯತೆಯ ಅಡಿಪಾಯ ಹಾಕಲಾಗದಂತಾಯಿತು ಎಂಬುದನ್ನೂ ನಾವು ಇಲ್ಲಿ ಗಮನಿಸಬೇಕು.

ಗಾಂಧಿ ಪರಿಕಲ್ಪನೆಯ ವರ್ಣಧರ್ಮ

ಇದೆಲ್ಲ ಪೀಠಿಕೆಯೊಂದಿಗೆ ಈಗ ಗಾಂಧಿಯವರ ವರ್ಣಧರ್ಮ ಕುರಿತ ಚಿಂತನೆಗಳನ್ನು ಗಮನಿಸೋಣ. ಈ ಬಗ್ಗೆ ಅವರೇನೂ ಪ್ರತ್ಯೇಕ ಗ್ರಂಥ ಬರೆದಿಲ್ಲ. ಹಾಗೆ ನೋಡಿದರೆ ಅವರ ಚಿಂತನೆಗಳು ಈ ಹಿಂದೆ ಪ್ರಸ್ತಾಪಿಸಿದ 'ಹಿಂದ್ ಸ್ವರಾಜ್' ಮತ್ತು ಅವರ ಆತ್ಮ ಚರಿತ್ರೆಯೆನಿಸಿದ 'ನನ್ನ ಸತ್ಯಾನ್ವೇಷಣೆ'ಗಳ ಹೊರತಾಗಿ ಇನ್ನಾವುವನ್ನೂ ಅವರು ನಿರ್ದಿಷ್ಟವಾಗಿ ಗ್ರಂಥರೂಪದಲ್ಲಿ ಬರೆಯಲಿಲ್ಲವೆಂದು ಕಾಣುತ್ತದೆ. ಹಾಗಾಗಿ ಯಾವುದೇ ನಿರ್ದಿಷ್ಟ ವಿಷಯಗಳನ್ನು ಕುರಿತ ಅವರ ಚಿಂತನೆಗಳನ್ನು ಅವರ ಸಮಗ್ರ ಕೃತಿ ಸಂಪುಟಗಳಿಂದ ಹೆಕ್ಕಿ ತೆಗೆಯಬೇಕು. ಮುಖ್ಯವಾಗಿ ಅವರ ಸಂಪಾದಕತ್ವದ

'ಇಂಡಿಯನ್ ಒಪಿನಿಯನ್', 'ಯಂಗ್ ಇಂಡಿಯಾ' ಹಾಗೂ 'ಹರಿಜನ' ಪತ್ರಿಕೆಗಳು ಈ ಸಂಬಂಧವಾದ ಒಳ್ಳೆಯ ಆಕರಗಳು. ಕಳೆದ ಶತಮಾನದ ಎರಡನೇ ದಶಕದ ಹೊತ್ತಿಗೆ(1915) ಭಾರತಕ್ಕೆ ಬಂದು ರಾಷ್ಟ್ರಜೀವನದ ಕೇಂದ್ರ ಶಕ್ತಿಯಾಗಿ ಬೆಳೆದು ಹಲವು ಕ್ಷೇತ್ರಗಳ ಬಗ್ಗೆ ಆಳವಾಗಿ ಯೋಚಿಸಿ ಮಾತನಾಡತೊಡಗಿದ ಗಾಂಧಿ ತಮ್ಮ ಕೊನೆಯುಸಿರೆಳೆಯುವವರೆಗೂ ಬದುಕಿನ ತಮ್ಮ ಆಸಕ್ತಿಯ ಕ್ಷೇತ್ರಗಳನ್ನು ಸದಾ ವಿಸ್ತರಿಸಿಕೊಂಡು ಹೋಗುತ್ತಾ ಆ ಬಗ್ಗೆ ಮಾತನಾಡುತ್ತಲೇ ಇದ್ದರು. ಹೀಗೆ ಸಮಾಜದ ಧರ್ಮದ ಬಗ್ಗೆ ಗಾಂಧಿ ಮಾತನಾಡಿದ್ದನ್ನು, ಬರೆದಿದ್ದನ್ನು ಮೇಲೆ ತಿಳಿಸಿದ ಎರಡು–ಮೂರು ಪತ್ರಿಕೆಗಳಿಂದ ಹೆಕ್ಕಿ ಗಾಂಧಿ ಸ್ಮಾರಕ ನಿಧಿಯು 'ಸಮಾಜ ಧರ್ಮ' ಎಂಬ ಪುಸ್ತಕ ಪ್ರಕಟಿಸಿದೆ. ಅದರಲ್ಲಿನ ಉಲ್ಲೇಖಗಳನ್ನು ಆಧರಿಸಿ ನಾನಿಲ್ಲಿ ವರ್ಣಧರ್ಮ ಕುರಿತ ಗಾಂಧಿಯವರ ಚಿಂತನೆ–ನಿಲುವುಗಳನ್ನು ಮಂಡಿಸುತ್ತಿದ್ದೇನೆ. ಈ ಮಂಡನೆಯ ಹಿನ್ನೆಲೆಗೆ ಒದಗಿ ಬಂದಿರುವುದು ಹಿಂದೂ ಧರ್ಮ ಕುರಿತ ಗಾಂಧಿಯವರ ಹೊಸ ಆಲೋಚನೆಗಳು. ಇವು ಕೂಡ ನ್ಯಾಷನಲ್ ಬುಕ್ ಟ್ರಸ್ಟ್ ಪ್ರಕಟಿಸಿರುವ 'ಹಿಂದೂ ಧರ್ಮ ಎಂದರೇನು?' ಎಂಬ ಅವರ ಆಯ್ದ ಬರಹ–ಉಲ್ಲೇಖಗಳ ಸಂಗ್ರಹದಲ್ಲಿ ದೊರೆಯುತ್ತವೆ.

ಗಾಂಧಿ ಪ್ರಕಾರ ವರ್ಣಧರ್ಮ ಸನಾತನ ಹಿಂದೂ ಧರ್ಮದ ಸಾಮಾಜಿಕ ತಳಹದಿ. ಅದರಷ್ಟು ವೈಜ್ಞಾನಿಕವಾದ ಸಾಮಾಜಿಕ ರಚನೆ ಬೇರಾವ ಸಮಾಜಗಳಲ್ಲೂ ಕಂಡುಬರುವುದಿಲ್ಲ. ಅದು ಸಮಾಜದ ಮಾನವ ಸಂಪನ್ಮೂಲಗಳನ್ನು ನಾಲ್ಕು ವಿಶಾಲ ಗುಂಪುಗಳಾಗಿ ವಿಂಗಡಿಸಿ ಸಮಾಜಕ್ಕೆ ಬೇಕಾದ ಸೇವೆಗಳನ್ನು ಮನುಷ್ಯ ದೇಹವು ತನ್ನ ಕರಣಗಳಿಂದ ತನಗೆ ಅಗತ್ಯವಾದ ಸೇವೆಗಳನ್ನು ಪಡೆದಷ್ಟೇ ಸಹಜವಾಗಿ ಪಡೆದು ನೆಮ್ಮದಿಯಲ್ಲಿರಬಹುದಾಗಿದೆ. ಆ ಆರು ವಿಂಗಡಣೆಗಳೆಂದರೆ, ಜ್ಞಾನ ಸಂಪಾದನೆ ಮತ್ತು ಪ್ರಸಾರ ಸೇವೆಯ ಬ್ರಾಹ್ಮಣ ಗುಂಪು, ರಕ್ಷಣೆ ಇಲ್ಲದ ದುರ್ಬಲರಿಗೆ ರಕ್ಷಣೆಯ ಸೇವೆ ಒದಗಿಸಬಲ್ಲ ಕ್ಷತ್ರಿಯ ಗುಂಪು, ಕೃಷಿ ಮತ್ತು ವಾಣಿಜ್ಯ ವ್ಯವಹಾರಗಳ ಸೇವೆ ಒದಗಿಸಬಲ್ಲ ವೈಶ್ಯ ಗುಂಪು ಮತ್ತು ಈ ಎಲ್ಲ ಸೇವೆಗಳಿಗೆ ದೈಹಿಕ ಶ್ರಮ ಸೇವೆಯ ಮೂಲಕ ನೆರವಾಗಬಲ್ಲ ಶೂದ್ರ ಗುಂಪು. ಇವನ್ನು ಅವರವರ ಹುಟ್ಟು ಗುಣ ಮತ್ತು ಸಾಮರ್ಥ್ಯಗಳಿಗನುಸಾರವಾಗಿ ಕಾಲಾನುಕಾಲದಿಂದ ವಿಂಗಡಿಸಿ ವರ್ಣ ಧರ್ಮವನ್ನು ಜಾರಿಗೆ ತರಲಾಗಿದೆ.

ಇವು ಏನಿದ್ದರೂ ಸಾಮಾಜಿಕ ಸೇವೆಗಾಗಿ ಗುರುತಿಸಲ್ಪಟ್ಟ ಗುಂಪುಗಳೇ ಹೊರತು ಸಾಮಾಜಿಕವಾಗಿ ಪರಸ್ಪರ ಪ್ರತ್ಯೇಕವಾಗಿ ಒಡೆದುಕೊಂಡ ಗುಂಪುಗಳಲ್ಲ. ಅವು ತನ್ನ ಗ್ರಾಮ ಸಮಾಜಕ್ಕೆ ಅಗತ್ಯವಾದ ನಿಗದಿತ ಕ್ಷೇತ್ರದ ಸೇವೆಗಳನ್ನು ಒದಗಿಸುತ್ತವೆಯೇ ಹೊರತು, ಅವುಗಳಲ್ಲಿ ಶ್ರೇಣೀಕರಣವಿಲ್ಲ. ಆ ಸೇವೆಗಳಿಗೆ ಗ್ರಾಮ ಸಮಾಜದಿಂದ ಜೀವನೋಪಾಯಕ್ಕೆ ಬೇಕಾದ ಪ್ರತಿಫಲ ಪಡೆಯುತ್ತವೆ ಮತ್ತು ಅದರಲ್ಲಿ ಸೇವೆಯ ಪ್ರಕಾರವನ್ನನುಸರಿಸಿದ ವ್ಯತ್ಯಾಸಗಳಿರುವುದಿಲ್ಲ. ಏಕೆಂದರೆ ಅವು ಸೇವೆಗಳೇ ಹೊರತು ಸ್ತರೀಕೃತ ಅಧಿಕಾರ ಸ್ಥಾನಗಳಲ್ಲ. ಅವು ಒಂದೇ ಆರ್ಥಿಕತೆಯ ನಾಲ್ಕು ಕೈಗಳಷ್ಟೇ. ಅವಕ್ಕೆಲ್ಲ ಒಂದೇ ಪ್ರೇರಣೆ, ಗುರಿ: ಒಟ್ಟು ತನ್ನ ಗ್ರಾಮ ಸಮುದಾಯದ ಹಿತ, ಕಲ್ಯಾಣ. ಅವು ಮಾಡುವುದು ಉದ್ಯೋಗವಲ್ಲ; ಸಮಾಜದ ಸೇವೆಯಷ್ಟೆ. ಹಾಗಾಗಿ ಅವರ ಈ ಸೇವೆಯ ವ್ಯಾಪ್ತಿಯಲ್ಲೇ ಅವರ ಕುಟುಂಬಗಳ ಹಿತವೂ, ಕಲ್ಯಾಣವೂ ಸೇರಿಕೊಂಡಿದ್ದು ಅದರ ಅಗತ್ಯಗಳು ಸಹಜವಾಗಿ ಪೂರೈಸುತ್ತವೆ. ಗಾಂಧಿ ರಾವ್ ಬಹಾದುರ್ ಎಂ.ಸಿ. ರಾಜಾ ಎಂಬ ಅಸ್ಪೃಶ್ಯ ಸಮುದಾಯದ ನಾಯಕರೊಬ್ಬರೊಂದಿಗೆ ನಡೆಸಿರುವ ಸಂವಾದದಲ್ಲಿ ('ಹರಿಜನ': 28, ಮಾರ್ಚ್, 1936), ಸನಾತನ ಧರ್ಮದ ಪ್ರಕಾರ ಒಬ್ಬ ಬ್ರಾಹ್ಮಣ, ಒಂದು ಆನೆ, ಒಂದು ಇರುವೆ ಮತ್ತು ಒಬ್ಬ ಭಂಗಿ ಸಮನಾದ ಸ್ಥಾನ ಹೊಂದಿರುತ್ತಾರೆ ಎಂದು ತಿಳಿಸುತ್ತಾರೆ. ಈ ಭಾವನೆಯಿಂದಾಗಿಯೇ ಒಬ್ಬ ವಕೀಲ ಮತ್ತು ಒಬ್ಬ ಚಮ್ಮಾರನ ಕಾಯಕ ಸಾಮಾಜಿಕವಾಗಿ ಒಂದೇ ಮೌಲ್ಯವನ್ನುಳ್ಳವು ಎಂಬ ನಂಬಿಕೆಯನ್ನು ಆಧರಿಸಿದ ಜಾನ್ ರಸ್ಕಿನ್‌ನ ಅನ್‌ಟು ದ ಲಾಸ್ಟ್ ಕೃತಿ ಗಾಂಧಿಯವರ ಗಮನ ಸೆಳೆದು ಅವರಲ್ಲಿ 'ಸರ್ವೋದಯ' ಎಂಬ ಕಲ್ಪನೆಗೆ ಕಾರಣವಾದದ್ದು.

ವರ್ಣಧರ್ಮ v/s ಜಾತಿ ಪದ್ಧತಿ

ಗಾಂಧಿ ತಮ್ಮ ಈ ವರ್ಣಧರ್ಮವನ್ನು ವಿವರಿಸಿದಾಗ ಸಹಜವಾಗಿಯೇ ಜನರಿಂದ ಅನೇಕ ಟೀಕೆಗಳನ್ನೂ, ಆಕ್ಷೇಪಣೆಗಳನ್ನೂ, ಪ್ರಶ್ನೆಗಳನ್ನೂ ಎದುರಿಸಬೇಕಾಯಿತು. ಇದಕ್ಕೆ ಮುಖ್ಯ ಕಾರಣ, ಜನ ಇವರ ವರ್ಣಧರ್ಮವನ್ನು ತಾವು ಪಾಲಿಸುತ್ತಿದ್ದ ಅಥವಾ ತಮ್ಮ ಮೇಲೆ ಅನ್ಯಾಯವಾಗಿ ಹೇರಲ್ಪಟ್ಟಿದೆಯೆಂದು ಭಾವಿಸಲ್ಪಟ್ಟಿದ್ದ ಜಾತಿ ಪದ್ಧತಿಯೊಂದಿಗೆ ಗೊಂದಲಗೊಳಿಸಿಕೊಂಡದ್ದು. ಗಾಂಧಿ ಪ್ರಕಾರ

ಜಾತಿಪದ್ಧತಿಗೂ, ವರ್ಣಧರ್ಮಕ್ಕೂ ಸಂಬಂಧವಿಲ್ಲ. ಅದು ವರ್ಣಧರ್ಮದ ಅವನತಿಗೊಂಡ ರೂಪ. ಗ್ರಾಮ ಸಮಾಜ ತನ್ನ ಸ್ವಾಯತ್ತತೆಯನ್ನು ಕಳೆದುಕೊಂಡು ದೊಡ್ಡ ಸಮಾಜಗಳೊಂದಿಗೆ ಸಂಬಂಧ ಬೆಳೆಸಿ ಅವುಗಳಲ್ಲಿ ಲೀನವಾಗತೊಡಗಲು ಕಾರಣವಾದ ಸ್ಪರ್ಧಾತ್ಮಕ ರಾಜಕೀಯ–ಆರ್ಥಿಕ ಕಾರಣಗಳಿಂದಾಗಿ ಹುಟ್ಟಿಕೊಂಡ ಪದ್ಧತಿ ಅದಿರಬಹುದು. ಈ ಬಗ್ಗೆ ಗಾಂಧಿ ನಿರ್ದಿಷ್ಟವಾಗಿ ಏನೂ ಹೇಳುವುದಿಲ್ಲ. 'ಜಾತಿ ಪದ್ಧತಿ ಹೇಗೆ ಹುಟ್ಟಿಕೊಂಡಿತು ಎಂಬುದು ನನಗೆ ತಿಳಿಯದು; ಅದನ್ನು ತಿಳಿಯುವ ಅಗತ್ಯವೂ ನನಗಿಲ್ಲ' ಎನ್ನುವ ಅವರು, ಸಮಾಜವನ್ನು ಮೇಲು ಕೀಳುಗಳೆಂದು ಒಡೆದಿರುವ ಜಾತಿ ಪದ್ಧತಿ ಕೂಡಲೇ ಹೋಗಬೇಕು; ಅದು ಸಮಾಜಕ್ಕೆ, ದೇಶಕ್ಕೆ ಕೆಡುಕನ್ನಷ್ಟೇ ಉಂಟು ಮಾಡುತ್ತದೆ ಎನ್ನುತ್ತಾರೆ. ಏಕೆಂದರೆ, ವರ್ಣ ಪದ್ಧತಿಯಲ್ಲಿಲ್ಲದ ಶ್ರೇಣೀಕರಣ ಜಾತಿ ಪದ್ಧತಿಯಲ್ಲಿದೆ ಎಂದು ಅವರು ಭಾವಿಸುತ್ತಾರೆ.

ನಿಜ, ಗಾಂಧಿ ಸಾರ್ವಜನಿಕ ಜೀವನದಲ್ಲಿ ಹಲವು ಬಾರಿ ಬೇರೆ ಬೇರೆ ಜಾತಿಗಳಿಗೆ ಸೇರಿದ ವ್ಯಕ್ತಿಗಳ ಮದುವೆಗೆ ಅಸಮ್ಮತಿ ತೋರಿದ್ದು ಹೌದು. (ಮುಖ್ಯ ಉದಾಹರಣೆಗಳೆಂದರೆ, ಕೃಪಲಾನಿ–ಸುಚೇತಾ, ಇಂದಿರಾ –ಫಿರೋಜ಼್ ಗಾಂಧಿ ಮದುವೆಗಳು) ಆದರೆ ಸೂಕ್ಷ್ಮವಾಗಿ ಗಮನಿಸಿದಾಗ ಗೊತ್ತಾಗುವುದೇನೆಂದರೆ, ಅವರು ಅಸಮ್ಮತಿಯನ್ನು ಸೂಚಿಸುತ್ತಿದ್ದುದು ತಮ್ಮ ಚಿಂತನೆಗಳನ್ನು ಬೆಳೆಸಬಲ್ಲವರೆಂದು ಅವರು ನಂಬಿದ್ದ ತಮ್ಮ ನೆಚ್ಚಿನ ಶಿಷ್ಯ/ಶಿಷ್ಯೆಯರನ್ನು ಕಳೆದುಕೊಳ್ಳಲಿಚ್ಛಿಸದಿದ್ದುದರಿಂದ ಅಥವಾ ಅವು ವರ್ಣಾಂತರ ವಿವಾಹಗಳಾದ್ದರಿಂದ ಎಂಬುದು. ಆದರೆ ನಂತರದ ದಿನಗಳಲ್ಲಿ ಈ ವರ್ಣಾಂತರ ಮದುವೆಗಳನ್ನೂ ಅವರು ಒಪ್ಪಿಕೊಳ್ಳ ತೊಡಗುವಷ್ಟು ಬದಲಾಗುತ್ತಾರೆ ಎಂಬುದನ್ನು ನಾವು ಗಮನಿಸಬೇಕು. ಇದಕ್ಕೆ ಕಾರಣ, ಬ್ರಿಟಿಷ್ ಪ್ರಭುತ್ವದ ಸೇವೆ ಮಾಡುತ್ತಿರುವ ಭಾರತೀಯರೆಲ್ಲರೂ ಶೂದ್ರರೇ ಆಗಿದ್ದಾರೆ ಎಂದು ಗಾಂಧಿ ಭಾರತದ ಆಧುನಿಕ ಸಂದರ್ಭದಲ್ಲಿ ವರ್ಣಧರ್ಮವನ್ನು ಅರ್ಥೈಸತೊಡಗಿದ್ದು. ಮೊದಮೊದಲು ಜಾತಿ ಮತ್ತು ವರ್ಣಗಳ ನಡುವೆ ವ್ಯತ್ಯಾಸಗಳನ್ನು ಕಾಣದಿದ್ದಂತೆ ತೋರುತ್ತಿದ್ದ ಗಾಂಧಿ, ೧೯೩೩ರ ಹೊತ್ತಿಗೆ ಜಾತಿ ಹೋಗಲೇಬೇಕು ಎನ್ನತೊಡಗಿದರು. ಜಾತಿ ಲೌಕಿಕವಾಗಲೀ, ಅಧ್ಯಾತ್ಮಿಕವಾಗಲೀ ಭಾರತೀಯನನ್ನು ಪೋಷಿಸಲಾರದು ಎಂದು ಘೋಷಿಸಿದರು. ಈ ಬಗ್ಗೆ 'ಹರಿಜನ'ದ ಸಂಚಿಕೆಗಳಲ್ಲಿ ಲೇಖನಗಳನ್ನು ಬರೆದರು.

ಇಂದು ಬ್ರಾಹ್ಮಣನೆಂದರೆ ಯಾರು?

ಈ ಹಿನ್ನೆಲೆಯಲ್ಲಿ, , ಗಾಂಧಿ ಎತ್ತಿಹಿಡಿದ ವರ್ಣಧರ್ಮವನ್ನು ತಪ್ಪಾಗಿ ಅರ್ಥೈಸಿಕೊಳ್ಳಲು ಕಾರಣವಾದ ಜಾತಿ ಪದ್ಧತಿಯಲ್ಲಿನ ಶ್ರೇಣೀಕರಣಕ್ಕೆ ಮೂಲವಾದ 'ಬ್ರಾಹ್ಮಣ'ನ ಕಲ್ಪನೆಯನ್ನು ಅವರು ಅರ್ಥೈಸಿದ ಪರಿಯನ್ನು ನಾವು ಬಹು ಎಚ್ಚರದಿಂದ ಗಮನಿಸಬೇಕು. ಏಕೆಂದರೆ, ಬಹು ಕುತೂಹಲಕಾರಿಯೆನ್ನಿಸುವ ಈ ವ್ಯಾಖ್ಯಾನ ಅವರ ನಂಬಿಕೆಯ ವರ್ಣಧರ್ಮವನ್ನು ಸಹಾನುಭೂತಿಯಿಂದ ಅರಿಯಲು ಸಹಾಯಕವಾಗುವಂತಿದೆ. ಗಾಂಧಿ ಪ್ರಕಾರ ಬ್ರಿಟಿಷ್ ಪ್ರಭುತ್ವದಡಿಯ ಬ್ರಾಹ್ಮಣನ ಮುಖ್ಯ ಕರ್ತವ್ಯ ವೇದಗಳನ್ನು ಅಕ್ಷರಶಃ ಪಠಣ ಮಾಡುವುದಲ್ಲ; ಬದಲಿಗೆ ಅವುಗಳ ಸಂದೇಶವನ್ನು–ಜ್ಞಾನ ಸಾರವನ್ನು–ಕಾಲಕ್ಕೆ ತಕ್ಕಂತೆ ಅನ್ವಯಿಸಿ ಹೇಳುವುದು. ಹಾಗಾದಾಗ ಗಾಂಧಿಯವರ ಪ್ರಕಾರ ಅಂದಿನ ಬ್ರಾಹ್ಮಣನಿಗೆ ರಾಟೆ ತಿರುಗಿಸುವುದು ಅವನ ಧರ್ಮವಾಗುತ್ತದೆ. ಅಸ್ಥಿಪಂಜರಗಳಾಗಿರುವ ತನ್ನ ಸುತ್ತಲಿನ ಜನಕ್ಕೆ ಇಂದು ಏನು ಬೇಕಾಗಿದೆ ಎಂದು ಆಲೋಚಿಸುವುದೇ ಅಂದಿನ ನಿಜವಾದ ಜ್ಞಾನ ಸಂಪಾದನೆ. ಹಾಗಾಗಿ ಆತ ಚರಕ ತಿರುಗಿಸುವ ಮೂಲಕ ತನ್ನ ಈ ಜ್ಞಾನ ಪ್ರಸಾರ ಮಾಡಬೇಕು. ವೇದ ಜ್ಞಾನದ ಸಾರ ಇದು ಎನ್ನುತ್ತಾರೆ ಗಾಂಧಿ. ವೇದಗಳನ್ನು ಕುರಿತು ಇದಕ್ಕಿಂತ ಕ್ರಾಂತಿಕಾರಕವಾದ ವ್ಯಾಖ್ಯಾನ ಇನ್ನೊಂದುಂಟೆ? ತಿಳಿದವರು, ಗಾಂಧಿ ಶ್ರೇಣೀಕೃತ ಜಾತಿ ಪದ್ಧತಿಯ ಪರವಾಗಿದ್ದರು ಎಂದು ನಂಬಿದವರು ಹೇಳಬೇಕು.

ಆದರೆ ಒಬ್ಬ ವ್ಯಕ್ತಿ ತನ್ನ ಪೂರ್ವಜರ ವೃತ್ತಿಯನ್ನೇ (ಅಥವಾ ಗಾಂಧಿ ಪರಿಭಾಷೆಯಲ್ಲಿ ಹೇಳುವುದಾದರೆ ಸಾಮಾಜಿಕ ಸೇವೆಯನ್ನೇ) ಮುಂದುವರೆಸಬೇಕು ಎನ್ನುವ ಅವರ ಮಾತಿಗೆ ಹಲವು ಆಕ್ಷೇಪಗಳಿವೆ. ಅವರು ಈ ಮಾತುಗಳನ್ನಾಡಿದಾಗಲೂ ಹಲವರು ಸಿಟ್ಟಿನಿಂದ ಇದು ಜಾತಿ ಪದ್ಧತಿಯೇ ಅಲ್ಲವೆ? ಎಂದು ಕೇಳಿದರು. ಅದಕ್ಕೆ ಗಾಂಧಿ ನೀಡಿದ ಉತ್ತರ: ಇದು ವೃತ್ತಿಗಳ ಪರಿಣಿತಿಯನ್ನೂ, ಕ್ರಿಯಾಶೀಲತೆಯನ್ನೂ ಹೆಚ್ಚಿಸುತ್ತಾ ಹೋಗುತ್ತದಲ್ಲದೆ, ಸಮಾಜದಲ್ಲಿ ಅನಗತ್ಯ ವೃತ್ತಿ ಸ್ಪರ್ಧೆ ಉಂಟಾಗಿ ಸಾಮಾಜಿಕ ನೆಮ್ಮದಿ ಕೆಡುವುದನ್ನು ತಡೆಯುತ್ತದೆ; ಸಾಮಾಜಿಕ ಸ್ಥಿರತೆಯನ್ನು ಕಾಪಾಡುತ್ತದೆ. ಆದರೆ ಈ ನಿಯಮ ಒಂದು ವರ್ಣದವರು ಇನ್ನೊಂದು ವರ್ಣದ ಕೆಲಸಗಳನ್ನು ಮಾಡಬಾರದೆಂದೇನೂ ನಿರ್ಬಂಧಿಸುವುದಿಲ್ಲ.

ಒಲವಿದ್ದಲ್ಲಿ ಯಾರು ಯಾವ ಕೆಲಸವನ್ನಾದರೂ ಮಾಡಬಹುದು. ಆದರೆ ಅದನ್ನು ಸ್ವಸಂತೋಷಕ್ಕಾಗಿ ಮಾಡಬೇಕೇ ಹೊರತು ಉಪಜೀವನಕ್ಕಾಗಿ, ಹೆಚ್ಚಿನ ಆದಾಯ ನಿರ್ಮಾಣಕ್ಕಾಗಿ (ಅಥವಾ ಗಾಂಧಿಯವರ ಪರಿಭಾಷೆಯಲ್ಲಿ ಹೇಳುವುದಾದದರೆ ಹೆಚ್ಚಿನ ಸಾಮಾಜಿಕ ಪ್ರತಿಫಲಕ್ಕಾಗಿ) ಅಲ್ಲ. ಏಕೆಂದರೆ ಅದು ಸಮಾಜದಲ್ಲಿ ದುರಾಶೆ ಮತ್ತು ನಂತರದ ಏರುಪೇರು–ಅಶಾಂತಿಗಳಿಗೆ ಕಾರಣವಾಗಿ ಮನುಷ್ಯ ಜೀವನದ ಆತ್ಯಂತಿಕ ಗುರಿಯಾದ ಅಧ್ಯಾತ್ಮಿಕ ಸಾಧನೆಗೆ–ಸತ್ಯ ಅಥವಾ ಭಗವಂತನ ಸಾಕ್ಷಾತ್ಕಾರಕ್ಕೆ–ಭಂಗ ತರುತ್ತದೆ.

ಹಿಂದೂ ಧರ್ಮ ಮತ್ತು ಗೋರಕ್ಷಣೆ

ಧರ್ಮವನ್ನು ಇನ್ನೊಬ್ಬರನ್ನು ಮುಟ್ಟಿಸಿಕೊಳ್ಳುವ, ಇನ್ನೊಬ್ಬರೊಡನೆ ಊಟ ಮಾಡುವ ಅಥವಾ ದಾಂಪತ್ಯ ನಡೆಸುವುದರ ಬಗ್ಗೆ ನಿರ್ಧರಿಸುವ ಮಟ್ಟಕ್ಕೆ ಇಳಿಸಬಾರದೆಂದು ಹೇಳುವ ಗಾಂಧಿ, ವರ್ಣಾಂತರ ಭೋಜನ ಹಾಗೂ ವರ್ಣಾಂತರ ವಿವಾಹಗಳು ವರ್ಣಧರ್ಮಕ್ಕೆ ವಿರುದ್ಧವಲ್ಲ ಎನ್ನುತ್ತಾರೆ. ವರ್ಣಾಂತರ ವಿವಾಹದಲ್ಲಿ ಪತ್ನಿ ಗಂಡನ ವರ್ಣವನ್ನು ಪಡೆದು ಹುಟ್ಟಿದ ಮಗು ತಂದೆಯ ವರ್ಣಕ್ಕೆ ಬಾಧ್ಯಸ್ಥವಾಗುತ್ತದೆ ಎಂದು ಅವರು ಅಭಿಪ್ರಾಯಪಡುತ್ತಾರೆ. ತಾವು ಹೇಳುವ ಈ ವರ್ಣಧರ್ಮಕ್ಕೆ ಶಾಸ್ತ್ರಗಳ ಬೆಂಬಲವೂ ಇದೆಯೆಂದು ಅವರು ಮುಖ್ಯವಾಗಿ ಭಗವದ್ಗೀತೆ, ವಿಷ್ಣು ಭಾಗವತ, ಮಹಾಭಾರತದ ವನಪರ್ವಗಳಿಂದಷ್ಟೇ ಅಲ್ಲದೆ, ಮನುಸ್ಮೃತಿಯಿಂದಲೂ ಮಂತ್ರ–ಶ್ಲೋಕಗಳನ್ನು ಉಲ್ಲೇಖಿಸುತ್ತಾರೆ. ಅಸ್ಪೃಶ್ಯತೆಯ ಆಚರಣೆ ಧರ್ಮದೊಳಕ್ಕೆ ಚರಿತ್ರೆಯ ಆಕಸ್ಮಿಕಗಳಲ್ಲೊಂದಾಗಿ ಹೇಗೋ ಯಾವಾಗಲೋ ನುಸುಳಿಕೊಂಡ ಕೆಡುಕಾಗಿದ್ದು, ಅದನ್ನು ನಿವಾರಿಸಿಕೊಂಡು ವರ್ಣಧರ್ಮದ ಸಾಮಾಜಿಕ ಸಮತೋಲನವನ್ನು ಪುನಃಸ್ಥಾಪಿಸಿಕೊಳ್ಳಬೇಕಾಗಿದೆ ಎನ್ನುತ್ತಾರೆ ಗಾಂಧಿ. ಹಿಂದೂಧರ್ಮೀಯರಲ್ಲಿ ವ್ಯಾಪಕವಾಗಿ ಇದ್ದಿರಬಹುದಾದ ಗೋಮಾಂಸ ಭಕ್ಷಣೆಯನ್ನು ಯಾವುದೋ ಒಂದು ಕಾಲದಲ್ಲಿ ನಿಷಿದ್ಧಗೊಳಿಸಿದ ಪರಿಣಾಮವಾಗಿ ಗೋಮಾಂಸ ಭಕ್ಷಣೆಯನ್ನು ಮುಂದುವರೆಸಿದವರು ಬಹಿಷ್ಕೃತರಾಗಿ ಅಸ್ಪೃಶ್ಯರೆನಿಸಿಕೊಂಡಿರಬಹುದೆಂದು ಅವರು ಊಹಿಸುತ್ತಾರೆ. ಇಲ್ಲಿ ಗಮನಿಸಬೇಕಾದ ವಿಶೇಷ ಸಂಗತಿಯೆಂದರೆ,

ಗೋ ರಕ್ಷಣೆಯ ಪ್ರಾಮುಖ್ಯತೆಯನ್ನು ಪ್ರತಿಪಾದಿಸುವ ಗಾಂಧಿ, ಅಸ್ಪೃಶ್ಯತಾ ನಿವಾರಣೆಯ ಕಾರ್ಯಕ್ರಮಗಳಲ್ಲಿ ಗೋಮಾಂಸ ಭಕ್ಷಣೆಯ ನಿಷೇಧವನ್ನು ಸೇರಿಸಿಲ್ಲ ಎಂಬುದು. (ಇಂದು ಗೋರಕ್ಷಣಾ ಆಂದೋಲನದ ಭಾಗವಾಗಿ ಆಹಾರಕ್ಕಾಗಿ ಹಸು-ಎಮ್ಮೆ-ಎತ್ತುಗಳನ್ನು ಕೊಲ್ಲುವುದನ್ನು ನಿಷೇಧಿಸುವುದರ ಪರವಾಗಿರುವ ಕಾರ್ಯಕರ್ತರು ಈ ಸಂಬಂಧವಾಗಿ ಗಾಂಧಿಯವರ ಗೋರಕ್ಷಣೆ ಕುರಿತ ಮಾತುಗಳನ್ನು ಉಲ್ಲೇಖಿಸುತ್ತಾರೆ. ಆದರೆ ಗಾಂಧಿ ಮನುಷ್ಯರನ್ನು ಕೊಂದು ಗೋವುಗಳನ್ನು ರಕ್ಷಿಸುವ ಮತ್ತು ಗೋಮಾಂಸವನ್ನು ಆಹಾರ ಮಾಡಿಕೊಂಡಿರುವ ಹಲವು ಧರ್ಮಗಳ ಜನರಿದ್ದರೂ, ಒಂದು ನಿರ್ದಿಷ್ಟ ಧರ್ಮೀಯರ ವಿರುದ್ಧ ಮಾತ್ರ ಈ ಆಂದೋಲನ ಉದ್ದೇಶಿತವಾಗಿರುವುದರ ವಿಪರ್ಯಾಸವನ್ನು ಸೂಚಿಸಿದ್ದರು ಎಂಬುದನ್ನು ಅವರು ಮರೆತಿದ್ದಾರೆ.)

ಗಾಂಧಿ ಮತ್ತು ಅಸ್ಪೃಶ್ಯತೆ : ಅಂಬೇಡ್ಕರ್‌ಪೂರ್ವ ಚರಿತ್ರೆ

ಗಾಂಧಿ ಅಸ್ಪೃಶ್ಯತೆಯನ್ನು ಎಷ್ಟು ಗಂಭೀರವಾದ ಕೆಡುಕು ಎಂದು ಪರಿಗಣಿಸಿದ್ದರೆಂದರೆ, ಅದು ಆಧುನಿಕ ನಾಗರೀಕತೆಯ ಆಕ್ರಮಣಶೀಲತೆಯ ವಿರುದ್ಧ ಅವರು ಆರಂಭಿಸಿದ (ರಾಷ್ಟ್ರೀಯ) ಆಂದೋಲನದ (ಸ್ವದೇಶಿ ಮತ್ತು ಹಿಂದೂ-ಮುಸ್ಲಿಂ ಐಕ್ಯತೆಗಳೊಂದಿಗೆ) ಒಂದು ಅವಿಭಾಜ್ಯ ಅಂಗವಾಯಿತು. ಅಸ್ಪೃಶ್ಯತೆಯ ಬಗ್ಗೆ ಗಾಂಧಿ ಗಂಭೀರವಾಗಿ ಆಲೋಚಿಸತೊಡಗಿದ್ದು ಮತ್ತು ಅದರ ವಿರುದ್ಧ ಕಾರ್ಯಕ್ರಮಗಳನ್ನು ರೂಪಿಸಿದ್ದು ಅಂಬೇಡ್ಕರ್ ಅವರ ಒತ್ತಡದಿಂದ ಎಂಬ ಅಭಿಪ್ರಾಯ ಕೆಲವೆಡೆ ಇದೆ. ಆದರೆ ಅದು ತಪ್ಪು ಅಭಿಪ್ರಾಯ ಎಂಬುದು ಗಾಂಧಿಯವರ ಜೀವನ ಚರಿತ್ರೆಯನ್ನು ಓದಿದಾಗ ಗೊತ್ತಾಗುತ್ತದೆ. ಅಂಬೇಡ್ಕರ್ ಸಾರ್ವಜನಿಕ ಜೀವನ ಪ್ರವೇಶ ಮಾಡಿದ್ದು ೧೯೨೪ರ ಹೊತ್ತಿಗೆ, 'ಬಹಿಷ್ಕೃತ ಹಿತಕಾರಿಣಿ ಸಭಾ'ದ ಸ್ಥಾಪನೆಯೊಂದಿಗೆ ಎಂದು ಹೇಳಬಹುದು. ಆದರೆ ಅಸ್ಪೃಶ್ಯತೆಯ ವಿರುದ್ಧದ ಗಾಂಧಿ ಹೋರಾಟ ಇದಕ್ಕೆ ಬಹುಮುನ್ನವೇ ಆರಂಭವಾಗಿತ್ತು ಎಂಬುದನ್ನು ನಾವು ಗಮನಿಸಬೇಕು. ತಮ್ಮ ಬಾಲ್ಯದಲ್ಲಿಯೇ ತಮ್ಮ ಮನೆಯ ಶೌಚಾಲಯವನ್ನು ಸ್ವಚ್ಛಗೊಳಿಸಲು ಬರುತ್ತಿದ್ದ ಅಸ್ಪೃಶ್ಯನೊಬ್ಬನ ಒಡನಾಟಕ್ಕೆ ಆಕ್ಷೇಪಿಸುತ್ತಿದ್ದ, ಆತನನ್ನು ಮುಟ್ಟಿಸಿಕೊಂಡ ಸೂಚನೆ ದೊರೆತೊಡನೆ ತಮಗೆ ಸ್ನಾನ ಮಾಡಿಸಲು ಮುಂದಾಗುತ್ತಿದ್ದ ತಮ್ಮ ತಾಯಿಯ ವರ್ತನೆಯನ್ನು

ಧರ್ಮ ಜಿಜ್ಞಾಸುವಾಗಿದ್ದ ತಮ್ಮ ತಂದೆಯ ಪ್ರಭಾವದಲ್ಲಿ ಪರಿಹಾಸ್ಯ ಮಾಡುತ್ತಿದ್ದುದನ್ನು ಗಾಂಧಿ ತಮ್ಮ ಆತ್ಮಚರಿತ್ರೆಯಲ್ಲಿ ದಾಖಲಿಸಿದ್ದಾರೆ. ಈ ಮೌಢ್ಯಾಚಾರದ ವಿರುದ್ಧ ಮುಂದೆ ಅವರ ಯೌವ್ವನದ ದಿನಗಳಲ್ಲಿ ಅವರ ಮನಸ್ಸು ಕಂಗೆಡುತ್ತಾ ಹೋದುದರ ಹಲವು ದಾಖಲೆಗಳು ನಮಗೆ ಸಿಗುತ್ತವೆ. ಉದಾಹರಣೆಗೆ, ೧೮೯೮ರಲ್ಲೇ ಅವರು ದ. ಆಫ್ರಿಕಾದ ಡರ್ಬಾನ್‌ನಲ್ಲಿ ವಕೀಲಿ ವೃತ್ತಿ ನಡೆಸುತ್ತಿದ್ದಾಗ ಅವರ ಮನೆಯಲ್ಲೇ ವಾಸಿಸುತ್ತಿದ್ದ ತಮ್ಮ ದಲಿತ ಸಹಾಯಕನೊಬ್ಬನ ಶೌಚವನ್ನು ಸ್ವಚ್ಛಗೊಳಿಸಲು (ಹೊಸದಾಗಿ ಬಂದ ಅತಿಥಿಯ ಕೊಠಡಿಯ ಶೌಚಾಲಯವನ್ನು ಸ್ವಚ್ಛಮಾಡುವುದು ಮನೆಯೊಡೆಯರ ಕರ್ತವ್ಯ ಎಂಬ ಅರಿವಿನಲ್ಲಿ) ನಿರಾಕರಿಸಿದ ತಮ್ಮ ಪತ್ನಿ ಕಸ್ತೂರ್‌ಬಾರನ್ನೇ ಮನೆಯಿಂದ ಹೊರತಳ್ಳಲುಧ್ಯುಕ್ತರಾದ ಘಟನೆಯನ್ನು ಇಲ್ಲಿ ಮುಖ್ಯವಾಗಿ ಉಲ್ಲೇಖಿಸಬಹುದು. ಹಾಗೇ, ದ. ಆಫ್ರಿಕಾದಲ್ಲಿ ವರ್ಣೀಯತೆಯ ವಿರುದ್ಧ ಸತ್ಯಾಗ್ರಹ ನಡೆಸುತ್ತಿದ್ದ ಸಂದರ್ಭದಲ್ಲಿ ಸೆರೆಮನೆ ಸೇರಿದ ಭಾರತೀಯರು ತಮ್ಮ ನಡುವಿದ್ದ ಅಸ್ಪೃಶ್ಯರನ್ನು ಪ್ರತ್ಯೇಕಿಸುವ ಪ್ರವೃತ್ತಿ ತೋರಿದಾಗ ಅದರ ವಿರುದ್ಧ ಜನರನ್ನು ಎಚ್ಚರಿಸಿದರು. ಭಾರತೀಯರು ತಮ್ಮದೇ ಸಮುದಾಯದ ಒಂದು ಭಾಗವನ್ನು ಅವಮಾನಿಸುವ ಈ ಪಾರಂಪರಿಕ ಆಚರಣೆಗೆ ತಕ್ಕ ಪ್ರತಿಫಲವಾಗಿಯೇ ಅವರು ಬಿಳಿಯರಿಂದ ತಾರತಮ್ಯಗಳನ್ನು ಎದುರಿಸುವ ಅವಮಾನಗಳಿಗೆ ಈಡಾಗಬೇಕಾಗಿದೆ ಎಂದರು. ತಮ್ಮ ಸಂಪಾದಕತ್ವದ 'ಇಂಡಿಯನ್ ಒಪಿನಿಯನ್' ಪತ್ರಿಕೆಯಲ್ಲಿ (೧೯೦೭ರ ಮೇ ೧೧ರ ಸಂಚಿಕೆ) ಈ ಬಗ್ಗೆ ಒಂದು ಲೇಖನವನ್ನೂ ಬರೆದು ಸವರ್ಣೀಯರಿಗೆ ಛೀಮಾರಿ ಹಾಕಿದರು.

ಗಾಂಧಿ ಭಾರತಕ್ಕೆ ಹಿಂದಿರುಗಿದ ನಂತರವೂ ಅನೇಕ ಕಡೆ ಮಾಡಿದ ಭಾಷಣಗಳಲ್ಲಿ ಮತ್ತು ಬರೆದ ಲೇಖನಗಳಲ್ಲಿ ಅಸ್ಪೃಶ್ಯತೆಯನ್ನು ಒಂದು ಸಾಮಾಜಿಕ ಪಿಡುಗೆಂದೇ ಪರಿಗಣಿಸಿ ಅದನ್ನು ರಾಷ್ಟ್ರೀಯ ಹೋರಾಟದ ಒಂದು ಅವಿಭಾಜ್ಯ ಭಾಗವನ್ನಾಗಿ ಮಾಡಿ, ಅದರ ವಿರುದ್ಧ ಹೋರಾಟವನ್ನು ಸಂಘಟಿಸತೊಡಗಿದರು. ಅಸ್ಪೃಶ್ಯತೆಯನ್ನು ಆಚರಿಸುವ ನಾವು ಬ್ರಿಟಿಷರ ಗುಲಾಮಗಿರಿಗೆ ಅರ್ಹರೇ ಆಗಿದ್ದೇವೆ ಎಂದರು. ಸಾಂಪ್ರದಾಯಿಕ ಹಿಂದೂಗಳು ಅಸ್ಪೃಶ್ಯತೆಯನ್ನು ಸಮರ್ಥಿಸುವ ಶಾಸ್ತ್ರಗಳನ್ನು ಉಲ್ಲೇಖಿಸಿದಾಗ ವಿವೇಚನೆ ಮತ್ತು ಸಾಮಾಜಿಕ ನೀತಿಯ ಪರೀಕ್ಷೆಯಲ್ಲಿ ತೇರ್ಗಡೆಯಾಗದ ಶಾಸ್ತ್ರಗಳನ್ನು ಪ್ರಕ್ಷಿಪ್ತವೆಂದು

ತಿರಸ್ಕರಿಸಬೇಕೆಂದರು. ಐದನೇ ಭಾಗದಷ್ಟು ಜನರನ್ನು ಗುಲಾಮ ಗಿರಿಯಲ್ಲಿರಿಸಿಕೊಂಡ ಜನ ಸ್ವರಾಜ್ಯಕ್ಕೆ ಯೋಗ್ಯರಲ್ಲ ಎಂದೂ ಘೋಷಿಸಿದರು. ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡವನ್ನು ಪ್ರಸ್ತಾಪಿಸುತ್ತಾ ಅವರು, ಈ ಹತ್ಯಾಕಾಂಡ ನಡೆಸಿದವರು ಅಸ್ಪೃಶ್ಯತೆಯೆಂಬ ಕೌರ್ಯ ನಡೆಸುತ್ತಿರುವ ನಮ್ಮ ಮೇಲೆ ತಮ್ಮ ಮೇಲಿನ ಆರೋಪಗಳಿಗಿಂತ ಕ್ರೂರವಾದ ಆರೋಪಗಳನ್ನು ಹೊರಿಸಬಹುದಾಗಿದೆ ಎಂದು ಎಚ್ಚರಿಸಿದರು. ಇವೆಲ್ಲವೂ ಅಂಬೇಡ್ಕರ್ ಸಾರ್ವಜನಿಕ ಜೀವನವನ್ನು ಪ್ರವೇಶಿಸುವ ಮುನ್ನ ಗಾಂಧಿ ಅಸ್ಪೃಶ್ಯತೆಯ ಆಚರಣೆಯ ವಿರುದ್ಧ ನಡೆಸಿದ ಕಾರ್ಯಾಚರಣೆಗಳಲ್ಲಿನ ಉದ್ಗಾರಗಳು. ಅಷ್ಟೇ ಅಲ್ಲ, ಅಂಬೇಡ್ಕರ್ ನೇತೃತ್ವದ ೧೯೨೭ರ ಮಹಾಡ್ ಕೆರೆ ನೀರನ್ನು ಮುಟ್ಟುವ ಸತ್ಯಾಗ್ರಹವನ್ನು ಅವರು ತಮ್ಮ 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಬೆಂಬಲಿಸುತ್ತಾರಲ್ಲದೆ, ಆ ಸತ್ಯಾಗ್ರಹ ಸಂದರ್ಭದಲ್ಲಿ ಸವರ್ಣೀಯರು ಅಸ್ಪೃಶ್ಯರ ಮೇಲೆ ನಡೆಸಿದ ದೌರ್ಜನ್ಯಗಳನ್ನು ಖಂಡಿಸಿ, ಅಂಬೇಡ್ಕರ್ ಪ್ರದರ್ಶಿಸಿದ ಸಂಯಮಪೂರ್ಣ ನಾಯಕತ್ವವನ್ನು ಶ್ಲಾಘಿಸುತ್ತಾರೆ. ('ಯಂಗ್ ಇಂಡಿಯಾ', ೨೮, ಏಪ್ರಿಲ್, ೧೯೨೭)

ಈ ಸಂಬಂಧದ ಇನ್ನೂ ಮುಖ್ಯವಾದ ಉದಾಹರಣೆಯೆಂದರೆ, ಗಾಂಧಿ ಭಾರತಕ್ಕೆ ಬಂದ ನಂತರ ಸ್ಥಾಪಿಸಿದ ಮೊದಲ ಆಶ್ರಮವಾದ ಅಹಮದಾಬಾದ್‌ನಲ್ಲಿನ ಸತ್ಯಾಗ್ರಹ ಆಶ್ರಮಕ್ಕೆ ಅದು ಆರಂಭವಾದ ಮೊದಲ ವರ್ಷದಲ್ಲೇ–೧೯೧೫ರಲ್ಲಿ–ಒಂದು ಅಸ್ಪೃಶ್ಯ ಕುಟುಂಬವನ್ನು ಸೇರಿಸಿಕೊಂಡ ನಂತರ (ಸುಮಾರು ನಡೆದ ಬೆಳವಣಿಗೆಗಳ ಎದುರಲ್ಲಿ ಗಾಂಧಿ ತೋರಿದ ಬದ್ಧತೆ ಮತ್ತು ಹಠ : ಸಹವರ್ತಿಗಳಾಗಿದ್ದ ಇತರ ಸವರ್ಣೀಯ ಆಶ್ರಮವಾಸಿಗಳೆಲ್ಲರೂ ಆಶ್ರಮದಲ್ಲಿ ಅಸ್ಪೃಶ್ಯ ಕುಟುಂಬವೊಂದರ ಸದಸ್ಯರು ಊಟೋಪಚಾರಗಳೂ ಸೇರಿದಂತೆ ತಮ್ಮೊಂದಿಗೆ ಎಲ್ಲ ವಿಷಯಗಳಲ್ಲೂ ಸಹಬಾಳ್ವೆ ನಡೆಸಲು ಅವಕಾಶವಿತ್ತಿರುವುದನ್ನು ಒಪ್ಪದೆ ಆಶ್ರಮ ಬಿಟ್ಟಾಗ; ಮತ್ತು ಇದರ ಪರಿಣಾಮವಾಗಿ ಆಶ್ರಮಕ್ಕೆ ಆದಾಯ ಮೂಲಗಳೇ ಬತ್ತಿಹೋದಾಗ ಗಾಂಧಿ ಆಶ್ರಮ ಮುಚ್ಚಿಹೋದರೂ ಸರಿಯೇ, ತಾನು ಆ ಅಸ್ಪೃಶ್ಯ ಕುಟುಂಬವನ್ನು ಕೈಬಿಡಲಾರನೆಂದು ಹಠ ತೊಟ್ಟು ಆ ಕುಟುಂಬವನ್ನು ತಮ್ಮ ಬಳಿ ಉಳಿಸಿಕೊಂಡರು. ಇದಕ್ಕೆ ಭಗವಂತನ ಆಶೀರ್ವಾದವೆಂಬಂತೆ, ಇದ್ದಕ್ಕಿದ್ದಂತೆ ಓರ್ವ ಉದ್ಯಮಿ ಆಶ್ರಮದ ಬಳಿ

ಬಂದು ಆಶ್ರಮಕ್ಕೆ ದೊಡ್ಡ ಮೊತ್ತದ (ಆಶ್ರಮ ಒಂದು ವರ್ಷ ನಡೆಯಲು ಅಗತ್ಯವಾದಷ್ಟು) ದೇಣಿಗೆಯನ್ನು ನೀಡಿ ಹೋದ ಘಟನೆಯನ್ನೂ ಇಲ್ಲಿ ನೆನೆಯಬೇಕು. ಇದರ ಜೊತೆಗೇ, ಸ್ವತಃ ತಮ್ಮ ಪತ್ನಿ ಕಸ್ತೂರ್‌ಬಾ ಅಸ್ಪೃಶ್ಯ ಮಹಿಳೆ ಅಡಿಗೆ ಮನೆಗೆ ಬರುವುದನ್ನು ಸಹಿಸದಾಗ, ಅವರು ಕಸ್ತೂರ್‌ಬಾರ ಮನಃಪರಿವರ್ತನೆ ಮಾಡಿದ ರೀತಿಯನ್ನೂ ಗಮನಿಸಬೇಕು. (ನೋಡಿ: The life of Gandhi: Loui Fischer : Harper Collins)

ಗಾಂಧಿ ಮತ್ತು ಜಾತಿ ಪದ್ಧತಿ

ಆದರೆ ಬಹಳ ಜನ ಕೇಳುವ ಪ್ರಶ್ನೆ: ಅಸ್ಪೃಶ್ಯತೆಯನ್ನು ಇಷ್ಟು ಗಂಭೀರವಾಗಿ ಪರಿಗಣಿಸಿದ ಗಾಂಧಿ ಜಾತಿ ಪದ್ಧತಿಯ ವಿರುದ್ಧವೇಕೆ ಮಾತಾಡಲಿಲ್ಲ ಮತ್ತು ಕಾರ್ಯಕ್ರಮಗಳನ್ನು ರೂಪಿಸಲಿಲ್ಲ? ಗಾಂಧಿ ಪ್ರಕಾರ ಜಾತಿ ಪದ್ಧತಿ ಅ-'ಸ್ಪೃಶ್ಯತೆ'ಯ ಭಾವನೆಯ ಸಂಸ್ಥೀಕರಣ ಪ್ರಕ್ರಿಯೆಯಲ್ಲಿ ಹುಟ್ಟಿದ ವಿದ್ಯಮಾನವಾಗಿದ್ದು, ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಪ್ರಯತ್ನದ ಮಾರ್ಗದಲ್ಲೇ ಜಾತಿ ಪದ್ಧತಿಯೂ ಹಿನ್ನೆಲೆಗೆ ಸರಿದುಹೋಗುತ್ತದೆ. (ಆಶ್ಚರ್ಯವೆಂದರೆ, ಅಂಬೇಡ್ಕರ್ ಪ್ರಕಾರವೂ ಜಾತಿ ಪದ್ಧತಿ ಎಂದರೆ ಶ್ರೇಣೀಕೃತ ಸ್ಪೃಶ್ಯತೆಯೇ-ಅಂದರೆ ಸಾರ್ವಜನಿಕ ಬದುಕಿನಲ್ಲಿ ಯಾರನ್ನು ಎಷ್ಟು ಮುಟ್ಟಬಹುದು ಎಂಬ ಮಾನಕ-ಆಗಿದ್ದು, ಅದರ ಆತ್ಯಂತಿಕ ಪರಿಣಾಮವೇ ಅಸ್ಪೃಶ್ಯತೆಯಾಗಿದೆ.) ಈ ಬಗ್ಗೆ ಒಮ್ಮೆ ತಾವು ಗಾಂಧಿಗೆ ಪ್ರಶ್ನೆಯನ್ನು ಕೇಳಿದ್ದಾಗಿಯೂ, ಅದಕ್ಕೆ ಗಾಂಧಿ ಹೀಗೆ-ತಾವು ಜಾತಿಪದ್ಧತಿಯ ತರ್ಕದ ಅತ್ಯಂತ ದುರ್ಬಲ ಕೊಂಡಿಯನ್ನು ಮುರಿದು ಹಾಕುವ ಪ್ರಯತ್ನದಲ್ಲಿರುವುದಾಗಿ-ಉತ್ತರಕೊಟ್ಟಿದ್ದಾಗಿಯೂ ನೆಹರೂ 1956ರಲ್ಲಿ ತಮ್ಮ ಐರೋಪ್ಯ ಪತ್ರಕರ್ತ ಮಿತ್ರ ಟಿಬೋರ್ ಮೆಂಡ್ ಅನ್ನುವವರಿಗೆ ಬರೆದ ಪತ್ರವೊಂದರಲ್ಲಿ ತಿಳಿಸಿದ್ದಾರೆ. (ನೋಡಿ: Conversations with Nehru: Tibor Mende : Wilco: 1958) ಅಸ್ಪೃಶ್ಯರು ಸವರ್ಣೀಯರಿಂದ ಮತ್ತಷ್ಟು ದೂರವಾಗದಂತೆ ಖಚಿತಪಡಿಸಿದ 1932ರ ಪೂನಾ ಒಪ್ಪಂದಕ್ಕೆ ಗಾಂಧಿ ಅಂಬೇಡ್ಕರ್ ರೊಂದಿಗೆ ಸಹಿ ಹಾಕಿದ ನಂತರದಲ್ಲಿ ಅವರ ಮೇಲೆ ಸವರ್ಣೀಯರಿಂದ (ವಿಶೇಷವಾಗಿ ಪುರೋಹಿತಶಾಹಿ ಜಾತಿಯವರಿಂದ) ನಡೆದ 'ಇದು

ಹಿಂದೂ ಧರ್ಮದ ಸಾಮಾಜಿಕ ವಿಶಿಷ್ಟತೆಯ ನಾಶ' ಎಂಬ ಕಟು ಟೀಕಾಪ್ರಹಾರ ಮತ್ತು ಎರಡು ಕೊಲೆ ಪ್ರಯತ್ನಗಳು ಗಾಂಧಿಯವರ ವಾದವನ್ನು ಪುಷ್ಟೀಕರಿಸುತ್ತವೆ. (ಇಂತಹ ಕಾರಣದಿಂದಲೇ ಕನ್ನಡ 'ಕುಲಪುರೋಹಿತ'ರೆಂದು ಕರೆಯಲಾಗುವ ಆಲೂರು ವೆಂಕಟರಾಯರು ಗಾಂಧಿ ಮತ್ತು ಕಾಂಗ್ರೆಸ್ ಸಹವಾಸವನ್ನು ತೊರೆದು 'ಹಿಂದೂ ಮಹಾಸಭಾ'ದತ್ತ ಸರಿಯುವುದು ಮತ್ತು ಈ ಪ್ರಭಾವದಲ್ಲೇ 'ಕರ್ನಾಟಕದ ಗತ ವೈಭವ'ವನ್ನು ವಿಜಯನಗರವೆಂಬ ಹಿಂದೂ ಮಹಾಸಾಮ್ರಾಜ್ಯದ ರೂಪದಲ್ಲಿ ಗುರುತಿಸುವಂತಾಗುವುದು.)

ಈ ವಿಷಯಕ್ಕೆ ಸಂಬಂಧಿಸಿದಂತೆಯೇ ಪರೋಕ್ಷವಾಗಿ ತಮ್ಮ ಮಿತ್ರ 'ಚಾರ್ಲಿ'ಎಂದೇ ಗಾಂಧಿ ಪರಿವಾರದಲ್ಲಿ ಜನಪ್ರಿಯರಾಗಿದ್ದ ಚಾರ್ಲ್ಸ್ ಆಂಡ್ರ್ಯೂಸ್ ಪತ್ರ ಮುಖೇನ ಕೇಳಿದ ಪ್ರಶ್ನೆಗಳಿಗೆ ಗಾಂಧಿ ನೀಡಿದ ಉತ್ತರಗಳು ಕುತೂಹಲಕಾರಿಯಾಗಿವೆ. 1921ರಲ್ಲಿ ಆಂಡ್ರ್ಯೂಸ್‌ಗೆ ಬರೆದ ಪತ್ರದಲ್ಲಿ 'ಸ್ವರಾಜ್ಯಕ್ಕಿಂತ ಅಸ್ಪೃಶ್ಯತಾ ನಿವಾರಣೆ ಕಡಿಮೆ ಮಹತ್ವದ್ದು ಎಂದು ನಾನು ಒಂದರೆಕ್ಷಣವೂ ಭಾವಿಸಿಲ್ಲ. ಆದರೆ ಅಸ್ಪೃಶ್ಯತಾ ನಿವಾರಣೆಯ ಹೋರಾಟದ ಹಾದಿಯಲ್ಲಿ ಸ್ವರಾಜ್ಯವನ್ನು ಗಳಿಸುವುದಾದದಲ್ಲಿ ಆ ಸಮಸ್ಯೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸಬಹುದು' ಎನ್ನುತ್ತಾರೆ. ಪೂನಾ ಒಪ್ಪಂದಕ್ಕೆ ಸಹಿ ಹಾಕಿದ ನಂತರ ಅಂಬೇಡ್ಕರ್ ಗಾಂಧಿ ಬಗ್ಗೆ ಆಡಿದ ಸೌಹಾರ್ದದ ಮಾತುಗಳ ಕೊನೆಯ ವಾಕ್ಯವಾದ 'ಮಹಾತ್ಮಾಜಿ ತಮ್ಮ ಇಡೀ ಬದುಕನ್ನು ನಿಮ್ನ ವರ್ಗಗಳ ಕ್ಷೇಮಾಭ್ಯುದಯಕ್ಕೇ ಮುಡಿಪಾಗಿಡುವುದಾದದರೆ ಅವರು ನಮ್ಮ ನಾಯಕರಾಗುತ್ತಾರೆ' ಎಂಬ ಮಾತಿನಿಂದ ಸ್ಫೂರ್ತಿಗೊಂಡಂತೆ 1933ರ ಒಂದು ಪತ್ರದಲ್ಲಿ ಆಂಡ್ರ್ಯೂಸ್ ಕೇಳಿದ 'ನೀವು ಒಮ್ಮೆಗೇ ಎರಡು ಕುದುರೆಗಳ ಸವಾರಿ ಮಾಡುವ ಕಸರತ್ತಿನ ಬದಲು, ಅಸ್ಪೃಶ್ಯತಾ ನಿವಾರಣೆ ಹೋರಾಟಕ್ಕೇ ನೀವೇಕೆ ತೆತ್ತುಕೊಳ್ಳಬಾರದು?' ಎಂಬ ಪ್ರಶ್ನೆಗೆ ಗಾಂಧಿ ನೀಡುವ ಉತ್ತರ ಹೀಗಿತ್ತು: 'ನನ್ನ ಬದುಕನ್ನು ನಾನು ಕಂಡುಕೊಂಡಿರುವುದು ಒಂದು ಅವಿಭಾಜ್ಯ ಅಖಂಡ ರೂಪದ್ದಾಗಿ. ಅವುಗಳಲ್ಲಿ ಕೋಣೆಗಳಿಲ್ಲ. ಹಾಗಾಗಿ ಒಮ್ಮೆ ನನ್ನ ಬೆರಳು ಸತ್ಯಾಗ್ರಹದ ಮನೆ ಮೇಲೆ, ನಂತರ ಸವಿನಯ ಕಾನೂನು ಭಂಗದ ಮನೆಯ ಮೇಲೆ,

ಆನಂತರ ಅಸ್ಪೃಶ್ಯತಾ ನಿವಾರಣೆಯ ಮನೆಯ ಮೇಲೆ, ತದನಂತರ ಹಿಂದು ಮುಸ್ಲಿಂ ಐಕ್ಯತೆಯ ಮನೆ ಮೇಲೆ–ಹೀಗೆ ಪಿಯಾನೋದ ವಿವಿಧ ಮನೆಗಳ ಮೇಲೆ ವಿವಿಧ ತೀವ್ರತೆಯ ಒತ್ತುಗಳಂತೆ–ಒಂದೇ ರಾಗದ ಪರಸ್ಪರ ಸಂಬಂಧಿಸಿದ ವಿವಿಧ ಸ್ವರಗಳ ಸಂಯೋಜನೆಯಂತೆ ನನ್ನ ಬದುಕು.'

ತಮ್ಮ ಬದುಕಿನ ಹೋರಾಟದ ಸಮಗ್ರತೆಯನ್ನು ಹೀಗೆ ಒಂದು ಸ್ವರಮೇಳದಂತೆ ಕಲ್ಪಿಸಿಕೊಂಡಿದ್ದ ಗಾಂಧಿ ಅವರಿಗೆ ಅಸ್ಪೃಶ್ಯತಾ ನಿವಾರಣೆಗೆಂದೇ ಪ್ರತ್ಯೇಕ ಸತ್ಯಾಗ್ರಹವನ್ನೇಕೆ ರೂಪಿಸುವುದಿಲ್ಲ ಎಂಬ ಅಂಬೇಡ್ಕರ್ ಅವರ ಪ್ರಶ್ನೆ ಅನುಚಿತವಾಗಿಯೂ, ಅಸಂಗತವಾಗಿಯೂ ಕಂಡಿರಬಹುದು. ಚೌರಿಚೌರಾದ ಹಿಂಸಾಚಾರದ ನಂತರ ಸವಿನಯ ಕಾನೂನುಭಂಗವನ್ನು ಪ್ರತಿಪಾದಿಸುವ ತಮ್ಮ ಸತ್ಯಾಗ್ರಹದ ಮೀಮಾಂಸೆಯನ್ನು ಸಮಾಜ ಇನ್ನೂ ಅರ್ಥಮಾಡಿಕೊಂಡಿಲ್ಲವೆಂಬ ಅರಿವಿನಲ್ಲಿ ತಮ್ಮ ಅಸಹಕಾರ ಸತ್ಯಾಗ್ರಹದ ಕರೆಯನ್ನು ಹಿಂಪಡೆದು ಅದನ್ನು ಅರ್ಥ ಮಾಡಿಸುವುದರ ಭಾಗವಾಗಿಯೇ ಅದಕ್ಕೆ ಪೂರಕವಾದ ಹೊಸ ಸಾಮಾಜಿಕ ಆದ್ಯತೆಗಳನ್ನು ನಿರೂಪಿಸುವ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡದ್ದನ್ನೂ, ಅವುಗಳಲ್ಲಿ ಅಸ್ಪೃಶ್ಯತೆಯ ನಿವಾರಣೆಗೆ ಸಂಬಂಧಿಸಿದ ಕಾರ್ಯಕ್ರಮಗಳು ಹೆಚ್ಚಿನ ಮಹತ್ವ ಪಡೆದಿದ್ದವೆಂಬುದನ್ನೂ ನಾವು ಇಲ್ಲಿ ಗಮನಿಸದಿರಲಾಗದು.

'ಜಾತಿ ವಿನಾಶ' : ಗಾಂಧಿ v/s ಅಂಬೇಡ್ಕರ್

ಈಗ ಗಾಂಧಿಯವರ ಈ ಚಿಂತನೆಗಳನ್ನು ಕುರಿತಂತೆ ಈ ವಿಷಯವಾಗಿ ಅವರೊಂದಿಗೆ ನಿರಂತರ ಸಂಘರ್ಷ–ಸಂವಾದಗಳಲ್ಲಿ ತೊಡಗಿದ್ದ ಡಾ. ಅಂಬೇಡ್ಕರ್ ಅವರ ವಿಮರ್ಶೆಯನ್ನು ನೋಡೋಣ. ಇದರ ಸಾರಸರ್ವಸ್ವ ನಮಗೆ ದೊರೆಯುವುದು ಅಂಬೇಡ್ಕರ್ ಅವರ 'ಜಾತಿ ವಿನಾಶ' ಪ್ರಬಂಧಕ್ಕೆ ತಮ್ಮ 'ಹರಿಜನ' ಪತ್ರಿಕೆಯಲ್ಲಿ ಗಾಂಧಿ ಬರೆದ ಪ್ರತಿಕ್ರಿಯೆ ಮತ್ತು ಆ ಪ್ರತಿಕ್ರಿಯೆಗೆ ಅಂಬೇಡ್ಕರ್ ಅವರು ನೀಡಿದ ಉತ್ತರಗಳಲ್ಲಿ. ಆರ್ಯ ಸಮಾಜದ ಆಲೋಚನೆಗಳಿಂದ ತೀವ್ರವಾಗಿ ಪ್ರಭಾವಿತವಾಗಿದ್ದ ಲಾಹೋರ್‌ನ ಜಾತ್ ಪಾತ್ ತೋಡಕ್ ಮಂಡಲ್ (ಜಾತಿ ಪಾತಿ

ಒಡೆಯುವ ಮಂಡಲ) ೧೯೩೬ರ ಮೇನಲ್ಲಿ ಆಯೋಜಿಸಲು ಉದ್ದೇಶಿಸಿದ್ದ ಸಮ್ಮೇಳನವೊಂದರ ಸರ್ವಾಧ್ಯಕ್ಷತೆಗೆ ಮಂಡಲದ ಪದಾಧಿಕಾರಿಗಳು ಅಂಬೇಡ್ಕರ್ ಅವರನ್ನು ಆಹ್ವಾನಿಸಿದ್ದರು ಮತ್ತು ಆ ಆಹ್ವಾನವನ್ನು ಅಂಬೇಡ್ಕರ್ ಒಪ್ಪಿಕೊಂಡಿದ್ದರು. ಆದರೆ ಅಂಬೇಡ್ಕರ್ ಅವರು ಇದಕ್ಕಾಗಿ ತಯಾರಿಸಿದ್ದ ಭಾಷಣದಲ್ಲಿನ 'ಇದು ಹಿಂದೂವಾಗಿ ನನ್ನ ಕೊನೆಯ ಭಾಷಣ' ಎಂಬ ವಾಕ್ಯವನ್ನು ತೆಗೆಯಬೇಕೆಂದು ಮಂಡಲವು ಮಾಡಿದ ಕೋರಿಕೆಯನ್ನು ಅಂಬೇಡ್ಕರ್ ಒಪ್ಪದಿದ್ದಾಗ ಅದು ಆ ಸಮ್ಮೇಳನವನ್ನು ರದ್ದುಪಡಿಸಿತು. ಆದರೆ 'ಜಾತಿ ವಿನಾಶ' ಎಂದು ಮುಂದೆ ಪ್ರಸಿದ್ಧವಾದ ಆ ಭಾಷಣವನ್ನು ಅಂಬೇಡ್ಕರ್ ತಾವೇ ಪ್ರಕಟಿಸಿ ಸಾರ್ವಜನಿಕವಾಗಿ ಬಿಡುಗಡೆ ಮಾಡಿದರು. ಅಂಬೇಡ್ಕರ್ ಸಾರ್ವಜನಿಕ ಜೀವನ ಪ್ರವೇಶಿದ್ದಾಗಿನಿಂದ ಅವರೊಂದಿಗೆ ನಿರಂತರ ಒಂದಲ್ಲ ಒಂದು ರೂಪದ ಸಂವಾದದಲ್ಲಿ ತೊಡಗಿದ್ದ ಗಾಂಧಿ ಈ ಪ್ರಬಂಧವನ್ನೂ ಗಮನಿಸಿ ಅದನ್ನು ತಮ್ಮ 'ಹರಿಜನ' ಪತ್ರಿಕೆಯ ೧೯೩೬ರ ಜುಲೈ ೧೧ರ ಸಂಚಿಕೆಯಲ್ಲಿ ಪ್ರಕಟಸಿದ್ದಲ್ಲದೆ ಅದಕ್ಕೊಂದು ಪ್ರತಿಕ್ರಿಯೆಯನ್ನೂ ಬರೆದರು.

ಈ ಪ್ರತಿಕ್ರಿಯೆಯಲ್ಲಿ ಗಾಂಧಿ ಸವರ್ಣ ಹಿಂದೂಗಳಿಂದ ಅಮಾನವೀಯವಾದ ಅವಮಾನ-ದೌರ್ಜನ್ಯಗಳನ್ನು ಪಾರಂಪರಿಕವಾಗಿ ಅನುಭವಿಸಿಕೊಂಡು ಬರುತ್ತಿರುವ ಸಮುದಾಯಕ್ಕೆ ಸೇರಿದ ಅಂಬೇಡ್ಕರ್ ಅವರ ಈ ಪ್ರಬಂಧವನ್ನು ಯಾವ ಸುಧಾಕರನೂ ಉದಾಸೀನ ಮಾಡುವಂತಿಲ್ಲ ಎನ್ನುತ್ತಾರಲ್ಲದೆ, ಸಂಪ್ರದಾಯವಾದಿಗಳು ಇದನ್ನು ಓದಿದರೆ ಪ್ರಯೋಜನ ಪಡೆಯುವರು ಎಂದು ಹೇಳುತ್ತಾರೆ. ಇದು ಭಾರತದ ಎಲ್ಲ ಭಾಷೆಗಳಿಗೂ ಅನುವಾದವಾಗಬೇಕು ಮತ್ತು ಇದರ ಬೆಲೆ ಈಗಿರುವ ಹನ್ನೆರಡಾಣೆಗಿಂತ ಕಡಿಮೆಯಾಗಬೇಕು; ಎರಡಾಣೆಗೆ, ಹೆಚ್ಚೆಂದರೆ ನಾಲ್ಕಾಣೆಗೆ ಇದು ಸಾಮಾನ್ಯ ಜನರಿಗೆ ದೊರಕುವಂತಾಗಬೇಕು ಎಂದೂ ಅವರು ಸೂಚಿಸುತ್ತಾರೆ. ಆದರೆ ಅಂಬೇಡ್ಕರ್ ಜಾತಿ ಕುರಿತು ಮಂಡಿಸಿರುವ ವಿಚಾರಗಳನ್ನಾಗಲೀ ಅದರ ಆಧಾರದ ಮೇಲೆ ಅವರು ತಮ್ಮ ಅನುಯಾಯಿಗಳೊಂದಿಗೆ ಹಿಂದೂ ಧರ್ಮವನ್ನು-ಆ ಮೂಲಕ ಒಂದು ಪರಂಪರೆಯ ವಾರಸುದಾರಿಕೆಯನ್ನು-ತೊರೆದು ಹೋಗುವ ನಿರ್ಧಾರವನ್ನು ಸಮರ್ಥಿಸಲು ಮಂಡಿಸಿರುವ ವಾದವನ್ನಾಗಲೀ ಗಾಂಧಿ ಒಪ್ಪುವುದಿಲ್ಲ.

ಜಾತಿಗೂ ಧರ್ಮಕ್ಕೂ ಸಂಬಂಧವಿಲ್ಲ :
ಹಿಂದೂ ಧರ್ಮ ಶಾಸ್ತ್ರ ಧರ್ಮವಲ್ಲ; ಸಾಧು-ಸಂತರ ಧರ್ಮ

ಗಾಂಧಿ ಪ್ರಕಾರ ಜಾತಿಗೂ ಧರ್ಮಕ್ಕೂ ಸಂಬಂಧವಿಲ್ಲ. ಯಾವುದೋ ಕಾಲದ ಶಾಸ್ತ್ರಗಳ ಆಧಾರದ ಮೇಲೆ ಜಾತಿಗೆ ಧರ್ಮದ ಸಮ್ಮತಿ ಇದೆ ಎಂಬ ವಾದ ಮನುಷ್ಯನ ವಿವೇಚನಾ ಶಕ್ತಿಗೆ ವಿರುದ್ಧವಾದದ್ದು. ಹಿಂದೂ ಧರ್ಮದ ಶಾಸ್ತ್ರ ಗ್ರಂಥಗಳೆಂದು ಹೇಳಲಾಗುವ ವೇದಗಳು, ಉಪನಿಷತ್ತುಗಳು, ಪುರಾಣಗಳು, ರಾಮಾಯಣ-ಮಹಾಭಾರತಗಳು, ಶೃತಿ ಮತ್ತು ಸ್ಮೃತಿಗಳು ಒಂದೇ ಕಾಲದಲ್ಲಿ ರಚಿತವಾದುವಲ್ಲ. ಅವು ಒಂದಕ್ಕೊಂದರ ಕಾಲಾನುಕಾಲದ ವಿಮರ್ಶೆಗಳಾಗಿ ಬಂದಿವೆ. ಹಾಗಾಗಿ ಅವುಗಲ್ಲಿರುವುದೆಲ್ಲವನ್ನೂ ವಿವೇಚನೆ-ವಿಮರ್ಶೆಯಿಲ್ಲದೆ ಧಾರ್ಮಿಕ ಸತ್ಯಗಳೆಂದು ಒಪ್ಪುವ ಅಗತ್ಯವಿಲ್ಲ. ಬರೆದಿಟ್ಟ ಅಥವಾ ಮುದ್ರಿತವಾದುದೆಲ್ಲವೂ ಪವಿತ್ರವೂ ಅಲ್ಲ, ಮಾನ್ಯವೂ ಅಲ್ಲ. ವಿಶೇಷವಾಗಿ ಸ್ಮೃತಿಗಳಲ್ಲಿರುವುದನ್ನು ಎಲ್ಲ ಕಾಲಕ್ಕೂ ಅನ್ವಯವಾಗುವುದೆಂದು ಒಪ್ಪಲಾಗುವುದಿಲ್ಲ ಎಂದೂ, ಧರ್ಮಗ್ರಂಥಗಳ ಪಟ್ಟಿ ಎಲ್ಲೂ ಸ್ಥಗಿತಗೊಳ್ಳದೆ ಅನಂತವಾಗಿ ಮುಂದುವರೆಯುತ್ತದೆ ಎಂದೂ ಹೇಳುತ್ತಾ, ಈ ಮೊದಲು ನಾನು ಅವರು ಮಂಡಿಸಿದರೆಂದು ಹೇಳುವ ಹಿಂದೂ ಧರ್ಮದ ಮರುನಿರೂಪಣೆಯ ಮುಖ್ಯ ಅಂಶಗಳನ್ನು ತಮ್ಮ ವಾದಕ್ಕೆ ಬಳಸಿಕೊಳ್ಳುತ್ತಾ ಹೋಗುತ್ತಾರೆ. (ಇದನ್ನೇ ಕುವೆಂಪು ಗಾಂಧಿ ಪ್ರಭಾವದಲ್ಲಿ 'ಯಾವ ಶಾಸ್ತ್ರ ಏನು ಹೇಳಿದರೇನು? ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?' ಎಂದು ತಮ್ಮೊಂದು ಪದ್ಯದಲ್ಲಿ 'ಅಂದಿನಾ ಋಷಿಗಳೂ ಮಾನವರು ನಮ್ಮಂತೆ... ಅವರ ಶಾಸ್ತ್ರವು ಅವರ ಕಾಲಕ್ಕೆ ಮಾತ್ರ... ಕಾಲಕ್ಕೆ ತಕ್ಕಂತೆ ದೇಶಕ್ಕೆ ತಕ್ಕಂತೆ ನಮ್ಮ ಹೃದಯವೇ ಶ್ರೀಧರ್ಮ ಸೂತ್ರ!' ಎಂದು ಘೋಷಿಸಿದ್ದು!)

ಧರ್ಮದ ಹೆಸರಿನಲ್ಲಿ ಯಾರೋ ಕೆಲವರು ನಡೆಸಿದ ದೌರ್ಜನ್ಯವನ್ನು ಮತ್ತು ಕೆಲ ಕೆಟ್ಟ ಉದಾಹರಣೆಗಳ ಹೊಣೆಯನ್ನು ಇಡೀ ಧರ್ಮದ ಮೇಲೆ ಹೊರಿಸಿ ಧರ್ಮ ಬಿಟ್ಟು ಹೊರಹೋಗುವುದು ಉಚಿತವಲ್ಲ. ಇಡೀ ಅಸ್ಪೃಶ್ಯ ಸಮುದಾಯ ಇದನ್ನು ಒಪ್ಪಲಾರದು. ಅಂಬೇಡ್ಕರ್‌ರದ್ದು ಅಲ್ಪಸಂಖ್ಯಾತ ಅಭಿಪ್ರಾಯ. ಹಿಂದೂ ಧರ್ಮವನ್ನು ಸಹಾನುಭೂತಿಯಿಂದ ಅರ್ಥಮಾಡಿಕೊಳ್ಳಬಯಸುವ ಹಲವರು

ಅಸ್ಪೃಶ್ಯರಲ್ಲಿದ್ದಾರೆ ಎಂದು ರಾವ್ ಬಹಾದುರ್ ಎಂ.ಸಿ. ರಾಜಾ ಮತ್ತು ದಿವಾನ್ ಬಹಾದುರ್ ಶ್ರೀನಿವಾಸನ್ ಅವರ ಉದಾಹರಣೆಗಳನ್ನು ನೀಡುತ್ತಾರೆ. ಹಿಂದೂ ಧರ್ಮ ಬೆಳೆದಿರುವುದು ಶಾಸ್ತ್ರಗ್ರಂಥಗಳ ನೀತಿ-ನಿಯಮಗಳ ಆಧಾರದ ಮೇಲಲ್ಲ. ಬದಲಿಗೆ, ಕಾಲಾನುಕಾಲದಲ್ಲಿ ಬಾಳಿ ಹೋದ ಸಮಾಜ ಸುಧಾರಕ ಸಂತರು ಅವುಗಳ ಬಗ್ಗೆ ಮಾಡಿದ ವ್ಯಾಖ್ಯಾನಗಳು ಮತ್ತು ಉಪದೇಶಗಳ ಮೂಲಕ ಎಂದು ಅವರು ಜ್ಞಾನದೇವ, ಏಕನಾಥ, ತುಕಾರಾಮ, ಕಬೀರ, ಚೈತನ್ಯ, ತಿರುವಳ್ಳುವರ್ ಮುಂತಾದವರ ಉದಾಹರಣೆಗಳನ್ನು ನೀಡುತ್ತಾರೆ ಮತ್ತು ಇಂತಹ ಮಹಾತ್ಮರು ಹಾಗೂ ರಾಜಾರಾಂ ಮೋಹನ ರಾಯ್, ಮಹರ್ಷಿ ದೇವೇಂದ್ರನಾಥ ಟ್ಯಾಗೋರ್, ರಾಮಕೃಷ್ಣ ಪರಮಹಂಸ, ವಿವೇಕಾನಂದರಂಥ ಮಹಾಪುರುಷರಿಂದ ಪ್ರತಿಪಾದಿಸಲ್ಪಟ್ಟ ಧರ್ಮವು ಬರೀ ದೋಷಗಳಿಂದ ತುಂಬಿ ತಿರಸ್ಕರಣೀಯವಾಗಿದೆ ಎಂದು ನಂಬಲಾಗದು ಎನ್ನುತ್ತಾರೆ ಗಾಂಧಿ. ಹೀಗೆ ಗಾಂಧಿ ಒಂದರ್ಥದಲ್ಲಿ ಓರ್ವ ಶ್ರಮಣರಂತೆ ಹಿಂದೂ ಧರ್ಮವನ್ನು ಒಂದು ಶ್ರಮಣ ಧರ್ಮವನ್ನಾಗಿ ಪ್ರಸ್ತುತಪಡಿಸಲು ಯತ್ನಿಸುತ್ತಾರೆ.

ಇದಕ್ಕೆ ಅಂಬೇಡ್ಕರ್ ಒಂದು ವಿವರವಾದ-ದೀರ್ಘ-ಉತ್ತರ ನೀಡುತ್ತಾರೆ. ಗಾಂಧಿಯವರ ವಾದದ ಪ್ರತಿ ಅಂಶವನ್ನೂ ಎತ್ತಿಕೊಂಡು ಅವರ ವಾದವನ್ನು ತಿರಸ್ಕರಿಸುತ್ತಾರೆ. ಈ ತಿರಸ್ಕಾರದ ಭಾಗವಾಗಿ ಅವರು ಗಾಂಧಿಯನ್ನು ಆತ್ಮದ್ರೋಹಿಯೆಂದೂ, ಯೋಚನಾ ಶಕ್ತಿಯೇ ಇಲ್ಲದವರೆಂದೂ, ಕೊನೆಗೆ ಹಿಂದೂ ಧರ್ಮದ ಶತ್ರುವೆಂದೂ ಟೀಕಿಸುತ್ತಾರೆ. ಅಂಬೇಡ್ಕರ್ ಅವರ ಉತ್ತರದ ವಿವರಗಳು ಇಂದಿನ ಗೋಷ್ಠಿಯ ವಿಷಯದ ವ್ಯಾಪ್ತಿಗೆ ಬರುವುದಿಲ್ಲವಾದ್ದರಿಂದ, ಅಂಬೇಡ್ಕರ್ ಗಾಂಧಿಯವರ ವಾದವನ್ನು ಸಾರಾಸಗಟಾಗಿ ತಿರಸ್ಕರಿಸಲು ಇರಬಹುದಾದ ಮುಖ್ಯ ಕಾರಣಗಳನ್ನಷ್ಟೇ ಇಲ್ಲಿ ಸೂಚಿಸಬಯಸುವೆ. ಮೊದಲಾಗಿ ವರ್ಣ ಧರ್ಮ ಮತ್ತು ಜಾತಿ ಪದ್ಧತಿ ಕುರಿತಂತೆ ಗಾಂಧಿಯವರ ವಿಚಾರಗಳು ವಿಕಾಸವಾಗುತ್ತಾ ಬಂದ ಬಗೆಯನ್ನು ಮತ್ತು ಅದರ ವಿವರಗಳನ್ನು ಅಂಬೇಡ್ಕರ್ ಗಮನಿಸುತ್ತಾ ಬಂದ ಯಾವ ಸೂಚನೆಗಳೂ ಅವರ ಉತ್ತರದಲ್ಲಿ ಕಾಣುವುದಿಲ್ಲ. ಮುಖ್ಯವಾಗಿ ಗಾಂಧಿ ಹಿಂದೂ ಧರ್ಮವನ್ನು ಬ್ರಾಹ್ಮಣ ಕೇಂದ್ರದಿಂದ ಬಿಡಿಸಿ ಅದನ್ನು ಸಂತ ಪರಂಪರೆಯೊಂದಿಗೆ

ಜೋಡಿಸುತ್ತಾ ಜನಸಾಮಾನ್ಯರ ಧರ್ಮವನ್ನಾಗಿ ಪರಿವರ್ತಿಸಲು ಕೈಗೊಂಡಿದ್ದ ಕ್ರಮಗಳನ್ನು ಅವರು ಗಮನಿಸುವ ಗೋಜಿಗೇ ಹೋದಂತಿಲ್ಲ. ಇದಕ್ಕೆ ಮುಖ್ಯ ಕಾರಣ, ಗಾಂಧಿ ಪೂರ್ವ-ಪಶ್ಚಿಮಗಳೆರಡರ ಸತ್ವವನ್ನೂ ಹೀರಿಕೊಂಡ ವಿಶಿಷ್ಟ ಅಧ್ಯಾತ್ಮಿಕ ವ್ಯಕ್ತಿಯಾಗಿ ಬೆಳೆದಿದ್ದರೆ, ಅಸ್ಪೃಶ್ಯತೆಯ ದಳ್ಳುರಿಯಲ್ಲಿ ಬೆಂದ ಅಂಬೇಡ್ಕರ್ ಪಶ್ಚಿಮದ ಆಧುನಿಕತೆಯಲ್ಲಿ ಅದಕ್ಕೆ ಪರಿಹಾರ ಕಂಡುಕೊಂಡವರಂತೆ ಅದರ ಎರಕದಲ್ಲಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡವರಾಗಿದ್ದರು.

ಧರ್ಮದ ಪರಿಕಲ್ಪನೆ: ಗಾಂಧಿ ಮತ್ತು ಅಂಬೇಡ್ಕರ್‌ರ ಭಿನ್ನ ನೋಟ

ಹಾಗಾಗಿಯೇ, ಅಮೆರಿಕಾದಲ್ಲಿ ವಿದ್ಯಾರ್ಥಿಯಾಗಿ ತಮ್ಮ ಹೊಸ ವ್ಯಕ್ತಿತ್ವದ ತಳಹದಿಯನ್ನು ಕಂಡುಕೊಳ್ಳುವುದರ ಭಾಗವಾಗಿ ಅಲ್ಲಿನ ಸಮಾಜದಿಂದ ಹೊಸ ಲೋಕದೃಷ್ಟಿಯೊಂದನ್ನು ಬೆಳೆಸಿಕೊಂಡ ಅಂಬೇಡ್ಕರ್, ಹಿಂದೂ ಧರ್ಮವನ್ನು ಕ್ರಿಶ್ಚಿಯನ್(ಪ್ರೊಟೆಸ್ಟಂಟ್) ಧರ್ಮದ ಮಾದರಿಯಲ್ಲಿ ಗ್ರಹಿಸುವ-ಅಂದರೆ, ಒಂದು ಏಕಾಧಿಕಾರ ಕೇಂದ್ರಿತವಾದ, ಏಕರೂಪಿಯಾದ ಸುವ್ಯವಸ್ಥಿತ, ಸುಯೋಜಿತ ಶಾಸ್ತ್ರೀಯ ಧರ್ಮವಾಗಿ ಮಾತ್ರ ಕಾಣುವ-ನಿರ್ಬಂಧಕ್ಕೆ ಒಳಗಾಗಿದ್ದರು. ಅವರಿಗೆ ಧರ್ಮವೊಂದು ಚೈತನ್ಯಶೀಲವಾಗಿದ್ದುಕೊಂಡು ಸದಾ ಬೆಳೆಯುತ್ತಾ ಬದಲಾಗುತ್ತಾ ಹೋಗಬಹುದೆಂದು ಮತ್ತು ಗಾಂಧಿ ತಮಗೆದುರಾದ ಪ್ರಾಣಾಪಾಯ ಗಳನ್ನೂ ಲೆಕ್ಕಿಸದೆ ಅದನ್ನು ಹಾಗೆ ಆಧುನೀಕರಿಸುತ್ತಿದ್ದಾರೆಂಬ ಅರಿವೇ ಉಂಟಾಗದ ಮಟ್ಟಿಗೆ ಅವರು ಪಶ್ಚಿಮದ ಆಧುನಿಕತೆಯ ಶಿಶುವಾಗಿಬಿಟ್ಟಿದ್ದರೆನಿಸುತ್ತದೆ. ಅವರು ಹಿಂದೂ ಧರ್ಮದ ಚೈತನ್ಯಶೀಲತೆಯ ಮೂಲ ಸಂತ ಪರಂಪರೆಯದ್ದು ಎನ್ನುವ ಗಾಂಧಿಯವರ ಮಾತಿಗೆ ನೀಡುವ ಉತ್ತರ ನಮ್ಮ ವಚನ ಪರಂಪರೆಯನ್ನು ಎಸ್.ಎನ್. ಬಾಲಗಂಗಾಧರ(ರಾವ್)ರಂತಹವರು ವ್ಯಾಖ್ಯಾನಿಸುವ ಪರಿಯನ್ನು ಹೋಲುತ್ತದೆ ಎಂಬುದು ಆಶ್ಚರ್ಯವಾದರೂ ನಿಜದ ಸಂಗತಿಯಾಗಿದೆ. ಬಾಲಗಂಗಾಧರರು ವಚನಗಳನ್ನು ಹೇಗೆ ಜಾತಿ ಸಂಬಂಧಿಯಾಗಿ ನೋಡದೆ ಅಧ್ಯಾತ್ಮಿಕ ನೆಲೆಯಲ್ಲಿ ಮಾತ್ರ ನೋಡಿ ಅರ್ಥೈಸಿಕೊಳ್ಳಬೇಕೆಂದು ಹೇಳುತ್ತಾರೋ ಹಾಗೇ ಅಂಬೇಡ್ಕರರು ಹಿಂದೂ ಸಮಾಜದ ಸಂತ ಪರಂಪರೆಯನ್ನು ಸಾಮಾಜಿಕವಾಗಿ ನೋಡದೆ ಅಧ್ಯಾತ್ಮಿಕ ನೆಲೆಯಲ್ಲಿ ಮಾತ್ರ ನೋಡಬೇಕು ಎನ್ನುತ್ತಾರೆ.

ಜೊತೆಗೆ ಇನ್ನೊಂದು ಮಾತನ್ನೂ ಇಲ್ಲಿ ಹೇಳಬೇಕು. ಅಂಬೇಡ್ಕರ್ ಮೆಚ್ಚಿಕೊಂಡು, ತನ್ನ ಜನರ ಅಂತಿಮ ಬಿಡುಗಡೆಗೆ ಒಂದು ಸಮರ್ಪಕವಾದ ಮೌಲ್ಯ ವ್ಯವಸ್ಥೆ ಎಂದು ನೆಚ್ಚಿಕೊಂಡಿದ್ದ ಪಶ್ಚಿಮದ ಆಧುನಿಕತೆಯ ಹಿಂದಿನ ಚಾಲನಾ ಶಕ್ತಿ ಇದ್ದುದು ಅದರ ನಾಗರಿಕ ಹಕ್ಕುಗಳ ಪ್ರತಿಪಾದನೆಯಲ್ಲಿ; ಮತ್ತೆ ಅದರ ಹಿಂದಿದ್ದುದು ಆಧುನಿಕಪೂರ್ವ ಮೌಲ್ಯ ವ್ಯವಸ್ಥೆಯು ಈ ನಾಗರೀಕ ಹಕ್ಕುಗಳನ್ನೇ ದಮನ ಮಾಡಿಟ್ಟಿದ್ದ ಶೋಷಕ ವ್ಯವಸ್ಥೆ ಎಂಬ ಸಾರಾಸಗಟಾದ ನಂಬಿಕೆ. ಆದರೆ ಆಧುನಿಕ ನಾಗರೀಕತೆಯನ್ನು ನಿಷ್ಠುರ ವಿಮರ್ಶೆಗೆ ಒಳಪಡಿಸಿ ಅದಕ್ಕೆ ಪ್ರತಿಯಾಗಿ ಮತ್ತು ಹಕ್ಕುಗಳೇನಿದ್ದರೂ ಕರ್ತವ್ಯ (ಧರ್ಮ) ಪಾಲನೆಯ ಜೊತೆಗೇ ಹುಟ್ಟುವಂಥವು ಎಂದು ಪ್ರತಿಪಾದಿಸುವ ಅಧ್ಯಾತ್ಮಿಕತೆಯನ್ನು ಆಧರಿಸಿದ ಹೊಸ ಸಭ್ಯತೆಯನ್ನು ಕಟ್ಟಲೆಳಿಸಿದ್ದ ಗಾಂಧಿಯನ್ನು ಅಂಬೇಡ್ಕರ್ ಅವರು, ತಮ್ಮ ಕಲ್ಪನೆಯ ಆಧುನಿಕಪೂರ್ವ ವ್ಯವಸ್ಥೆಯ ಪ್ರತಿನಿಧಿಯಾಗಿ ನೋಡುವ ಅತಿ ಸರಳೀಕೃತ ನೋಟಕ್ಕೆ ಈಡಾದರೇನೋ ಎಂಬ ಅನುಮಾನವೂ ಉಂಟಾಗದಿರದು. ಈ ಎಲ್ಲ ಕಾರಣಗಳಿಂದಾಗಿಯೇ ಅಂಬೇಡ್ಕರ್ ಗಾಂಧಿಯನ್ನು ಒಳಹೊಕ್ಕು ಮತ್ತು ಅವರ ವ್ಯಕ್ತಿತ್ವದ ವಿಕಾಸಶೀಲತೆಯ ವಿವರಗಳೊಂದಿಗೆ ಅರ್ಥ ಮಾಡಿಕೊಳ್ಳಲಾಗಲಿಲ್ಲವೆಂದು ಕಾಣುತ್ತದೆ.

ಹಾಗಾಗಿಯೇ ಗಾಂಧಿ ಹೇಗೆ ವರ್ಣಪದ್ಧತಿಯನ್ನು ಜಾತಿ ಪದ್ಧತಿಯಿಂದ ಬೇರ್ಪಡಿಸಿ ನಿರೂಪಿಸಲು ಸಾಧ್ಯವಾಯಿತು ಮತ್ತು ಹೇಗೆ ಅಸ್ಪೃಶ್ಯತಾ ನಿವಾರಣೆಯ ಮೇಲೆ ಗಮನ ಕೇಂದ್ರೀಕರಿಸುವ ಮೂಲಕ ಜಾತಿ ಪದ್ಧತಿಯ ಸೊಂಟ ಮುರಿಯಬಹುದು ಎಂಬ ಅವರ ಸೂಕ್ಷ್ಮ ತರ್ಕವನ್ನು ಅಂಬೇಡ್ಕರ್ ಅರ್ಥ ಮಾಡಿಕೊಳ್ಳದೇ ಹೋದರು ಎಂದೆನಿಸುತ್ತದೆ. ಈ ಕಾರಣದಿಂದಾಗಿಯೇ ಅವರು, ಈಗ ಭಾರತೀಯರೆಲ್ಲರೂ ಶೂದ್ರರೇ ಮತ್ತು ಬ್ರಾಹ್ಮಣನಾಗಿ ಇಂದು ಹುಟ್ಟಿದವನ ಧರ್ಮ ಎಂದರೆ ಚರಕದಲ್ಲಿ ನೂಲುವುದು ಎಂದ ಗಾಂಧಿಯನ್ನು, ಸ್ವತಃ ಬನಿಯಾ ಆಗಿದ್ದರೂ ಅವರೇಕೆ ವಕೀಲಿಕೆಗೆ ಬಂದರು? ಅವರ ಮಗನನ್ನು ಅಂತರ್‌ಜಾತಿ ವಿವಾಹವಾಗಲು, ಪತ್ರಿಕಾವೃತ್ತಿ ಕೈಗೊಳ್ಳಲು ಅವಕಾಶ ನೀಡಿದರು ಎಂಬ ಅಸಂಗತವಾದ ವೈಯಕ್ತಿಕ ಪ್ರಶ್ನೆಗಳನ್ನು ಕೇಳುತ್ತಾರೆ. ಜೊತೆಗೆ, ವರ್ಣಧರ್ಮದ ಪ್ರಕಾರ ಪೂರ್ವಜರ ವೃತ್ತಿಯನ್ನು ಅನುಸರಿಸಬೇಕೆಂಬ ಗಾಂಧಿಯವರ ಮಾತನ್ನು ಗೇಲಿ ಮಾಡುತ್ತಾ, ಗಾಂಧಿ ವರ್ಣಗಳ ಸೇವೆಯನ್ನು ವಿಂಗಡಿಸಿರುವ

ಸ್ವರೂಪವನ್ನೇ-ಅದರ ನೈತಿಕ ಕೇಂದ್ರವನ್ನೇ-ಗಮನಿಸದವರಂತೆ, ಹಾಗಾದರೆ ಸೂಳೆಯರು ಸೂಳೆಗಾರಿಕೆಯನ್ನೂ, ತಲೆ ಹಿಡುಕರು ತಲೆಹಿಡುಕತನವನ್ನೂ ಮುಂದುವರೆಸಬೇಕೆ? ಎಂದು ಕೇಳುವ ಮೂಲಕ ತಮ್ಮ ವಾದಸರಣಿಯ ಘನತೆಗೆ ತಾವೇ ಭಂಗ ತಂದುಕೊಳ್ಳುತ್ತಾರೆ.

ಅಂಬೇಡ್ಕರ್ ಅವರನ್ನು ಗಾಂಧಿ ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳಲು ಮತ್ತು ಅವರತ್ತ ಸರಿಯಲು ಮಾಡಿದ ಪ್ರಯತ್ನದ ಹತ್ತನೇ ಒಂದು ಭಾಗದಷ್ಟನ್ನಾದರೂ ಅಂಬೇಡ್ಕರ್ ಗಾಂಧಿಯನ್ನು ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳಲು, ಅವರತ್ತ ಸರಿಯಲು ಯತ್ನಿಸದಿದ್ದುದು ಆಧುನಿಕ ಭಾರತದ ಚರಿತ್ರೆಯ ಒಳ ಚಲನೆಗಳನ್ನು ನಿಯಂತ್ರಿಸಿದ ಹಲವು ನೆಲೆಗಳ ಸ್ಮೃತಿ-ವಿಸ್ಮೃತಿಗಳನ್ನೂ ಅದರ ನಿಗೂಢ ದುರಂತ ಪ್ರಜ್ಞೆಯನ್ನೂ ಸೂಚಿಸುತ್ತದೆ ಎಂದಷ್ಟೇ ಸದ್ಯಕ್ಕೆ ಹೇಳಬಹುದು.

ಪುಣೆ ಒಪ್ಪಂದದ ನಂತರವೂ ಗಾಂಧಿ ಮೇಲೆ ಅಂಬೇಡ್ಕರ್‌ಗೇಕೆ ಕೋಪ?

ಈ ಸಂದರ್ಭದಲ್ಲಿಯೇ 1945ರಲ್ಲಿ ಅಂಬೇಡ್ಕರ್ ಬರೆದ 'ಕಾಂಗ್ರೆಸ್ ಮತ್ತು ಗಾಂಧಿ ಅಸ್ಪೃಶ್ಯರಿಗೆ ಮಾಡಿದ್ದೇನು?' ಎಂಬ ಪುಸ್ತಕದಲ್ಲಿ ಯಾವ 1932ರ ಪುಣೆ ಒಪ್ಪಂದಕ್ಕೆ ಸಹಿ ಹಾಕಿ ಅದರಲ್ಲಿ ಗಾಂಧಿಯ ಉದಾರತೆಯನ್ನು ಶ್ಲಾಘಿಸಿ, ಅವರು ಸ್ವಾತಂತ್ರ್ಯ ಹೋರಾಟವನ್ನು ಕೈಬಿಟ್ಟು ಅಸ್ಪೃಶ್ಯರ ಪರ ಹೋರಾಟದ ನಾಯಕತ್ವ ವಹಿಸಿಕೊಂಡರೆ ತಾವು ಅವರ ಅನುಯಾಯಿಯಾಗುವುದಾಗಿ ಹೇಳಿ ಸ್ವಾಗತಿಸಿದ್ದರೋ ಅದನ್ನು ನಿರಾಕರಿಸುತ್ತಾ, ಈ ಒಪ್ಪಂದದಲ್ಲಿ ಗಾಂಧಿಯ ಪಾತ್ರ (ಅಮರಣಾಂತ ಉಪವಾಸ) ಕೊಳಕಾಗಿತ್ತು ಎನ್ನುತ್ತಾ ಕೆರಳಿದ ಭಾಷೆಯಲ್ಲಿ ಗಾಂಧಿ ವಿರುದ್ಧ ದಾಳಿ ಮಾಡಿದ್ದೇಕೆ? ಎಂಬ ಪ್ರಶ್ನೆಗೂ ಉತ್ತರ ಹುಡುಕುವುದು ಸೂಕ್ತವೇನೋ. ಈ ಮುಂಚೆ ಉಲ್ಲೇಖಿಸಿದ ಗಾಂಧಿ-ಅಂಬೇಡ್ಕರ್ ಸಂವಾದದ ಬಗೆಗಿನ ತಮ್ಮ ಕಿರುಪುಸ್ತದಲ್ಲಿ ರಾಜ್‌ಮೋಹನ್ ಗಾಂಧಿ ಯವರು ಇದಕ್ಕೊಂದು ಸಮಂಜಸವೆನ್ನಬಹುದಾದ ಉತ್ತರ ನೀಡಿದ್ದಾರೆ.

ತಮ್ಮ 1945ರ ಪುಸ್ತಕದಲ್ಲಿ ಅಂಬೇಡ್ಕರ್, ಪುಣೆ ಒಪ್ಪಂದವು ತಮ್ಮ ಬೇಡಿಕೆಗಳಿಗೆ ಮಾನ್ಯತೆ ನೀಡುವ ಮೂಲಕ ತಮ್ಮ ಜಯದ ಸಂಕೇತವೇ ಆಗಿತ್ತು ಎಂದು ಹೇಳಿಕೊಳ್ಳುತ್ತಿರುವಾಗಲೇ ಗಾಂಧಿ ತಮಗೆ, ತಮ್ಮ ಸಮುದಾಯಕ್ಕೆ ಅನ್ಯಾಯ ಮಾಡಿದರು ಎಂದೂ ವಾದಿಸುತ್ತಾ ಅವರ

ವಿರುದ್ಧ ತೀಕ್ಷ್ಣವೆನ್ನಿಸುವ ಶಬ್ದಗಳನ್ನು ಬಳಸುತ್ತಾರೆ. ಅದಕ್ಕೆ ಅವರು ನೀಡುವ ಕಾರಣ, ಒಪ್ಪಂದದ ನಂತರದ ಚುನಾವಣೆಗಳಲ್ಲಿ ಗಾಂಧಿ ಮತ್ತು ಕಾಂಗ್ರೆಸ್ ತಮ್ಮ ಮತ್ತು ತಮ್ಮ ಪಕ್ಷದ ಅಭ್ಯರ್ಥಿಗಳನ್ನು ವಾಮ ಮಾರ್ಗಗಳನ್ನು ಬಳಸಿ ಸೋಲಿಸಿದರು ಎಂಬುದು. ಈ ಆರೋಪಕ್ಕೆ ಯಾವುದೇ ಸಮರ್ಥ ಆಧಾರ ಕಾಣುವುದಿಲ್ಲ ಎನ್ನುವ ರಾಜ್‌ಮೋಹನ್ ಗಾಂಧಿಯವರು, ಅಂಬೇಡ್ಕರ್ ಈ ಧಾಟಿಯಲ್ಲಿ ಈ ಪುಸ್ತಕ ಬರೆಯಲು ಕಾರಣವನ್ನು ಗುರುತಿಸುವುದು ಅಂದಿನ ರಾಜಕೀಯ ಸಂದರ್ಭದಲ್ಲಿ. ಹಿಂದಿನ ಎರಡೂ ಚುನಾವಣೆಗಳ ಸೋಲಿನಿಂದ ಕಂಗೆಟ್ಟಿದ್ದ ಅಂಬೇಡ್ಕರ್ ಆಗ ಬ್ರಿಟಿಷ್ ವೈಸ್‌ರಾಯ್‌ರ ಆಡಳಿತ ಮಂಡಳಿ ಸದಸ್ಯರಾಗಿದ್ದು (ಅಂದರೆ ಸಚಿವರಾಗಿದ್ದು), ದೇಶಕ್ಕೆ ಸ್ವಾತಂತ್ರ್ಯ ನೀಡಲು ರೂಪಿಸಲಾಗುತ್ತಿದ್ದ ಯೋಜನೆಯಲ್ಲಿ ತಮ್ಮ ಸಮುದಾಯದ ಹಕ್ಕನ್ನು ಬ್ರಿಟಿಷ್ ಪ್ರಭುತ್ವದ ಮುಂದೆ ಬಲವಾಗಿ ಪ್ರತಿಪಾದಿಸುವ ಮತ್ತು ನಂತರದಲ್ಲೇ ನಡೆಯಲಿದ್ದ ಚುನಾವಣೆಗಳಲ್ಲಿ ತಮ್ಮ ಪಕ್ಷದ ಮುಂಗಡ ಪ್ರಚಾರವನ್ನೂ ಕೈಗೊಳ್ಳುವ ಪ್ರಯತ್ನವನ್ನು ಈ ಪುಸ್ತಕದಲ್ಲಿನ ವಾದದ ಮೂಲಕ ಮಾಡಿದ್ದಿರಬಹುದೆಂದು ರಾಜ್‌ಮೋಹನ್ ಹೇಳುತ್ತಾರೆ. (ಆದರೆ ದುರದೃಷ್ಟಕರ ಸಂಗತಿ ಎಂದರೆ 1945–46ರ ಆ ಚುನಾವಣೆಗಳಲ್ಲೂ ಅಂಬೇಡ್ಕರ್ ಪಕ್ಷ ಆ ಹಿಂದಿನ ಚುನಾವಣೆಗಳಲ್ಲಿ ಅನುಭವಿಸಿದ್ದಕ್ಕಿಂತ ದೊಡ್ಡದಾದ ಸೋಲನ್ನು ಅನುಭವಿಸುತ್ತದೆ.)

ಆದರೆ ಇಲ್ಲಿ ಪ್ರಶ್ನೆ: ಗಾಂಧಿ ಚುನಾವಣಾ ರಾಜಕಾರಣದಲ್ಲಿ ಪಾತ್ರ ವಹಿಸುತ್ತಿದ್ದರೇ ಮತ್ತು ಕಾಂಗ್ರೆಸ್‌ನ್ನು ಒಂದು ಚುನಾವಣಾ ರಾಜಕೀಯ ಪಕ್ಷವಾಗಿ ಮಾನ್ಯ ಮಾಡಿದ್ದರೇ ಎಂಬುದು. ಬಹುಶಃ ಈ ಪ್ರಶ್ನೆಗೆ ಮತ್ತು ಅಂಬೇಡ್ಕರ್ ಅವರ ಆರೋಪಗಳಿಗೆ ಉತ್ತರ ಗಾಂಧಿ 1946ರ ಆಗಸ್ಟ್ 10ರಂದು ವಲ್ಲಭಾಯಿ ಪಟೇಲ್ ಅವರಿಗೆ ಬರೆದ ಪತ್ರದ ಈ ಸಾಲುಗಳಲ್ಲಿವೆ ಎಂದು ನಾನು ಭಾವಿಸುತ್ತೇನೆ: 'ಹರಿಜನರನ್ನು ಥಳಿಸುವವರು, ಕೊಲ್ಲುವವರು, ಬಾವಿಗಳನ್ನು ಬಳಸದಂತೆ ಅವರನ್ನು ತಡೆದವರು, ಶಾಲೆಗಳಿಂದ ಹೊರಗಟ್ಟಿದವರು ಮತ್ತು ತಮ್ಮ ಮನೆಗಳಲ್ಲಿ ಅವರಿಗೆ ಪ್ರವೇಶ ನಿರಾಕರಿಸಿದವರು ಯಾರು? ಕಾಂಗ್ರೆಸ್ಸಿಗರೇ. ಅಲ್ಲವೇ? ಈ ಬಗ್ಗೆ ಒಂದು ಸುಸ್ಪಷ್ಟ ಚಿತ್ರಣ ಇಟ್ಟುಕೊಳ್ಳುವುದು ನಿಮಗೆ ತೀರಾ ಅಗತ್ಯ (ಸಮಗ್ರ ಕೃತಿಗಳು 85: 102).

ಅದೇನೇ ಇರಲಿ, ಗಾಂಧಿ ಮರಣದ ನಂತರವೂ ಅಂಬೇಡ್ಕರ್‌ಗೆ ಅವರ ಮೇಲಿನ ಕೋಪ ಆರಿರಲಿಲ್ಲ ಎಂಬುದು ಅವರು ಬಿಬಿಸಿಗೆ ನೀಡಿದ ರೇಡಿಯೋ ಸಂದರ್ಶನದಲ್ಲಿ (1955) ಮಾಡಿರುವ ವೈಯಕ್ತಿಕ ದಾಳಿ (ಉದಾ: ಗಾಂಧಿ ಎಂದೂ ಮಹಾತ್ಮನಾಗಿರಲಿಲ್ಲ... ನೈತಿಕವಾಗಿ ಸಹ... ಆತ 'ಯಂಗ್ ಇಂಡಿಯಾ'ದ ಇಂಗ್ಲಿಷ್ ಬರಹಗಳಲ್ಲಿ ಸುಧಾರಕನಂತೆ ಬರೆಯುತ್ತಿದ್ದರೆ; 'ನವಜೀವನ'ದಲ್ಲಿ ಬರೆಯುತ್ತಿದ್ದ ಗುಜರಾತಿ ಬರಹಗಳಲ್ಲಿ ಕಟ್ಟಾ ಸಂಪ್ರದಾಯವಾದಿಯಂತೆ ಬರೆಯುತ್ತಿದ್ದ ಆತ್ಮವಂಚಿಕ ಇತ್ಯಾದಿ) ಶ್ರುತಪಡಿಸುತ್ತದೆ.

ಆಶ್ರಮದಲ್ಲಿ ವಿವಾಹ: ಗಾಂಧಿ ಷರತ್ತುಗಳು

ನಾನು ಮೊದಲೇ ಹೇಳಿದ ಹಾಗೆ ಗಾಂಧಿ ನಂಬಿದ್ದ ವರ್ಣಧರ್ಮ ಅವರು ಕಟ್ಟಬಯಸಿದ್ದ ನವಭಾರತದ ಸಾಮಾಜಿಕ ತಳಹದಿಯ ನೀತಿಸಂಹಿತೆಯಾಗಿದ್ದಿರಬಹುದು. ಅದು ಅವರದ್ದೇ ಕಲ್ಪನೆಯಾಗಿದ್ದಿರ ಬಹುದು, ಅದಕ್ಕೆ ದೂರತರ್ಕದ ಶಾಸ್ತ್ರೀಯ ಆಧಾರಗಳೂ ಇರಬಹುದು. ಆಧುನಿಕ ಜೀವನ ಮೌಲ್ಯಗಳ ಒತ್ತಡಕ್ಕೆ ಸಿಕ್ಕಿ ಬಹು ಬದಲಾದ ಇಂದಿನ ಸಾಮಾಜಿಕ ಸಂದರ್ಭದಲ್ಲಿ ಅದು ಅವ್ಯಾವಾಹರಿಕವೂ ಆಗಿ ಕಂಡು, ಅದರಿಂದಾಗಿ ಅದು ಅರ್ಥಹೀನವಾಗಿಯೂ, ಅಸಂಬದ್ಧವಾಗಿಯೂ, ಕೆಲವರಿಗೆ ಹುಚ್ಚು ಕಲ್ಪನೆ ಅಥವಾ ಹುಚ್ಚಾಟವಾಗಿಯೂ ಕಾಣಬಹುದು. ಆದರೆ ಅದರ ಹಿಂದಿದ್ದ ಒಂದು ಸಮಾಜದ ಕಲ್ಪನೆಯ ವಿಶಿಷ್ಟ ಸಮಗ್ರತೆಯ ನೋಟವನ್ನು ನಾವು ಅಲ್ಲಗೆಳೆಯಲಾಗದು. ಐವತ್ತು ಅಥವಾ ನೂರು ವರ್ಷಗಳ ಅಳತೆಗಳಲ್ಲಿ ಇಂತಹ ಹೊಸ ಯುಗಸೃಷ್ಟಿಯ ಉದ್ದೇಶವುಳ್ಳ ಚಿಂತನೆಗಳ ಅರ್ಥಪೂರ್ಣತೆಯನ್ನು ನಿರ್ಧರಿಸಲಾಗದು ಎಂಬುದನ್ನೂ ನಾವಿಲ್ಲಿ ಒಪ್ಪಿಕೊಳ್ಳಬೇಕೆಂದು ಕಾಣುತ್ತದೆ. ಆದರೆ ಸುತರಾಂ ಒಪ್ಪಿಕೊಳ್ಳಲಾಗದ ಒಂದು ಸಂಗತಿ ಎಂದರೆ, ಅಂಬೇಡ್ಕರ್ ಹಾಗೂ ಅವರ ಅನುಯಾಯಿಗಳು ಮತ್ತು ಇಂದಿನ ಕೆಲವು ಆಧುನಿಕರು ನಂಬಿದಂತೆ ಗಾಂಧಿಯವರ ವರ್ಣಧರ್ಮ ಅನೈತಿಕವಾಗಲೀ, ಅನ್ಯಾಯದ್ದಾಗಲಿ ಅಥವಾ ಅವೈಚಾರಿಕವಾದದ್ದಾಗಲೀ ಆಗಿರಲಿಲ್ಲ ಎಂಬುದು. ಏಕೆಂದರೆ, ತಮ್ಮ ವರ್ಣಧರ್ಮದ ಅಂತಿಮ ಸಂದೇಶದಂತೆ ಅವರು ಸ್ವಾತಂತ್ರ್ಯ ದಿನದ ನಾಲ್ಕೇ ತಿಂಗಳುಗಳಿಗೆ ಮುನ್ನ–೧೯೪೭ರ ಏಪ್ರಿಲ್ ೨೪ರಂದು–

ಪಾಟ್ನಾದಲ್ಲಿ, ತಮ್ಮ ಆಶ್ರಮದಲ್ಲಿ ಅಂತರ್‌ಜಾತಿ ವಿವಾಹಗಳಿಗೆ ಮಾತ್ರ ಅವಕಾಶವಿರುವ ಮತ್ತು ನವದಂಪತಿಗಳಲ್ಲಿ ಒಬ್ಬರು ಅಸ್ಪಶ್ಯರಾಗಿದ್ದಲ್ಲಿ ಮಾತ್ರ ತಾವು ಹಾಜರಿದ್ದು ತಮ್ಮ ವೈಯಕ್ತಿಕ ಆಶೀರ್ವಾದ ಲಭ್ಯವಿರುವ ನಿಯಮ ಜಾರಿಗೆ ತಂದಿರುವುದಾಗಿ ಘೋಷಿಸಿದ ವ್ಯಕ್ತಿಯ ಮನಸ್ಸು ಎಂದೂ ಅಸಮಾನತೆಯ ಪ್ರತಿಪಾದನೆಯ ಕಲ್ಮಶಗಳಿಂದ ಕೂಡಿರಲಾರದು.

ಇನ್ನು ಗಾಂಧಿ ರಾಷ್ಟ್ರ ವಿಭಜನೆಯ ಸಂದರ್ಭದಲ್ಲಿ ಭುಗಿಲೆದ್ದ, ಸಾವಿರಾರು ಜನರ ಕಗ್ಗೊಲೆಗೆ ಕಾರಣವಾಗಿ ಜಗತ್ತಿನ ಇತಿಹಾಸದಲ್ಲೇ ಕಾಣದಂತಹ ಲಕ್ಷಾಂತರ ಜನರ ಹಿಂಸಾತ್ಮಕ ವಲಸೆಯಂತಹ ದಾರುಣ ಪರಿಸ್ಥಿತಿಯಲ್ಲೂ, ತಮ್ಮ ಮನಸ್ಸಿನ ಸ್ಪಷ್ಟತೆ ಕಳೆದುಕೊಳ್ಳದೆ, ಈ ಮಹಾದುರಂತಕ್ಕೂ ಹಿಂದೂ ಧರ್ಮದಲ್ಲಿನ ಅಸ್ಪೃಶ್ಯತೆಯ ಆಚರಣೆಗೂ ಇರುವ ಸಂಬಂಧವನ್ನು ನೌಖಾಲಿಯ ಪಾದಯಾತ್ರೆಯ ಸಂದರ್ಭದಲ್ಲಿ ಅಲ್ಲಿನ ಹಳ್ಳಿಗಳ ಹೆಂಗಸರಿಗೆ 'ಪ್ರತಿ ದಿನ ನಿಮ್ಮೊಂದಿಗೆ ಊಟ ಮಾಡಲು ಒಬ್ಬ ಹರಿಜನನನ್ನು ಆಹ್ವಾನಿಸಿ, ಇಲ್ಲವೇ ಕೊನೇ ಪಕ್ಷ ನೀವು ಆಹಾರ ಅಥವಾ ನೀರು ಸೇವಿಸುವ ಮೊದಲು ಅದನ್ನು ಸ್ಪರ್ಶಿಸುವಂತೆ ಹರಿಜನನನ್ನು ಕೇಳಿಕೊಳ್ಳಿ. ನಿಮ್ಮ ಪಾಪಗಳಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳಿ' ಎಂದು ಸೂಚಿಸುತ್ತಾ, ಇದನ್ನು ಮಾಡದೇ ಹೋದರೆ ಆ ಹಿಂದೂ ಮಹಿಳೆಯರಿಗೆ ಇನ್ನಷ್ಟು ಹಿಂಸೆ ಕಾದಿದೆ ಎಂದು ಎಚ್ಚರಿಸಿದರು. (ತೆಂಡುಲ್ಕರ್ ೧೯೫೧, ೭:೩೫೦; ಸಮಗ್ರ ಕೃತಿಗಳು ೯೩:೨೨೯)

ಗಾಂಧಿಯ ಪುನರನ್ವೇಷಣೆ ಏಕೆ? ಹೇಗೆ?

ಗಾಂಧಿಯ ವ್ಯಕ್ತಿತ್ವ-ವಿಚಾರಗಳ ವಿಕಾಸದ ಹಿಂದೆ ಅಂಬೇಡ್ಕರ್ ಸೇರಿದಂತೆ ಅವರು ಮುಖಾಮುಖಿಯಾದ ಹಲವು ವ್ಯಕ್ತಿತ್ವಗಳೂ, ಸಂದರ್ಭಗಳೂ ಇದ್ದವು ಎಂಬುದನ್ನು ಇಲ್ಲಿ ಪ್ರತ್ಯೇಕವಾಗಿ ಹೇಳಬೇಕಿಲ್ಲ. ಹಾಗೆ ನೋಡಿದರೆ, ಯಾರ ವ್ಯಕ್ತಿತ್ವ ಯಾವುದೇ ಮುಖಾಮುಖಿಗಳಿಲ್ಲದೆ ವಿಕಸಿತಗೊಂಡಿದೆ? ಗೊತ್ತಿದ್ದವರು ಹೇಳಬೇಕು. ಆದರೂ ಕೊನೆಗೊಂದು ಪ್ರಶ್ನೆ ಉಳಿದೇ ಉಳಿಯುತ್ತದೆ: ಗಾಂಧಿ ನಿರೂಪಿಸಿದ ವರ್ಣ ಧರ್ಮದ ವಿವರಣೆ ಎಷ್ಟೇ ಸದುದ್ದೇಶಗಳಿಂದ ಕೂಡಿದ್ದರೂ ಅದು ಇಂದು ಆಚರಣೆಗೆ ಬರಬಲ್ಲುದೇ? ಈ ಪ್ರಶ್ನೆಗೆ ಗಾಂಧಿಯ ಬಗ್ಗೆ ಗೌರವವುಳ್ಳವರೂ ಸೇರಿದಂತೆ ಬಹುಸಂಖ್ಯಾತ ಜನ ಇಲ್ಲ, ಸಾಧ್ಯವಿಲ್ಲ ಎಂದು ಹೇಳುವ ಮುನ್ನವೇ ಸ್ವತಃ

ಗಾಂಧಿಯವರೇ ಅದು ಅಸಾಧ್ಯ ಎಂದು ಸ್ಪಷ್ಟಪಡಿಸಿದ್ದರು! ಶುದ್ಧ ವರ್ಣಧರ್ಮವನ್ನು ಪುನಃಸ್ಥಾಪಿಸುವುದು 'ಇರುವೆಯೊಂದು ಸಕ್ಕರೆ ಮೂಟೆಯನ್ನು ಎತ್ತಬಲ್ಲಷ್ಟೇ ಅಥವಾ ಡೇಮ್ ಪಾರ್ಕಿಂಗ್‌ಟನ್‌ನು ಅಟ್ಲಾಂಟಿಕ ಸಾಗರವನ್ನು ಪೊರಕೆಯೊಂದರಿಂದ ಹಿಂದಕ್ಕೆ ತಳ್ಳಬಲ್ಲಷ್ಟೇ ಅಸಾಧ್ಯ' ಎಂದು ಅಭಿಪ್ರಾಯಪಟ್ಟಿದ್ದರು!! ('ಜಾತಿ ವಿನಾಶ' ಕುರಿತ ಅಂಬೇಡ್ಕರ್‌ರೊಡನೆಯ ಪತ್ರ ಸಂವಾದ: ೧೯೩೬) ಹಾಗಿದ್ದೂ ಅವರೇಕೆ ವರ್ಣಧರ್ಮವನ್ನು (ತಮ್ಮದೇ ವ್ಯಾಖ್ಯಾನಸಹಿತವಾಗಿಯಾದರೂ) ಹಾಗೆ ಸಮರ್ಥಿಸಿದರು? ಗಾಂಧಿಗೆ ಪ್ರಾಚೀನ ಸಾಮಾಜಿಕ ರೂಪಗಳ ಹಿಂದಿದ್ದ ವಿವೇಕ ಮತ್ತು ಒಳನೋಟಗಳು ಇಂದಿನ ಸಂದರ್ಭಕ್ಕೆ ಎಷ್ಟರಮಟ್ಟಿಗೆ ವ್ಯಾಖ್ಯಾನಗಳಿಗೆ, ಬಳಕೆಗೆ ಒದಗಬಲ್ಲವು ಎಂಬುದನ್ನು ಪರಿಶೀಲಿಸಿ ತಮ್ಮ ಸಾಮಾಜಿಕ ಮೀಮಾಂಸೆಯನ್ನು ಪ್ರಸ್ತುತಪಡಿಸಲು ಆ ಸಮರ್ಥನೆ ಅಗತ್ಯವಾಗಿತ್ತು. ಇಂತಹ (ಮೀಮಾಂಸಕ) ಪ್ರಯೋಗಗಳಿಗೆ ಅವರು ತಮ್ಮ ಜನಪ್ರಿಯತೆಯನ್ನು ಪಣಕ್ಕೊಡ್ಡಲು ಎಂದೂ ಹಿಂಜರಿಯುತ್ತಿರಲಿಲ್ಲ. ಅವರು ವರ್ಣ ಧರ್ಮವನ್ನು ಇಂದಿಗೆ ವ್ಯಾಖ್ಯಾನಿಸಿ, ಇಂದು ಬ್ರಾಹ್ಮಣನೆಂದರೆ ಯಾರು (ಅಂದರೆ ಜ್ಞಾನಾನ್ವೇಷಣೆ ಎಂದರೆ ಏನು?) ಎಂಬ ಪ್ರಶ್ನೆಗೆ ಪಡೆದ ಉತ್ತರವನ್ನೇ ನೋಡಿ! ವರ್ಣಧರ್ಮದ ಅವರ ಸಮರ್ಥನೆಯ ಗುಟ್ಟು ಮತ್ತು ಯಶಸ್ಸು ಯಾರಿಗಾದರೂ ಗೊತ್ತಾಗುವುದು.

ಗಾಂಧಿ ಜನತೆಯೊಂದಿಗೆ ಸಂವಾದಿಸುತ್ತಿದ್ದ ವಿಶಿಷ್ಟ ರೀತಿಯೇ ಇದು. ಇಂತಹುದೇ ಉದಾಹರಣೆಗಳೆಂದರೆ, ಯಂತ್ರ ನಾಗರೀಕತೆ ಮತ್ತು 'ಗ್ರಾಮಸ್ವರಾಜ್ಯ' ಕುರಿತ ಗಾಂಧಿಯವರ ನಿಲುವುಗಳು. 'ಹಲ್ಲಿನ ಕಸ ತೆಗೆಯುವ ಕಡ್ಡಿಯೂ ಒಂದು ಯಂತ್ರವೇ' ಎನ್ನುತ್ತಾ, ಯಂತ್ರವನ್ನು ತಾವು ವಿರೋಧಿಸುವುದು ಅದು ಒಂದು ತತ್ವವಾಗಿ ಜೀವನ ಕ್ರಮದ ಚಾಲಕ ಶಕ್ತಿಯಾಗುವುದನ್ನು, ಅದು ಒಂದು ಭ್ರಾಂತಿಯಾಗಿ ಹರಡುವುದನ್ನೇ ಹೊರತು, ಪ್ರತಿಯೊಂದು ಯಂತ್ರವನ್ನೂ ಅಲ್ಲ ಎನ್ನುತ್ತಾರೆ. ಇದನ್ನರಿಯದವರು ಗಾಂಧಿ ವರ್ಣಧರ್ಮದ ಪ್ರತಿಪಾದಕರಾಗಿದ್ದರು ಎಂದು ದುರುದ್ದೇಶಪೂರ್ವಕವಾಗಿ ಪ್ರಚಾರ ಮಾಡುವಂತೆ, ಕೆಲವರು ಗಾಂಧಿ ಯಂತ್ರವಿರೋಧಿಯಾಗಿದ್ದರು ಎಂದು ಸಾರಾಸಗಟಾಗಿ ಹೇಳುತ್ತಾ ಜನರ ದಾರಿ ತಪ್ಪಿಸುತ್ತಾರೆ. ಹಾಗೇ, ಗ್ರಾಮ ಸ್ವರಾಜ್ಯದ ಪರಿಕಲ್ಪನೆಯ ಭಾಗವಾಗಿ ಗಾಂಧಿ ಹೇಳುವ ಗ್ರಾಮವು ವಾಸ್ತವದಲ್ಲಿ ಸಾಕಾರಗೊಳ್ಳಬಹುದೇ

ಎಂಬ ಪ್ರಶ್ನೆಗೆ ಗಾಂಧಿ ಕೊಡುವ ಉತ್ತರ: ಜ್ಯಾಮಿತಿಯಲ್ಲಿ ಬಿಂದುವೆಂಬುದು ಕಣ್ಣಿಗೆ ಕಾಣಿಸದಂತಹದು ಎಂದ ಮಾತ್ರಕ್ಕೆ ಜ್ಯಾಮಿತಿಗೆ ಮೂಲಾಧಾರವಾಗಿರುವ ಅದು ಇಲ್ಲ ಅಥವಾ ಇರಲಾರದು ಎಂತಲೇ? ಅವರ ಪ್ರಕಾರ ಗ್ರಾಮ ಎನ್ನುವುದು ಗರಿಷ್ಟ ಪ್ರಜಾಪ್ರಭುತ್ವದ ಸಾಧ್ಯತೆಯ-ಸಾಕಾರತೆಯ ಒಂದು ಸಂಕೇತ; ಒಂದು ಸ್ಫೂರ್ತಿಬಿಂದು; ಗ್ರಾಮ ಸ್ವರಾಜ್ಯ ನಕ್ಷೆಯ ರಚನೆಯ ಹಿಂದಿನ ಮಾನಸಿಕ ಸತ್ವ. ಹಾಗಾಗಿ ಗಾಂಧಿ ವಿಚಾರಗಳನ್ನು ನಾವು ಇಂದು ಗ್ರಹಿಸಬೇಕಾದ ಬಗೆಯೆಂದರೆ, ಅವನ್ನು ನಮ್ಮ ಕಾಲ-ದೇಶಗಳಿಗೆ ಸ್ಪಂದಿಸುವ ರೀತಿಯಲ್ಲಿ ಪುನರ್‌ವ್ಯಾಖ್ಯಾನಿಸಿ, ಪುನರ್‌ರೂಪಿಸಿಕೊಳ್ಳುವುದೇ ಆಗಿದೆ. ಇಂತಹ ಪ್ರಯತ್ನ ಮಾತ್ರ ಗಾಂಧಿಯ ಪುನರನ್ವೇಷಣೆ್ರನಿಸಿಕೊಳ್ಳುತ್ತದೆ ಮತ್ತು ಇದು ವಾಸ್ತವದ ಸರಿಯಾದ ಗ್ರಹಿಕೆ ಮತ್ತು ಸೃಜನಶೀಲ ಚಿಂತನೆಯನ್ನು ಬೇಡುವ ಸವಾಲಿನ ಕೆಲಸವಾಗಿರುತ್ತದೆ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಅಂಬೇಡ್ಕರ್ ಅವರ ಜಾತಿ ಚಿಂತನೆ : ಕೆಲವು ಪ್ರಶ್ನೆಗಳು

ಗಾಂಧಿ ಮತ್ತು ಅಂಬೇಡ್ಕರ್ ನಡುವಣ ಸಂವಾದಗಳ ಬಗ್ಗೆ ಇತ್ತೀಚಿನ ವರ್ಷಗಳಲ್ಲಿ ಅರುಣ್ ಕೆ ಪಟ್ನಾಯಕ್, ರಘುರಾಮ ರಾಜು, ಸಚ್ಚಿದಾನಂದನ್, ಡಿ.ಆರ್. ನಾಗರಾಜ, ಯೋಗೇಂದ್ರ ಯಾದವ್, ಸುಹಾಸ್ ಪಲ್ಶೀಕರ್, ಸುರೀಂದರ್ ಜೋಡ್ಕಾ, ಪಾರ್ಥ ಚಟರ್ಜಿ, ರಾಮಚಂದ್ರ ಗುಹಾ ಮುಂತಾದವರು ಹೊಸ ಅಧ್ಯಯನಗಳನ್ನು ಮಾಡಿ ಈ ವಿಷಯದಲ್ಲಿ ಮತ್ತಷ್ಟು ಯೋಚಿಸಲು ನೆರವಾಗುವಂತಹ ಹೊಸ ಒಳನೋಟಗಳನ್ನು ನೀಡಿದ್ದಾರೆ. ಇಂದು ಅಂಬೇಡ್ಕರ್ ಹೆಸರಿನಲ್ಲಿ ರಾಜಕಾರಣ ಮಾಡುತ್ತಿರುವವರು ಮತ್ತು ಅವರ ಬೆನ್ನ ಹಿಂದೆ ಕ್ರಿಯಾಶೀಲರಾಗಿರುವ ಲೇಖಕರು-ಬುದ್ಧಿಜೀವಿಗಳು-ಚಿಂತಕರು ಈ ಮುಂದಿನ ಪ್ರಶ್ನೆಗಳನ್ನು ಮುಖಾಮುಖಿಯಾಗಿಯೇ ಮುಂದೆ ಹೋಗಬೇಕಾಗುತ್ತದೆ ಎನ್ನುತ್ತವೆ ಈ ಅಧ್ಯಯನಗಳು ಮತ್ತು ಒಳನೋಟಗಳು:

೧. ಜಾತಿ ಪದ್ಧತಿ ಅಂಬೇಡ್ಕರ್ ಹೇಳುವ ಹಾಗೆ ಶೇ.೯೦ ಜನರ ಮೇಲಿನ ಶೇ. ೧೦ ಜನರ ಸವಾರಿಯೇ ಆಗಿದ್ದರೆ ಅದು ಈ ನಮ್ಮ ಕಾಲವೂ ಸೇರಿದಂತೆ ಸಾವಿರಾರು ವರ್ಷಗಳ ಕಾಲ ಒಂದಲ್ಲ ಒಂದು ರೂಪದಲ್ಲಿ ಉಳಿದುಕೊಂಡು ಬಂದುದದರ ಮತ್ತು

ಸಾಯಲು ನಿರಾಕರಿಸುತ್ತಿರುವುದರ ರಹಸ್ಯವಾದರೂ ಏನು?

೨. ಶೂದ್ರ ಮತ್ತು ದಲಿತರ ಸಂಬಂಧ ಚಾರಿತ್ರಿಕವಾಗಿ ಅಂಬೇಡ್ಕರ್ ವಾದಿಸುವ ಹಾಗೆ ಸಮೀಪದ್ದೇ ಆಗಿದ್ದರೆ, ಈ ಎರಡು ಜಾತಿ ಸಮೂಹಗಳ ಸಂಬಂಧ ಇಂದು ಅತಿ ವಿಷಮವಾಗಿರಲು ಕಾರಣವೇನು?

೩. ಇಂದಿನ ಬ್ರಾಹ್ಮಣರು ಅಥವಾ ಬ್ರಾಹ್ಮಣಶಾಹಿ (ಹಿಂದುತ್ವದ ರಾಜಕಾರಣದ ಮಿದುಳು?) ಇಂದಿನ ದಲಿತರನ್ನು ರಾಜಕೀಯವಾಗಿ ತಮ್ಮೆಡೆಗೆ ಸೆಳೆದುಕೊಳ್ಳಲು ಯಶಸ್ವಿಯಾಗುತ್ತಿರುವಂತೆ ತೋರುತ್ತಿರುವುದರ ಹಿಂದಿನ ಕಾರಣಗಳೇನು?

(ತುಮಕೂರು ವಿಶ್ವವಿದ್ಯಾನಿಲಯದ ಹಿಂದುಳಿದ ಘಟಕವು ೨೦೧೭ರ ಮಾರ್ಚ್ ೨೭ ಹಾಗೂ ೨೮ರಂದು 'ಜಾತಿ : ಪರಿಕಲ್ಪನೆ–ವಿದ್ಯಮಾನ–ರಾಜಕಾರಣ' ವಿಷಯವಾಗಿ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ 'ಗಾಂಧೀಜಿಯ ಚಿಂತನೆಗಳಲ್ಲಿ ವರ್ಣಾಶ್ರಮ ಧರ್ಮ ಮತ್ತು ಜಾತಿ' ಕುರಿತ ಗೋಷ್ಠಿಯಲ್ಲಿ ಆಡಿದ ಮಾತುಗಳ ವಿಸ್ತೃತ ಬರಹ ರೂಪ; 'ಸಂವಾದ' ಮಾಸಿಕದ ಸೆಪ್ಟಂಬರ್, ೨೦೧೭ರ ಸಂಚಿಕೆಯಲ್ಲಿ ಪ್ರಕಟ.)

ಗಾಂಧಿ ವಾರಸುದಾರಿಕೆಯ ಅಂತ್ಯ ಆರಂಭವಾಗಿದೆಯೇ?

ಆಧುನಿಕವಾಗದೆ ಭಾರತ ತನ್ನ ಪುರಾತನ ಕಸುವನ್ನು ಗಳಿಸಿಕೊಳ್ಳಲಾರದು. ಆದರೆ ಈ ದೇಶವನ್ನು ಕೃತಕ ಮತ್ತು ಮೇಲ್ಮೈ ಮಟ್ಟದಲ್ಲಿ ಐರೋಪ್ಯೀಕರಣಗೊಳಿಸುವಂತಹ ಆಧುನೀಕರಣ ಬೇಡ.

– ರಾಮಮನೋಹರ ಲೋಹಿಯಾ

ನಾವೀಗ ಸ್ವತಂತ್ರ ಭಾರತದ ಎಪ್ಪತ್ತೊಂದನೇ ವರ್ಷಕ್ಕೆ ಕಾಲಿಟ್ಟಿದ್ದೇವೆ. ಕಳೆದ ಎಪ್ಪತ್ತು ಸ್ವಾತಂತ್ರ್ಯ ದಿನಾಚರಣೆಗಳ ದಿನಗಳಂದೂ ನಾವು ನಮ್ಮ ನಾಯಕರ ಮನವಿಯೋ, ಸೂಚನೆಯೋ ಅಥವಾ ಕರೆಯೋ ಅವುಗಳ ಮೇರೆಗೆ ಹಿಂದಿನ ವರ್ಷಗಳ ಸಾಧನೆ–ವೈಫಲ್ಯಗಳ ಅವಲೋಕನ ಮಾಡಿಕೊಳ್ಳುತ್ತಾ ಬಂದಿದ್ದೇವೆ. ಸಾಧನೆಗಳನ್ನು ಮೆಚ್ಚಿಕೊಂಡಿದ್ದೇವೆ. ಆಗಬೇಕಾದ ಕೆಲಸಗಳ ಬಗ್ಗೆ ಆಲೋಚಿಸಿದ್ದೇವೆ. ಈ ಎಲ್ಲ ಅವಲೋಕನ–ಆಲೋಚನೆಗಳ ಒಟ್ಟು ಮೊತ್ತವಾಗಿ ಇಂದು ನಿಂತು ನಮ್ಮ ನೋಟವನ್ನು ಕೀಲಿಸಿದಾಗ, ಪ್ರಜಾಪ್ರಭುತ್ವ ರಾಷ್ಟ್ರವಾಗಿ, ಅದರೆಲ್ಲ ಮಾನವೀಯ ಮತ್ತು ರಾಜಕೀಯ ಉದಾರವಾದಿ ಮೌಲ್ಯಗಳನ್ನು ಸಾಕಷ್ಟು ಜತನದಿಂದಲೇ ಕಾಪಾಡಿಕೊಂಡು ಈ 70 ವರ್ಷಗಳ ಕಾಲ ಉಳಿದಿರುವುದೇ ನಮ್ಮ ಒಂದು ದೊಡ್ಡ ಸಾಧನೆ ಅನಿಸದಿರದು. ನಮ್ಮ ಜೊತೆಗೇ ಸ್ವಾತಂತ್ರ್ಯ ಪಡೆದ ಅನೇಕ ದೇಶಗಳು ಹಾದು ಹೋದ ಮತ್ತು ಹೋಗುತ್ತಿರುವ ರಾಜಕೀಯ ಏಳುಬೀಳುಗಳನ್ನು ನೋಡಿದಾಗ ಈ ನಮ್ಮ ಸಾಧನೆ ಎಷ್ಟು ದೊಡ್ಡದೆಂದು ಗೊತ್ತಾಗುತ್ತದೆ. ಅದರ ಜೊತೆಗೇ ಈ ದೇಶ ತನ್ನ ಜನರ ಲೌಕಿಕ ನೆಮ್ಮದಿಗಾಗಿ ಮಾಡಿರುವ ಪ್ರಯತ್ನಗಳೂ ಮತ್ತು ಪಡೆದಿರುವ ಯಶಸ್ಸೂ ವಿಮರ್ಶಾರ್ಹವಾದದ್ದಾದರೂ, ಕಡಿಮೆ ಮಹತ್ವದ್ದೇನಲ್ಲ. ನಮ್ಮ ಆರೋಗ್ಯ, ಆಯಸ್ಸು, ಅಕ್ಷರತೆ, ವಸತಿ, ನೀರಿನ ಸೌಲಭ್ಯ, ಕೈಗಾರಿಕಾ ಬೆಳವಣಿಗೆ, ಕೃಷಿಯಲ್ಲಿ ಆಗಿರುವ ಸುಧಾರಣೆ ಇತ್ಯಾದಿ ಕ್ಷೇತ್ರಗಳ ಅಭಿವೃದ್ಧಿ

ಸೂಚ್ಯಂಕಗಳಲ್ಲಿ ಕಳೆದ ಎಪ್ಪತ್ತು ವರ್ಷಗಳಲ್ಲಿ ಆಗಿರುವ ಏರಿಕೆ ಹೆಮ್ಮೆ ಪಡುವಂತಹದಲ್ಲದಿದ್ದರೂ ಸಮಾಧಾನಕರವಾಗಿಯೇ ಇದೆ. ಈ ದೃಷ್ಟಿಯಿಂದ ಸದ್ಯದ ಕೇಂದ್ರ ಸರ್ಕಾರ ಭಾರತದ ಪ್ರಗತಿ ಪರಿಸ್ಥಿತಿ ಬಗ್ಗೆ ಹೇಳುತ್ತಿರುವ ಮಾತುಗಳು ಅಪ್ಪಟ ಕೃತಘ್ನತೆಯ ಮಾತುಗಳೇ ಆಗಿವೆ. ಏಕೆಂದರೆ, ಈ ಸರ್ಕಾರ ಇಂದೇನಾದರೂ ಜನ ಕಲ್ಯಾಣ ಕಾರ್ಯಕ್ರಮಗಳನ್ನು ಮಾಡುತ್ತಿದ್ದರೆ, ಅದಕ್ಕೆ ಆಧಾರವಾಗಿರುವುದು ಈ ಸರ್ಕಾರದ ಹಿಂದಿನ ಸರ್ಕಾರಗಳು ಮಾಡಿರುವ ಈ ಕೆಲಸಗಳೇ ಆಗಿವೆ ಎಂಬುದನ್ನೂ ಇಲ್ಲಿ ಹೇಳಬೇಕಾಗಿದೆ.

ಇವೆಲ್ಲ ವಾಸ್ತವಾಂಶಗಳ ನಡುವೆ ನಾವು ಈ ವರ್ಷ, ಈ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಗುರುತಿಸಬೇಕಾದ ಒಂದು ದೊಡ್ಡ ಬದಲಾವಣೆಯೂ ಇದೆ. ಅದು ಭಾರತದ ಭವಿಷ್ಯದ ದೃಷ್ಟಿಯಿಂದಲೂ ಬಹು ಮಹತ್ವದ್ದು ಮತ್ತು ಬಹುಸೂಕ್ಷ್ಮ ಮತ್ತು ಸ್ವೋಪಜ್ಞ ಚರ್ಚೆಗೆ ಒಳಗಾಗಬೇಕಾಗುವಂತಹದ್ದು. ಈ ಚರ್ಚೆಯ ಬಳಿಗೆ ಇಡಿಯಾಗಿ ಒಡೆದುಹೋಗಿರುವ ಇಂದಿನ ರಾಷ್ಟ್ರ ರಾಜಕಾರಣದ ಎರಡೂ ಬದಿಯ ಕೂಗುಮಾರಿಗಳಲ್ಲಿ ಯಾರೊಬ್ಬರನ್ನು ಬಿಟ್ಟುಕೊಂಡರೂ ಚರ್ಚೆ ರೂಕ್ಷವಾಗಿ ನಮ್ಮನ್ನು ಎಲ್ಲಿಗೂ ಕೊಂಡೊಯ್ಯದು ಮತ್ತು ಪರಿಸ್ಥಿತಿಯನ್ನು ಇನ್ನಷ್ಟು ಹಾಳುಗೆಡುಹಬಲ್ಲುದು. ಈ ಸ್ವಾತಂತ್ರ್ಯ ದಿನದಂದು ನಾವು ಗಮನಿಸಲೇಬೇಕಾದ ಆ ಹೊಸ ಬೆಳವಣಿಗೆ ಎಂದರೆ, ನಮ್ಮ ರಾಷ್ಟ್ರದ ಮೂರು ಅತ್ಯುನ್ನತ ಅಧಿಕಾರ ಸ್ಥಾನಗಳಾದ ರಾಷ್ಟ್ರಪತಿ, ಉಪರಾಷ್ಟ್ರಪತಿ ಮತ್ತು ಪ್ರಧಾನಮಂತ್ರಿ ಈ ಮೂರೂ ಹುದ್ದೆಗಳನ್ನೂ ಇಂದು ನಮಗೆ ಸ್ವಾತಂತ್ರ್ಯ ಗಳಿಸಿಕೊಟ್ಟ ರಾಷ್ಟ್ರೀಯ ಹೋರಾಟದ ತಾತ್ವಿಕತೆಯಿಂದ ಹೊರಗಿದ್ದ ತಾತ್ವಿಕ ಧಾರೆಯ ಜನಸಮೂಹದ ರಾಜಕೀಯ ಪ್ರತಿನಿಧಿಗಳೇ ಅಲಂಕರಿಸಿದ್ದಾರೆ ಎಂಬುದು. ಅಷ್ಟೇ ಮುಖ್ಯವಾದ ಇನ್ನೊಂದು ಸಂಗತಿ ಎಂದರೆ ಈ ಮೂರೂ, ಪ್ರಚಲಿತ ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳ ಮೂಲಕವೇ ಆದ ಆಯ್ಕೆಗಳಾಗಿವೆ ಎಂಬುದು. ಇದರ ಜೊತೆಗೇ ನಾವು ಗುರುತಿಸಬೇಕಾದ ಇನ್ನೊಂದು ವಿದ್ಯಮಾನವೆಂದರೆ, ಇದಕ್ಕೆಲ್ಲ ಕಾರಣವಾಗಿರುವ ಮತ್ತು ರಾಷ್ಟ್ರೀಯ ಹೋರಾಟದ ಮುಂಚೂಣಿಯಲ್ಲಿದ್ದ ಕಾಂಗ್ರೆಸ್ ಇಂದು ಒಂದು ರಾಜಕೀಯ ಪಕ್ಷವಾಗಿ ನಿರ್ಣಾಯಕ ಅವನತಿಯ ಸ್ಥಿತಿಗೆ ತಲುಪಿದೆ ಎನ್ನುವುದು.

ಹಾಗಾಗಿ ಈ ಸ್ವಾತಂತ್ರ್ಯ ದಿನದಂದು ನಮ್ಮ ನಾಯಕರ ಕರೆಯ ಗೊಡವೆ ಇಲ್ಲದೆ ನಾವು ಸಾಮಾನ್ಯ ಜನ ಮಾಡಬೇಕಾದ ಪೂರ್ವಾವಲೋಕನದಲ್ಲಿ ಈ ಬೆಳವಣಿಗೆಯ ಬಗ್ಗೆಯೂ ಆಲೋಚಿಸುವುದು ಅನಿವಾರ್ಯವಾಗಿದೆ. ಈ ಬೆಳವಣಿಗೆಯ ಬಗ್ಗೆಯೂ ಏನು, ಈ ಬೆಳವಣಿಗೆಯ ಬಗ್ಗೆಯೇ ಮುಖ್ಯವಾಗಿ ಆಲೋಚಿಸುವ ಅಗತ್ಯವಿದೆ. ಹಾಗೆ ಆಲೋಚಿಸುವಾಗ ಈ ನಿರ್ದಿಷ್ಟ ಕಾಲಘಟ್ಟವನ್ನು ರಾಷ್ಟ್ರಜೀವನದ ಮೌಲ್ಯ ವ್ಯವಸ್ಥೆಯಲ್ಲಿ ಆಗಿರುವ ಮುಖ್ಯವೂ, ನಿರ್ಣಾಯಕವೂ ಆದ ಒಂದು ಪಲ್ಲಟದ ಕಾಲಘಟ್ಟವೆಂದು ಗುರುತಿಸಬೇಕಾಗುತ್ತದೆ. ಹಾಗೇ ಇದು ನಮ್ಮ ರಾಷ್ಟ್ರಜೀವನದ ದಿಕ್ಕನ್ನು ನಿರ್ಣಾಯಕವಾಗಿ ಬದಲಿಸಬಲ್ಲದೇ ಮತ್ತು ಬದಲಿಸುವುದಾರೆ ಎತ್ತ ಮತ್ತು ಅದು ಸರಿಯಾದ ದಿಕ್ಕೇ? ಹಾಗಿಲ್ಲದಿದ್ದರೆ ಅದರ ದಿಕ್ಕು ಬದಲಿಸುವ ಮಾರ್ಗವಾದರೂ ಯಾವುದು? ಇತ್ಯಾದಿ ಪ್ರಶ್ನೆಗಳನ್ನೂ ನಾವು ಎದುರಿಸಬೇಕಾಗುತ್ತದೆ.

ನನಗೆ ಈ ಎಲ್ಲ ಬೆಳವಣಿಗೆಗಳ ಮಧ್ಯೆ ಎದ್ದು ಕಾಣುವ ಮುಖ್ಯ ಬದಲಾವಣೆ ಎಂದರೆ, ನಾನು ಮೇಲೆ ಹೆಸರಿಸಿದ ರಾಷ್ಟ್ರದ ಮೂರು ಮುಖ್ಯ ಅಧಿಕಾರ ಸ್ಥಾನಗಳಲ್ಲಿ ಕೂತಿರುವವರಲ್ಲಿ ಕನಿಷ್ಟ ಇಬ್ಬರು, ಈ ರಾಷ್ಟ್ರದ ನಿರ್ಮಾಣಕ್ಕೆ ಕಾರಣವೆಂದು ಭಾವಿಸಿ ಈಗಲೂ ರಾಷ್ಟ್ರಪಿತರೆಂದು ಕರೆಯುವ ಮಹಾತ್ಮ ಗಾಂಧಿಯವರ ಕೊಲೆಗೆ ಪೂರಕವಾದ ಮತೀಯ ವಾತಾವರಣ ನಿರ್ಮಿಸಿದ್ದ ಸಂಘಟನೆಯ ಹಿನ್ನೆಲೆಯಿಂದ ಬಂದವರು ಎಂಬುದು. ಇನ್ನೂ ಮುಖ್ಯವೆಂದರೆ, ಇವರು ಆ ಕೊಲೆಯ ಪಿತೂರಿಗಾರರಲ್ಲಿ ಒಬ್ಬರಾಗಿ ನ್ಯಾಯಾಂಗ ವಿಚಾರಣೆಯಲ್ಲಿ ತಾಂತ್ರಿಕ ಕಾರಣಗಳಿಂದ ಬಚಾವಾದ ವ್ಯಕ್ತಿಯೊಬ್ಬನನ್ನು ಈಗಲೂ ತನ್ನ ಆದರ್ಶ ನಾಯಕನೆಂದು ಆರಾಧಿಸುತ್ತಿರುವವರು ಎಂಬುದು

ನಿಜ, ಈಗ ಇವರು ಮತ್ತು ಇವರ ಪರಿವಾರದವರು ಔಪಚಾರಿಕವಾಗಿ ಗಾಂಧಿಯ ಹೆಸರು ಹೇಳುವರು ಮತ್ತು ಅವರ ಮೂರ್ತಿಗೆ ಗೌರವ ನಮನ ಸಲ್ಲಿಸುವರು. ಆದರೆ ಅವರಿಗೆ ಹಾಗೆ ಸಲ್ಲಿಸದೆ ವಿಧಿಯಿಲ್ಲ. ಏಕೆಂದರೆ ರಾಷ್ಟ್ರ ಇನ್ನೂ ಗಾಂಧಿಯನ್ನು ರಾಷ್ಟ್ರಪಿತನನ್ನಾಗಿ ನಿರಾಕರಿಸುವ ಹಂತ ತಲುಪಿಲ್ಲ. ಅವರ ಬಗ್ಗೆ ಇನ್ನೂ ಪ್ರೀತಿ-ಅಭಿಮಾನವನ್ನು ಉಳಿಸಿಕೊಂಡಿದೆ ಮತ್ತು ಜನಸಾಮಾನ್ಯರ ದೊಡ್ಡ ಸಮೂಹಗಳಲ್ಲಿ ಗಾಂಧಿ ಸುಪ್ತವಾಗಿಯಾದರೂ ಇನ್ನೂ ಜೀವಂತವಾಗಿದ್ದಾರೆ ಎಂಬುದು ಅವರಿಗೆ ಗೊತ್ತು.

ಆದರೆ ಇವರ ಆಡಳಿತದಲ್ಲಿ ತೆರೆಯ ಮುಂದೆಯೂ, ಹಿಂದೆಯ ನಡೆದಿರುವ ಗಾಂಧಿ ಮೌಲ್ಯಗಳ ದಮನ ರಾಷ್ಟ್ರಜೀವನದಲ್ಲಿ ವ್ಯಾಪಕವಾ ನಡೆದಿರುವ ವಿವಿಧ ತೆರನ ಕೋಮು ಹಿಂಸಾಚಾರ ಮತ್ತು ಜಾ ದೌರ್ಜನ್ಯಗಳು ಹಾಗೂ ಅವನ್ನು ಔಪಚಾರಿಕವಾಗಿ ಮಾತ್ರ ಖಂಡಿಸಿ, ಅ ಮುಂದುವರೆಯುವಂತೆ ಅವಕ್ಕೆ ಸಹ–ಸಂಘಟನೆಗಳ ಮೂಲಕ ಪರೋ ಕುಮ್ಮಕ್ಕನ್ನು ನೀಡುವಂತಹ ರಾಜಕಾರಣ ಮಾಡುತ್ತಿರುವುದನ್ನು ನಾ ವಿಷಾದದಿಂದ ನೋಡುತ್ತಿದ್ದೇವೆ. ಇದರ ಜೊತೆಗೇ, ಮತವನ ಧರ್ಮವೆಂದು ನಿರೂಪಿಸಿ, ಅದನ್ನು ಮಧ್ಯಕಾಲೀನ ಸ್ಥಗಿತ ರೂಪದ ಒಂದು ವರ್ತಮಾನ ಜೀವನ ಕ್ರಮವಾಗಿ ಎಲ್ಲರ ಮೇಲೆ ಹೇರುವ ಗಂಭೀ ಪ್ರಯತ್ನಗಳು ನಡೆದಿವೆ. ಇದರ ಪರಿಣಾಮವಾಗಿಯೇ ದಲಿತರ ಮಹಿಳೆಯರು ಮತ್ತು ಅನ್ಯಧರ್ಮೀಯರ ಮೇಲೆ ಆಕ್ರಮಣಗಳು ಹೆಚ್ಚುತ್ತಿ ಇತ್ತೀಚಿನ ಇನ್ನೊಂದು ಅಪಾಯಕಾರಿ ಬೆಳವಣಿಗೆಯೆಂದರೆ, ಈವರೆಗೆ ಅ ರಾಜಕೀಯವಾಗಿದ್ದ ಸೇನೆಯನ್ನು ರಾಜಕೀಯ ಚರ್ಚೆಗಳ ಮಧ್ಯೆ ಎಳೆ ತಂದು ಅದನ್ನು ವೈಭವೀಕರಿಸತೊಡಗಿರುವುದು. ಈ ಎಲ್ಲ ಉಪಕ್ರಮಗ ಮೂಲಕ ರಾಷ್ಟ್ರೀಯತೆಯನ್ನು ಸೇನೀಕೃತ ಮತ ರಾಜಕಾರಣದೊಂದಿ ಜೋಡಿಸಿ ಪುನರ್ವ್ಯಾಖ್ಯಾನ ಮಾಡುವ ಅನಾಹುತಕಾರಿ ಕೆ ನಡೆದಿರುವುದು. ಈ ಎಲ್ಲ ಬೆಳವಣಿಗೆಗಳಿಗೆ ಕಿರೀಟವಿಟ್ಟಂತೆ ದಾಖಲಾ ಅತಿ ಅಸಭ್ಯ ವರ್ತನೆಯೆಂದರೆ ಉತ್ತರ ಪ್ರದೇಶ ಸರ್ಕಾರ ಮದರಸಾಗಳ ಈ ವರ್ಷದ ಸ್ವಾತಂತ್ರ್ಯ ದಿನಾಚರಣೆಯನ್ನು ಚಿತ್ರೀಕರಿಸಿ ತನ್ನ ಪರಿಶೀಲನ ಸಲ್ಲಿಸಬೇಕೆಂದು ಹೊರಡಿಸಿರುವ ಸಾಹಸಗಟಾದ ಆಜ್ಞೆ. ಇದು ಈ ವರ್ಷ ಸ್ವಾತಂತ್ರ್ಯ ದಿನಾಚರಣೆಗಳ ರುಚಿಯನ್ನೇ ಕೆಡಿಸಿಬಿಟ್ಟಿದೆ.

ಈ ವಿಕ್ಷಿಪ್ತ ರಾಜಕಾರಣಕ್ಕೆ ಇಂದು ವಿರೋಧವೆಂಬು ಇಲ್ಲವಾಗಿದೆ. (ಮದರಸಾಗಳಿಗೆ ಸಂಬಂಧಿಸಿದ ವರ್ತನೆಯ ಬಗ್ಗೆ ರಾ ತೋರಿದ ಮೌನ ಪ್ರತಿಕ್ರಿಯೆ ಇದಕ್ಕೊಂದು ಇತ್ತೀಚಿನ ಉದಾಹರಣೆ.) ಇ ಎಂದರೆ ಇಲ್ಲ ಎಂದಲ್ಲ. ಒಂದು ರೂಢಿಗತ ಔಪಚಾರಿಕ ಮತ್ತು ತ ರಾಜಕೀಯ ಸ್ವಾರ್ಥ ಸಾಧನೆಗಾಗಿ ಇವರಿಗೆ ವಿರೋಧವ ವ್ಯಕ್ತಪಡಿಸುವವರು ಇದ್ದಾರೆ. ಆದರೆ ಅವರ ವಿಶ್ವಾಸಾರ್ಹತೆ ಕಚ್ಚಿಹೋಗಿದೆ. ಏಕೆಂದರೆ ಅವರಲ್ಲಿ ಒಂದು ಭಾಗ ಎಂದೂ ಗಾಂಧಿಯ ತಮ್ಮ ನಾಯಕನೆಂದು ಒಪ್ಪಿಲ್ಲ ಮತ್ತು ಉಳಿದ ಬಾಗ ಗಾಂಧಿಯನ್ನು ಕೈಬಿ

ಅವರ ಮೌಲ್ಯಗಳನ್ನು ಗಾಳಿಗೆ ತೂರಿ ಬಹಳ ವರ್ಷಗಳೇ ಆಗಿವೆ. ಹಾಗಾಗಿ ಇಂದಿನ ರಾಜಕೀಯ ಮೌಲ್ಯ ಪಲ್ಲಟವನ್ನು ಗಾಂಧಿ ಯುಗದ ಅಂತ್ಯದ ಆರಂಭ ಎಂದು ಗುರುತಿಸಬಹುದೇ? ಎಂಬುದು ನಾನು ಈ ಹಿಂದೆ ಮುಖ್ಯವೆಂದು ಉಲ್ಲೇಖಿಸಿದ ಚರ್ಚೆಯ ವಿಷಯವಾಗಬೇಕಾಗಿದೆ. ಈ ಚರ್ಚೆ ಮಾತ್ರ ಇಂದಿನ ರಾಜಕೀಯ ಪಲ್ಲಟದ ಹಿಂದಿನ ರಾಜಕೀಯ ಚಲನಶೀಲತೆಯನ್ನು ಅರ್ಥ ಮಾಡಿಕೊಳ್ಳಲು ಮತ್ತು ಈ ಪಲ್ಲಟ ಸೂಚಿಸುವ ಭೀಕರ ಅಪಾಯಗಳ ಪರಿಣಾಮಗಳನ್ನು ಎದುರಿಸಲು ಸಾಧ್ಯವಾಗಬಹುದೆಂಬುದು ನನ್ನ ಅಭಿಪ್ರಾಯ.

ಈ ಚರ್ಚೆಯನ್ನು ಆರಂಭಿಸಲು ಬೇಕಾದ ಸೂಚನೆಗಳನ್ನಷ್ಟೇ ನೀಡಿ ನಾನು ಈ ಚರ್ಚೆ ಸಾರ್ವಜನಿಕವಾಗಿ ಮುಂದುವರೆಯಲು ಬಿಟ್ಟುಬಿಡುತ್ತೇನೆ. ಈ ಚರ್ಚೆಗಾಗಿ ನಾನು ಎತ್ತುವ ಮೂಲ ಪ್ರಶ್ನೆ ಎಂದರೆ, ಮೊದಲಾಗಿ ನಮ್ಮ ರಾಷ್ಟ್ರಜೀವನದಲ್ಲಿ ಗಾಂಧಿ ವಾರಸುದಾರಿಕೆ ಎಂಬುದು ನಿಜವಾಗಿ ಗಟ್ಟಿಯಾಗಿ ಬೇರೂರಿತ್ತೇ? ಬೇರೂರಲು ಬಿಡದೆ ತಡೆದವರಾರು? ಇದಕ್ಕೇ ಸಂಬಂಧಿಸಿದ ಈ ಕೆಲವು ಉಪಪ್ರಶ್ನೆಗಳು ಹೀಗಿವೆ : ಜಿನ್ನಾರೇ ಈ ದೇಶದ ಪ್ರಧಾನ ಮಂತ್ರಿಯಾಗಲಿ ಎಂಬ ಗಾಂಧಿ ಸಲಹೆಯಾಗಲೀ, ರಾಷ್ಟ್ರ ವಿಭಜನೆಯ ಚರ್ಚೆ ಮುಗಿಲುಮುಟ್ಟಿ ಕೋಮು ಹಿಂಸೆ ಶುರುವಾಗಿರುವ ಸಂದರ್ಭದಲ್ಲಿ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಒತ್ತಾಯಿಸದೆ ಇನ್ನೂ ಒಂದೆರಡು ವರ್ಷ ಗಾಂಧಿ ಮಾರ್ಗದರ್ಶನದಲ್ಲೇ ರಚನಾತ್ಮಕ ಚಳುವಳಿ ಕೈಗೊಂಡು ದೇಶವನ್ನು ಸ್ವಾತಂತ್ರ್ಯಕ್ಕೆ ಸಜ್ಜುಗೊಳಿಸೋಣ ಎಂಬ ಕಾಂಗ್ರೆಸ್ ಸಮಾಜವಾದಿಗಳ ಸಲಹೆ ಪರಿಗಣನೆಗೇ ಬಾರದಂತಹ ಮತ್ತು ಆ ಮೂಲಕ ಗಾಂಧಿ ಹತ್ಯೆಯಾಗುವಂತಹ ರಾಜಕೀಯ ಪರಿಸ್ಥಿತಿ ನಿರ್ಮಾಣವಾಗಲು ಕಾರಣರಾದವರು ಯಾರು? ಏಕೆ? ಈ ರಾಜಕೀಯ ಅಲ್ಲೋಲಕಲ್ಲೋಲಕ್ಕೂ ಗಾಂಧಿ ವಾರಸುದಾರಿಕೆಯ ನಿಜ ಪಠ್ಯವಾದ 'ಹಿಂದ್ ಸ್ವರಾಜ್' ಹೇಳಹೆಸರಿಲ್ಲದೆ ಕಣ್ಮರೆಯಾದುದಕ್ಕೂ ಏನಾದರೂ ಸಂಬಂಧವಿದೆಯೇ?

ಈ ಪ್ರಶ್ನೆಗಳಿಗೆ ವಸ್ತುನಿಷ್ಠ ಉತ್ತರ ಹುಡುಕುವ ಪ್ರಕ್ರಿಯೆಯಲ್ಲೇ ಗಾಂಧಿ ವಾರಸುದಾರಿಕೆ ಎಂಬುದು ಆರಂಭದಿಂದಲೇ ಹೇಗೆ ದುರ್ಬಲಗೊಳ್ಳುತ್ತಾ, ವ್ಯಂಗ್ಯಕ್ಕೊಳಪಡುತ್ತಾ, ಕ್ರಮೇಣ ಹಿಂದಕ್ಕೆ ಸರಿಯುತ್ತಾ ಹೋಯಿತು ಎಂಬುದರ ಕಥೆಯೂ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಆ ಕಥೆಯೊಂದಿಗೇ ಸ್ವಾತಂತ್ರ್ಯೋತ್ತರ ಭಾರತದ ರಾಜಕಾರಣದಲ್ಲಿ ಭ್ರಷ್ಟಾಚಾರ,

ಸ್ವಜನ ಪಕ್ಷಪಾತ, ಕುಟುಂಬ ರಾಜಕಾರಣ ಮತ್ತು ಮುಸ್ಲಿಂ-ಹಿಂದು
ಎರಡೂ ತೆರನ ಮೃದು ಕೋಮುವಾದಿ ರಾಜಕಾರಣ ಮತ್ತು ನಂಬಿದವ
ಕತ್ತು ಕುಯ್ಯುವಂತಹ ಮೋಸದ ಧರ್ಮನಿರಪೇಕ್ಷತೆಯ ಹಾಗು
ಇವೆಲ್ಲವುಗಳ ಮಧ್ಯೆ ಸಂಸತ್ತಿನ ಒಪ್ಪಿಗೆಯೇ ಇಲ್ಲದೆ ನಮ್ಮ ಆರ್ಥಿ
ನೀತಿಯನ್ನೇ ತಲೆಕೆಳಗು ಮಾಡಿದ ಉಪಕಥೆಗಳ ಇತಿಹಾಸವು
ಬಿಚ್ಚಿಕೊಳ್ಳುತ್ತಾ ಬಂದಿದೆ. ಇವುಗಳಲ್ಲಿ ಗಣ್ಯಸಮಾಜದ ಅಮಾಯಕನಂ
ಕಾಣುವ ಖಾದಿದಾರಿಯೊಬ್ಬರು ಮಂತ್ರಿಮಂಡಲ ಸೇರಲು ಸಂಸತ್ತನ
ಪ್ರವೇಶಿಸಿದ್ದೇ ತನ್ನ ನಿವಾಸತ್ವದ ಬಗ್ಗೆ ಅಪ್ಪಟ ಸುಳ್ಳು ಅಫಿಡವಿಟ್ ಸಲ್ಲಿ
ಸಂವಿಧಾನಕ್ಕೇ ಟೋಪಿ ಹಾಕುವ ಮೂಲಕ ಮತ್ತು ಆ ಟೋಪಿಗೆ ನಮ
ಸರ್ವೋಚ್ಚ ನ್ಯಾಯಾಲಯದ ಮಾನ್ಯತೆಯೂ ಸಿಕ್ಕಿಬಿಟ್ಟಿತು ಎಂಬ-ನಮ
ರಾಜಕೀಯ ಮುತ್ಸದ್ದಿಗಳೂ ಸೇರಿದಂತೆ-ಯಾರೂ ಅಷ್ಟು ಗಂಭೀರವಾ
ಪರಿಗಣಿಸದ ನಮ್ಮ ನೆತ್ತಿಯ ಮೇಲಿನ ಅನೈತಿಕತೆಯ ದುರಂತ ಕಥೆಯು
ಸೇರಿದೆ. ಈ ಕಥೆ-ಉಪಕಥೆಗಳ ನಡುವೆ ಈ ಬೆಳವಣಿಗೆಗಳಿಗೆ ತಮ
ಮಿತಿಗಳಲ್ಲೇ ಪ್ರತಿರೋಧ ಒಡ್ಡಿದ ವಿವಿಧ ತೆರನ ಗಾಂಧಿವಾ
ವಾರಸುದಾರಿಕೆಯ ಸಣ್ಣಪುಟ್ಟ ಧಾರೆಗಳ ಉಪಕಥೆಗಳೂ ಇವೆ. ಆದ
ಅವುಗಳ ಪರಿಣಾಮ ಕೇವಲ ಆನುಷಂಗಿಕ ಅಥವಾ ಈ ಕಥೆ-ಉಪಕಥೆಗ
ಲೇಖಕರು ತಮ್ಮ ಅಸ್ಥಿರ ವರ್ತನೆಗಳ ಮೂಲಕ ಅದನ್ನು ಆನುಷಂಗಿ
ಮಾಡಿದರು.

ಇದು ಕಳೆದ 70 ವರ್ಷಗಳಲ್ಲಿ ಗಾಂಧಿ ಮತ್ತು ಅವರ ಸಹಚರರ
ಕಳೆದುಹೋಗುತ್ತಾ ಬಂದ ದೊಡ್ಡ ದುರಂತ ಕಥೆ. ಹಾಗೇ ಆ ಕಳೆ
ಹೋದ ಜಾಗದಲ್ಲಿ ಸಹಜವಾಗಿಯೇ, ಗಾಂಧಿ ಮೌಲ್ಯಗಳ ಬಗ್ಗೆ ಗಂಭೀ
ತಾತ್ವಿಕ ಆಕ್ಷೇಪಣೆಗಳ ಇತಿಹಾಸವೇ ಇರುವ ಶಕ್ತಿಗಳು ಬಂದು ಕೂ
ಕಥೆಯೂ ಹೆಣೆದುಕೊಂಡಿದೆ. ಹಾಗಾಗಿ ನಾವು ಇಂದು ಗಾಂಧಿ ಯುಗ
ಅಂತ್ಯ ಆರಂಭವಾಗಿದೆಯೇ ಅಥವಾ ಗಾಂಧಿ ವಾರಸುದಾರಿ
ಮುಗಿಯುತ್ತಾ ಬಂದಿದೆಯೇ ಎಂಬ ಪ್ರಶ್ನೆ ಕೇಳಿಕೊಂಡಾಗ ಈ ಮೇಲಿ
ಕತೆ-ಉಪಕತೆಗಳನ್ನೂ ಮತ್ತು ಅವುಗಳೊಂದಿಗೆ ಹೆಣೆದುಕೊಂಡ ಬಂ
ಪ್ರತಿ ರಾಜಕಾರಣ ನಿರ್ಮಾಣದ ಈ ಕಥೆಯನ್ನೂ ವಿವರವಾ
ಪರಿಶೀಲಿಸಬೇಕಾಗುತ್ತದೆ. ಅಂತಹ ಪರಿಶೀಲನೆಯ ಪರಿಪ್ರೇಕ್ಷ್ಯದ
ಕೇಳಬೇಕಾದ ಮತ್ತು ಕೇಳಿಕೊಳ್ಳಬೇಕಾದ ಎಲ್ಲ ಪ್ರಶ್ನೆಗಳನ್ನು ಕೇಳ

ಕೇಳಿಕೊಳ್ಳದೆ, ಇಂದಿನ ರಾಜಕೀಯ ಪರಿದೃಶ್ಯದ ಒಂದು ಬದಿಯಲ್ಲಿ ನಿಂತು ಇನ್ನೊಂದು ಬದಿಯ ರಾಜಕಾರಣದಕಥೆಯ ಚರಿತ್ರೆಯನ್ನೋ ಅದರ ನಾಯಕರನ್ನೋ ಖಂಡಿಸುತ್ತಲೋ, ಬಾಯಿಗೆ ಬಂದಂತೆ ಬೈಯುತ್ತಾ ಹೋಗುವುದು ಕೆಲ ಸಮುದಾಯಗಳಲ್ಲಿ ಶವಸಂಸ್ಕಾರದ ಹೊತ್ತಲ್ಲಿ ನಡೆಯುವ ಬಾಯಿ ಬಾಯಿ ಬಡಿದುಕೊಳ್ಳುವ · ಕ್ರಿಯಾಚರಣೆಯನ್ನು ನೆನಪಿಸುತ್ತದೆ ಅಷ್ಟೆ. ಇಂತಹವರು ಗಾಂಧಿ ವಾರಸುದಾರಿಕೆಯ ಶವಸಂಸ್ಕಾರವನ್ನು ಮಾಡುತ್ತಿಲ್ಲವಷ್ಟೆ!

ಗಾಂಧಿ ವಾರಸುದಾರಿಕೆ ಕಳೆದುಹೋಗುತ್ತಿದೆಯೆಂದು ದುಃಖಿಸುತ್ತಿರುವವರಲ್ಲಿ ನಮ್ಮ ಬಹಳಷ್ಟು ಪ್ರಗತಿಪರ ಮತ್ತು ಎಡಪಂಥೀಯ ಎಂದು ಗುರುತಿಸಲ್ಪಡುವ ಲೇಖಕ-ಬುದ್ಧಿಜೀವಿಗಳು ಸೇರಿದ್ದಾರೆ. ಆದರೆ ಇವರು ದುಃಖಿಸುತ್ತಿರುವುದು ಆ ವಾರಸುದಾರಿಕೆಯ ಅಂತ್ಯದ ಸೂಚನೆಗಳ ಬಗ್ಗೆಯೋ ಅಥವಾ ಆ ವಾರಸುದಾರಿಕೆಯ ರಾಜಕಾರಣದಿಂದಾಗಿ ತಮಗೆ ಸಿಗುತ್ತಿದ್ದ ರಾಜಸೌಲಭ್ಯಗಳು ಕಳೆದುಹೋಗುತ್ತಿರುವ ಬಗ್ಗೆಯೋ ಎಂದು ಅನುಮಾನಪಡುವಂತಾಗಿದೆ. ಏಕೆಂದರೆ, ಇವರು ಇಷ್ಟು ವರ್ಷ ಮಾಡಿದ್ದಾದರೂ ಏನು? ಭ್ರಷ್ಟಗೊಳ್ಳುತ್ತಿದ್ದ ತಥಾಕಥಿತ ಗಾಂಧಿ ವಾರಸುದಾರಿಕೆಯ ಕೃಪಾಶ್ರಯದ ಎಲ್ಲ ಸುಖ-ಸೌಲಭ್ಯಗಳನ್ನು ಬಳಸಿಕೊಳ್ಳುತ್ತಾ ಹೋದದ್ದು. ಹಾಗೆ ಬಳಸಿಕೊಳ್ಳುತ್ತಾವ, ಗಾಂಧಿ ಬಹು ಸಂಕೀರ್ಣವಾಗಿ ನಿರೂಪಿಸಿದ್ದ 'ಸ್ವ'ದ ಬೇರುಗಳ ಆಳಗಳಿಗೆ ಹೊಗದೆ ಅದನ್ನು ಸಂಪ್ರದಾಯವಾದಿಯೆಂದೋ ಸನಾತನವಾದಿಯೆಂದೋ- ಇವುಗಳ ನಿಜವಾದ ಅರ್ಥವನ್ನು ಗ್ರಹಿಸಲಾಗದ ಕಲಿತ 'ಪ್ರಗತಿಪರತೆ'ಯ ಮತ್ತಿನಲ್ಲಿ-ಅದನ್ನು ಲೋಕಾಭಿರಾಮವಾಗಿ ತಿರಸ್ಕರಿಸಿದ್ದು. ಕಲಿತ ಪಾಶ್ಚಿಮಾತ್ಯ ಪ್ರಮೇಯಗಳನ್ನು ಸ್ವ-ರಾಜ್ಯ ಬೋಧಿಸಿದ ಗಾಂಧಿಯನ್ನು ಆಳದಲ್ಲಿ ನಂಬಿದ್ದ ಜನಸಾಮಾನ್ಯರಾರಿಗೂ ಅರ್ಥವಾಗದ ನುಡಿಗಟ್ಟಿನಲ್ಲಿ ಒಂದಾದರಮೇಲೊಂದು ಮಂಡಿಸುತ್ತಾ ಬೌದ್ಧಿಕ ಸುಖಲೋಲುಪತೆಯಲ್ಲಿ ಮುಳುಗಿ, ಜನರ ಕಣ್ಣಲ್ಲಿ 'ಪ್ರತಿಷ್ಠಿತ' ವರ್ಗವಾಗಿ ಜನದೂರವಾದ ಪಾಂಡಿತ್ಯ ವಲಯಗಳಲ್ಲಿ ಮೆರೆಯಲು ಯತ್ನಿಸಿದ್ದು. ಯಾವ ಪಶ್ಚಿಮದ ಆಧುನಿಕತೆಯ ಪ್ರಮೇಯಗಳ ವಿರುದ್ಧ ಅವುಗಳ ಅಶ್ಲೀಲ ಭೌತವಾದಿತ್ವದ ಕಾರಣದಿಂದಾಗಿ ಗಾಂಧಿ ಎಚ್ಚರಿಕೆ ನೀಡಿದ್ದರೋ ಅವೇ ಅಪ್ಪಟ ನಾಸ್ತಿಕವಾದಿ ಪ್ರಮೇಯಗಳ ಬಾಲಂಗೋಚಿಗಳನ್ನು ಹಿಡಿದು ಪುಂಖಾನುಪಂಖವಾಗಿ ನಕಲು

ಪಾಠಗಳನ್ನು, ಕೇಳಬೇಕಾದವರು ಕೇಳುತ್ತಿದ್ದಾರೋ ಇಲ್ಲವೋ ಎಂಬ ಪರಿವೆಯೂ ಇಲ್ಲದೆ, ಆಧುನಿಕ ಶ್ಲೋಕಗಳಂತೆ ಪಠಿಸುತ್ತಾ ಹೋದದ್ದು. ಈ ಅಸಂಬದ್ಧ ನಾಟಕದ ರಚನೆಯ ಹಿಂದೆ ಇದ್ದದ್ದು ಗಾಂಧಿಯ ದೇಸಿ ಬಂಡಾಯವನ್ನು ಪಶ್ಚಿಮದ ಆಧುನಿಕತೆಯ ನುಡಿಗಟ್ಟಿನಲ್ಲಿ ನಿರೂಪಿಸುವ ಸರ್ಕಾರಿ ಗಾಂಧಿವಾದದ ರಾಜಕಾರಣ. ಇವರ ಪ್ರಕಾರ ಬಂಡಾಯ ಎಂಬುದು ಪಶ್ಚಿಮದ ಆಧುನಿಕತೆಯ ಎರಕದಲ್ಲಷ್ಟೇ ಸಂಭವಿಸಬಹುದಾದ ಸಂಗತಿಯಾಗಿತ್ತು. ದೇಸಿ ಎಂದರೇ ಯಥಾಸ್ಥಿತಿ! ಇದು ಆಧುನಿಕತೆ ಎಂಬ ಶಬ್ದದ ಇವರ ಅರ್ಥಗ್ರಹಿಕೆಯ ಮಿತಿಯೂ ಆಗಿತ್ತು. ಗಾಂಧಿಯೋತ್ತರ ಭಾರತದ ಅಸಂಬದ್ಧ ದುರಂತ (ಈ ಜೋಡಿ ಶಬ್ದವನ್ನು ನಾನು ಉದ್ದೇಶಪೂರ್ವಕವಾಗಿಯೇ ಬಳಸಿದ್ದೇನೆ) ಕಥೆಯ ಕಾಲುಗಳು ಇಲ್ಲಿಯೇ ಇದ್ದಂತಿವೆ.

ಜನ ಈ ಅಸಂಬದ್ಧ ದುರಂತ ಕಥೆಯನ್ನು ಕೇಳಿ ಕೇಳಿ ಸುಸ್ತಾಗಿ ಸಹನೆಯನ್ನು ಕಳೆದುಕೊಂಡು ಬುದ್ಧಿಜೀವಿ ಎಂಬ ಶಬ್ದ ಕೇಳಿದೊಡನೆ ತಿರುಗಿಬೀಳತೊಡಗಿದಾಗ ನಮ್ಮ ಬುದ್ಧಿಜೀವಿಗಳಲ್ಲಿ ಕೆಲವರಾದರೂ ತಡವಾಗಿಯಾದರೂ ಎಚ್ಚೆತ್ತುಕೊಂಡು ಭಾರತೀಯ ತತ್ವ ಮೀಮಾಂಸೆಯ ಕಡೆ ಬಂದರೆಂಬುದು ನಿಜ. ಆದರೆ ಹಾಗೆ ಬಂದವರು ಮಾಡಿದ್ದಾದರೂ ಏನು? ಅದನ್ನು ವೈದಿಕ-ಅವೈದಿಕ, ಶಿಷ್ಟ-ಜಾನಪದವೆಂದು ಬೇಕೆಂದೇ ಒಡೆದು ಅದಕ್ಕೆ ಜಾತಿ ದ್ವೇಷಗಳ ಖಾರ ಹಚ್ಚಿ ಮತ್ತಷ್ಟು ಸುಖ ಸೌಲಭ್ಯಗಳ ಕೃಪಾಶ್ರಯಕ್ಕೆ ದಾರಿ ಮಾಡಿಕೊಳ್ಳುವ ಚಾಣಾಕ್ಷತನವನ್ನು ತೋರಿದರಷ್ಟೇ. ಅದಕ್ಕೆ ಅವರಿಗೆ ಸುಲಭವಾಗಿ ದೊರೆತದ್ದು ಅಂಬೇಡ್ಕರ್ ವಾಙ್ಮಯದ ಆಶ್ರಯ ಮತ್ತು ಅದರ ಕುರುಡು ಅನುಯಾಯಿಗಳ ಕೂಗುಮಾರಿತನದ ರಕ್ಷಣೆ. ಕನಿಷ್ಟ, ಅಂಬೇಡ್ಕರ್ ಅವರು ವಸಾಹತುಶಾಹಿ ರಾಜಕಾರಣದ ಪ್ರಭಾವದಲ್ಲಿ ಕಟ್ಟಿಕೊಂಡ ಜಾತಿಪದ್ಧತಿಯನ್ನು ಕುರಿತ ಸಂಕಥನಕ್ಕೆ ಅಂಬೇಡ್ಕರ್‌ರೇ ನಿರೂಪಿಸಿದ್ದೆಂದು ಹೇಳಲಾಗುವ ಸಂವಿಧಾನದ ಪ್ರಕಾರವೇ ಸಂಯೋಜಿಸಲ್ಪಟ್ಟಿರುವ ಸ್ವತಂತ್ರ ಭಾರತವೆಂಬ ವಾಸ್ತವದ ಸಂಕೀರ್ಣ ಅನುಭವಗಳ ಹಿನ್ನೆಲೆಯಲ್ಲಿ ಒಮ್ಮೆಯಾದರೂ ಪುನರ್‌ಭೇಟಿ ನೀಡಬೇಕೆಂದು ಇವರಾರಿಗೂ ಅನ್ನಿಸಿಲ್ಲ ಏಕೆ? ಇದು ಈ ಇಡೀ ಬೆಳವಣಿಗೆ ಹಿಂದಿನ ಬೌದ್ಧಿಕತೆಯ ಪ್ರಮಾಣಿಕತೆಯನ್ನು ಪ್ರಶ್ನಿಸಲು ನಮ್ಮನ್ನು ಪ್ರೇರೇಪಿಸಬಲ್ಲುದು. ಹಾಗಾಗಿಯೇ ಇಂತಹವರ ಕೃಪಾಛತ್ರಗಳಾಗಿರುವ

ನಮ್ಮ ಬಹಳಷ್ಟು ವಿಶ್ವವಿದ್ಯಾಲಯಗಳು ಮತ್ತು ಸಂಶೋಧನಾ-ಅಧ್ಯಯನ ಸಂಸ್ಥೆಗಳು ನಿಧಾನವಾಗಿ ಬಲಪಂಥೀಯ ಕೆಡುಕುಗಳ ಪ್ರವೇಶ ಮತ್ತು ಸ್ವಾಗತಕ್ಕೆ ಅಣಿಯಾಗತೊಡಗಿವೆ.

ಈ ಲೇಖಕ-ಬುದ್ಧಿಜೀವಿಗಳು ನಿಜವಾಗಿಯೂ ಗಾಂಧಿ ವಾರಸುದಾರಿಕೆಯಲ್ಲಿ ನಂಬಿಕೆ ಇರಿಸಿದ್ದಿದ್ದಲ್ಲಿ ಕಳೆದ ಎಪ್ಪತ್ತು ವರ್ಷಗಳಲ್ಲಿ ಮಾಡಬೇಕಿದ್ದ ಕೆಲಸವೆಂದರೆ, ಗಾಂಧಿ-ನೆಹರೂ, ಗಾಂಧಿ-ಟ್ಯಾಗೋರ್, ಗಾಂಧಿ-ಸುಭಾಷ್, ಗಾಂಧಿ-ಸಮಾಜವಾದಿಗಳು ಮತ್ತು ಗಾಂಧಿ-ಅಂಬೇಡ್ಕರ್ ಸಂವಾದಗಳನ್ನು ಬೆಳೆಸಿ ಇಂದಿಗೆ ವ್ಯಾಖ್ಯಾನ ಮಾಡ ಬೇಕಿದ್ದುದು. ಅ ಮೂಲಕ ಗಾಂಧಿ ಸಂಕಥನವನ್ನು ಪುನರ್‌ನಿರೂಪಿಸ ಬೇಕಿದ್ದುದು. ಆ ಹಿನ್ನೆಲೆಯಲ್ಲಿ ಭಾರತವೆಂಬ ರಾಷ್ಟ್ರ ಸಾಗಿರುವ ಲೌಕಿಕ ಮತ್ತು ಸಾಂಸ್ಕೃತಿಕ ಪ್ರಗತಿಯ ಹಾದಿಯ ಸ್ವರೂಪದ ನಿಷ್ಠುರ ಮೌಲ್ಯವಿಮರ್ಶೆ ನಡೆಯಬೇಕಿತ್ತು. ಅದೇ ನಿಜವಾದ ಗಾಂಧಿ ವಾರಸುದಾರಿಕೆಯ ಬೇರುಗಳನ್ನು ಗಟ್ಟಿಗೊಳಿಸುವ ಕೆಲಸವಾಗಿರುತ್ತಿತ್ತು. ಏಕೆಂದರೆ ಗಾಂಧಿ ಒಬ್ಬ ವ್ಯಕ್ತಿಯಾಗಿರಲಿಲ್ಲ. ಅವರೊಂದು ಸದಾ ಬೆಳೆಯುತ್ತಾ ಹೋಗುವ ಪ್ರಕ್ರಿಯೆಯಲ್ಲಿ ಮಾತ್ರ ಜೀವಂತವಾಗಿ ಉಳಿಯಬಲ್ಲ ಚಲನಶೀಲ ಸತ್ವವಾಗಿದ್ದರು. ಈ ಕೆಲಸವನ್ನು ಧರ್ಮಪಾಲ್, ಭಿಕು ಪಾರೇಖ್, ಸುದಿಪ್ತ ಕವಿರಾಜ್, ತ್ರಿದಿಪ್ ಸುಹೃದ್, ರಜನಿ ಭಕ್ಷಿ, ಆಶೀಶ ನಂದಿ, ಯಘಗೇಂದ್ರ ಯಾದವ್, ದೇವನೂರ ಮಹಾದೇವ ಮುಂತಾದ ಬೆರಳೆಣಿಕೆಯಷ್ಟು ಜನ ಬಿಡಿ ಬಿಡಿಯಾಗಿ ಮಾಡಿದ್ದಾರಾದರೂ, ಅದೊಂದು ಗಾಂಧಿಯೋತ್ತರ ಅಖಂಡ ಸಂಕಥನವಾಗಿ ಪ್ರಧಾನ ಧಾರೆಯ ಚರ್ಚೆಗೆ ಬರುವಂತಹ ಪ್ರಮೇಯವಾಗಿ ಅದನ್ನು ಕಟ್ಟುವ ಸಂಘಟಿತ ಪ್ರಯತ್ನವಾಗಿಲ್ಲ. ಅಂತಹ ರಾಜಕೀಯ ವಾತಾವರಣವನ್ನೂ ನಮ್ಮ ರಾಜಕಾರಣಿಗಳೂ ನಿರ್ಮಿಸಲಿಲ್ಲ ಎಂಬುದು ಬೇರೆ ವಿಚಾರ.

ಹಾಗಾಗಿಯೇ ನಾವು ನಮ್ಮ 71ನೇ ಸ್ವಾತಂತ್ರ್ಯೋತ್ಸವದ ಹೊಸ್ತಿಲಲ್ಲಿ ನಿಂತು ಗಾಂಧಿ ಪರಂಪರೆಯ ಅಂತ್ಯದ ಆರಂಭದ ತಲ್ಲಣವನ್ನು ಅನುಭವಿಸಬೇಕಾಗಿದೆ.

('ಸಂವಾದ', ಸೆಪ್ಟಂಬರ್, 2017ರ ಸಂಚಿಕೆಯಲ್ಲಿ ಪ್ರಕಟವಾದ ಲೇಖನದ ಸಂಪಾದಿತ ರೂಪ)

ಗಾಂಧಿ ಕುರಿತು ಓಷೋ : ಕೆಲವು ಆಲೋಚನೆಗಳು

(ಓಷೋ ಎಂದೇ ಜನಪ್ರಿಯರಾಗಿರುವ ಆಚಾರ್ಯ ರಜನೀಶ್ ತಮ್ಮ ಶಿಷ್ಯರನ್ನು ಉದ್ದೇಶಿಸಿ ಗಾಂಧಿ ಕುರಿತು ಮಾಡಿದ ಆಯ್ದ ಕೆಲವು ಪ್ರವಚನಗಳ ಕನ್ನಡ ಅನುವಾದ ಈಗ ಪುಸ್ತಕ ರೂಪದಲ್ಲಿ ಹೊರಬಂದಿದೆ. ಡಾ. ಟಿ.ಎನ್ ವಾಸುದೇವಮೂರ್ತಿಯವರು ಸೊಗಸಾಗಿ ಕನ್ನಡಕ್ಕೆ ತಂದಿರುವ ಈ ಪುಸ್ತಕದ ಹೆಸರು: 'ಮಹಾತ್ಮ: ಗಾಂಧೀವಾದದ ಗೊತ್ತುಗುರಿಗಳು'. ಓಷೋ ಇಂದು ಕನ್ನಡ ಓದುಗರ ಮಧ್ಯೆ ಅತ್ಯಂತ ಜನಪ್ರಿಯ ಲೇಖಕ. ಆದರೆ ಈ ಪುಸ್ತಕದಲ್ಲಿನ ಲೇಖನಗಳು ಗಾಂಧಿ ಕುರಿತು ಉದ್ದೇಶಪೂರ್ವಕವಾಗಿ ತಪ್ಪು ಅಭಿಪ್ರಾಯಗಳನ್ನು ಕಲ್ಪಿಸಲೆತ್ನಿಸುತ್ತವೆ ಎಂದು ನನಗನ್ನಿಸಿತು. ಹಾಗಾಗಿ ಈ ಬಗ್ಗೆ ನನ್ನ ಗೆಳೆಯರೇ ಆದ ಇದರ ಅನುವಾದಕ ವಾಸುದೇವಮೂರ್ತಿಯವರಿಗೆ ಪತ್ರ ಬರೆದೆ. ಹಾಗೇ ಇತ್ತೀಚೆಗೆ ಈ ಪುಸ್ತಕದ ವಿಮರ್ಶೆ 'ಪ್ರಜಾವಾಣಿ'ಯಲ್ಲಿ ಪ್ರಕಟವಾದಾಗ, ಅದಕ್ಕೊಂದು ಪ್ರತಿಕ್ರಿಯೆಯನ್ನು ಬರೆದೆ. ಎಂದಿನಂತೆ ಅದನ್ನು ಆ ಪತ್ರಿಕೆ ಪ್ರಕಟಿಸಲಿಲ್ಲ ಎಂಬುದು ಬೇರೆ ವಿಚಾರ. ಆದರೆ ಇದೆಲ್ಲ ಗಾಂಧಿ ಕುರಿತು ಆಸಕ್ತಿ-ಕುತೂಹಲ ಹೊಂದಿರುವ ಸಾರ್ವಜನಿಕರಿಗೆ ಗೊತ್ತಾಗಬೇಕು. ಆ ಕಾರಣಕ್ಕಾಗಿ ಇವೆಲ್ಲವನ್ನೂ–ವಾಸುದೇವ ಮೂರ್ತಿಯವರ ಅನುಮತಿ ಪಡೆದು–ಸಂಕಲಿಸಿ ಇಲ್ಲಿ ನೀಡುತ್ತಿರುವೆ–ಲೇ.)

ಗಾಂಧಿಯನ್ನು ಪ್ರತಿಸ್ಪರ್ಧಿ ಎಂದು ಭಾವಿಸಿದ ಓಷೋ!

(ವಾಸುದೇವಮೂರ್ತಿಯವರಿಗೆ ಬರೆದ ಪತ್ರ)

೨೨.೫.೨೦೧೭

ಪ್ರಿಯ ವಾಸುದೇವಮೂರ್ತಿಯವರಲ್ಲಿ,

ನೀವು ವಿಶ್ವಾಸಪೂರ್ವಕವಾಗಿ ಕಳಿಸಿದ ರಜನೀಶರ 'ಮಹಾತ್ಮ' ಪುಸ್ತಕ ಬೆಳಿಗ್ಗೆ ತಲುಪಿತು. ಕೂಡಲೇ ಅದನ್ನು ತೆರೆದು ಓದತೊಡಗಿದವನು ಇದೀಗ ತಾನೇ ಮುಗಿಸಿದೆ. ನಿರಾಶೆಯೂ, ಜಿಗುಪ್ಸೆಯೂ ಒಟ್ಟಿಗೇ

ಆಯಿತೆಂದು ಹೇಳದಿದ್ದರೆ ನಾನು ಅಪ್ರಮಾಣಿಕನಾದೇನು. ಓಷೋ ಬಗ್ಗೆ ನನ್ನಲ್ಲಿ ಮೆಚ್ಚುಗೆಯ ಜೊತೆಗೇ ಇದ್ದ ಅನುಮಾನಗಳು ಈ ಪುಸ್ತಕ ಓದಿದಾಗ ನಿಜವೆನ್ನಿಸಿದವು. ಮಹಮ್ಮದನ ಬಗ್ಗೆ ವಿವೇಕಾನಂದರು ಹೇಳಿರುವ, 'ಆತ ಧ್ಯಾನದ ಒಂದು ಹಂತದವರೆಗೆ ಹೋಗಿ ಸ್ಥಗಿತಗೊಂಡಾತ' ಎಂಬ ಮಾತು ನೆನಪಾಗಿ ಈತನ ಬಗ್ಗೆ 'ಧ್ಯಾನದ ಒಂದು ಹಂತದವರೆಗೆ ಹೋಗಿ ಮತ್ತನಾದವ' ಎಂದೆನ್ನಬೇಕೆನಿಸುತ್ತದೆ.

ನಾನು ಈ ಮಾತುಗಳನ್ನು ಈತ ಗಾಂಧಿಯನ್ನು ಕಟುವಾಗಿ ಟೀಕಿಸಿದ್ದಾನೆ ಎಂಬ ಕಾರಣಕ್ಕೆ ಖಂಡಿತ ಆಡುತ್ತಿಲ್ಲ. ಅದು ಘನವಾದ ಟೀಕೆಯೂ ಅಲ್ಲ, ವಿಮರ್ಶೆಯೂ ಆಗಿಲ್ಲ ಎಂಬ ಕಾರಣಕ್ಕಷ್ಟೇ ಆಡುತ್ತಿದ್ದೇನೆ. ಯಾರೊಬ್ಬರನ್ನೇ, ಅವರು ತುಂಬ ಚಿಕ್ಕವರಿರಲಿ, ದೊಡ್ಡವರಿರಲಿ, ಅರ್ಥಮಾಡಿಕೊಳ್ಳಲು ಪ್ರೀತಿ ಮತ್ತು ಸಹಾನುಭೂತಿಗಳು ಬೇಕು. ನಂತರದ ತೀರ್ಮಾನಗಳು ಏನೇ ಆಗಿರಬಹುದು, ಅದು ಬೇರೆ ವಿಷಯ. ಆದರೆ ಈ ಓಷೋ ಶೈಲಿಯೇ ಸರ್ವಜ್ಞಗರ್ವದ್ದು. ಹಾಗಾಗಿ ಆತ ವಿಮರ್ಶೆಯ ಹೆಸರಲ್ಲಿ ಮಾಡಿರುವುದೆಲ್ಲವೂ ದುರುದ್ದೇಶಪೂರಿತ ವಿಗ್ರಹ ಭಂಜನೆ ಮಾತ್ರ ಆಗಿದೆ.

ನಿಮ್ಮ ಈ ಪುಸ್ತಕದಲ್ಲಿ ಕಾಣುವ ಗಾಂಧಿ 'ವಿಮರ್ಶೆ'ಯೆಲ್ಲವೂ ಆತ ಗಾಂಧಿಯನ್ನು ಓರ್ವ ಪ್ರತಿಸ್ಪರ್ಧಿ ಎಂದೇ ಭಾವಿಸಿ ಅವರ ಮೇಲೆ ದಾಳಿ ಮಾಡುತ್ತಾ ತಾನು ಆಧುನಿಕ ಜಗತ್ತಿನ ಏಕಮೇವಾದ್ವಿತೀಯ ಗುರು ಎಂದು ಸ್ಥಾಪಿಸಿಕೊಳ್ಳುವ ಘಾತುಕತನದ ಬರವಣಿಗೆಯಂತೆಯೇ ನನಗೆ ತೋರಿದೆ. ಇಲ್ಲದಿದ್ದರೆ ಈ ಓಷೋ, ಅದು ಕಸ್ತೂರ್‌ಬಾ ಅಥವಾ ಹರಿಲಾಲ ಅಥವಾ ಸುಭಾಷ್‌ಚಂದ್ರ ಬೋಸ್ ಅಥವಾ ಪಾಕಿಸ್ತಾನದ ಮೇಲಿನ ದಾಳಿ ಅಥವಾ ರಾಷ್ಟ್ರ ವಿಭಜನೆಯ ಸಂದರ್ಭದ ಹಿಂಸಾಚಾರ ಅಥವಾ ಜಿನ್ನಾರೊಡನೆಯ ಸಂಬಂಧ, –ಹೀಗೆ ಗಾಂಧಿ ಬಗ್ಗೆ ಹೇಳುವ ಪ್ರತಿಯೊಂದು ಸಂದರ್ಭದ 'ಕಥೆ'ಯನ್ನೂ ವಿಕೃತಗೊಳಿಸಿ ಹೇಳುತ್ತಿರಲಿಲ್ಲ. ಗಾಂಧಿ ಬದುಕು ಕುರಿತಂತೆ ಸ್ವತಃ ಅವರ ಬರಹಗಳೇ ಅಲ್ಲದೆ, ಹತ್ತಾರು ಆವೃತ್ತಿಯ, ರೂಪಗಳ ಬರಹಗಳು ಇಂದು ಲಭ್ಯವಿವೆ. ಹೀಗಿರುವಾಗ ನಿಮ್ಮ ಓಷೋನ ಆವೃತ್ತಿಯನ್ನೇ ನಾವೇಕೆ ನಂಬಬೇಕು? ಅದೂ ಅನ್ಯರನ್ನು ಅರಿಯಲು ಅಗತ್ಯವಾದ ಪ್ರೀತಿ–ಸಹಾನುಭೂತಿಗಳ ಪಸೆಯೂ ಇಲ್ಲದ ಈ ಬರವಣಿಗೆಯನ್ನು?

ಈ ಓಷೋಗೆ ಇಡೀ ಗಾಂಧಿ ಬದುಕಿನಲ್ಲಿ, ಅವರು ಮಾಡಿದ ಲೈಂಗಿಕ ಪ್ರಯೋಗ ಮಾತ್ರ ಪ್ರಾಮಾಣಿಕವಾಗಿ ಕಾಣುತ್ತದೆ ಎಂದರೆ, ಈತನ ಲೋಕದೃಷ್ಟಿಯ ಸಮಗ್ರತೆಯೇ ಅನುಮಾನಾಸ್ಪದವೆನಿಸುತ್ತದೆಯಲ್ಲವೆ? ತನ್ನೆಲ್ಲ ವ್ಯಕ್ತಿತ್ವ ವಿಶ್ಲೇಷಣೆಗಳಿಗೂ ಫ್ರಾಯ್ಡ್–ಯೂಂಗ್‌ರನ್ನು ಉಲ್ಲೇಖಿಸುವ ಈತ ಆಧುನಿಕ ಮನಃಶಾಸ್ತ್ರವೇ ಮನುಷ್ಯನನ್ನು ಅರ್ಥ ಮಾಡಿಕೊಳ್ಳಲು ಇರುವ ಏಕೈಕ ಸಾಧನ ಎಂದು ನಂಬಿದ ಮೂಢನಂತೆಯೂ ನನಗೆ ಕಂಡಿದ್ದಾನೆ. ನಮ್ಮ ಕಾಲದ ಎಲ್ಲ ಗೌರವಾನ್ವಿತರನ್ನೂ ಕಳ್ಳರು, ಸುಳ್ಳರು, ಸೋಗಲಾಡಿಗಳು, ಆತ್ಮವಂಚಕರು ಎಂದು ದೂಷಿಸುವ ಈತನನ್ನೇ ಒಮ್ಮೆ ಈತನೇ ಧರ್ಮಶಾಸ್ತ್ರದಂತೆ ನಂಬಿರುವ ಈ ಆಧುನಿಕ ಮನಃಶಾಸ್ತ್ರದ ಪ್ರಮೇಯಗಳ ಅಡಿಯಲ್ಲಿ ಪರಿಶೀಲಿಸಿ/ಪರೀಕ್ಷಿಸಿ ನೋಡಿದಾಗ ದೊರೆಯುವ ತೀರ್ಮಾನಗಳೇನಿರರಬಹುದು ಎಂಬುದರ ಬಗ್ಗೆ ನನಗೆ ಕುತೂಹಲವಿದೆ. ಇನ್ನು ಈತನ ನೆಚ್ಚಿನ ರಾಜಕೀಯ ನಾಯಕರೆಂದರೆ ಇಂದಿರಾ ಗಾಂಧಿ ಎಂದರೆ, ಈತನ ರಾಜಕೀಯ ಅರಿವು ಯಾವ ಮಟ್ಟದ್ದಿರಬೇಕೆಂಬುದು ಗೊತ್ತಾಗುತ್ತದೆ.

ಈತ ಗಾಂಧಿಯನ್ನು ಹಿಟ್ಲರ್‌ಗೆ ಹೋಲಿಸಿ ಆಡಿದ ಮಾತಿಗೆ ಸಂಬಂಧಿಸಿದಂತೆ ಕೇಳಲಾದ ಪ್ರಶ್ನೆಗೆ ಈತ ನೀಡಿರುವ ಉತ್ತರದ ಅತಿ ವಿಸ್ತಾರದ ಹಿಂದೆ ಇರುವುದು ಅದರ ವಿಕ್ಷಿಪ್ತತೆಯೇ. ಸಿಕ್ಕಿಹಾಕಿಕೊಂಡ ಕಳ್ಳ ಕಥೆಗಳನ್ನು ಹೆಣೆಯುತ್ತಾ ಹೋಗುವಂತೆ ಇಲ್ಲಿ ಓಷೋ ಕಥೆಗಳನ್ನು ಹೆಣೆಯುತ್ತಾ ಹೋಗಿರುವುದನ್ನು ಕಂಡು ಒಮ್ಮೊಮ್ಮೆ ಈತನ ಬಗ್ಗೆ ಕನಿಕರವೂ ಉಂಟಾಗುತ್ತದೆ. ಈ ಬರಹದಲ್ಲಿ ಗಾಂಧಿ ಬಗ್ಗೆ ಪ್ರಯೋಗಿಸಿರುವ ಶಬ್ದಗಳನ್ನು ಓದಿದ (59–60ನೇ ಪುಟ ನೋಡಿ.) ಯಾರೂ, ಮೂಲತಃ ಓಷೋಗೆ ಗಾಂಧಿ ಬಗ್ಗೆ ಅಪಾರ ಗೌರವವಿತ್ತು ಎಂಬ ನಿಮ್ಮ 'ಅನುವಾದಕರ ಮಾತು'ಗಳಲ್ಲಿನ ಮಾತನ್ನು ಗಂಭೀರವಾಗಿ ತೆಗೆದುಕೊಳ್ಳಲಾರರು. ಕಷ್ಟದ ಪ್ರಶ್ನೆಗಳನ್ನು ಕೇಳಿದಾಗ ಮಾತ್ರ ಈ ಓಷೋ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡಂತಾಗಿ ಗಾಂಧಿ ಬಗ್ಗೆ ಅನಿವಾರ್ಯವೆಂಬಂತೆ ಒಂದೆರಡು (ಹುಸಿ) ಔದಾರ್ಯದ ಮಾತುಗಳನ್ನಾಡಿದ್ದಾನಷ್ಟೆ. ಹಾಗಾಗಿ ಇಡೀ ಪುಸ್ತಕದ ತುಂಬ ಅಪ್ರಾಮಾಣಿಕತೆ ಹಾವಿನಂತೆ ಹರಿದಾಡಿದೆ. ಗಾಂಧಿ ಬಗೆಗಿನ ಔಪಚಾರಿಕ ಪರಿಚಯದ ಹೊರತಾಗಿ ಇನ್ನೇನನ್ನೂ ಓದಿಕೊಳ್ಳದವರು ಮಾತ್ರ ಈ ಓಷೋ ಮಾತುಗಳನ್ನು ನಂಬಬಹುದಷ್ಟೆ. ಗಾಂಧಿ ಅವಹೇಳನ

ಸಮರೋಪಾದಿಯಲ್ಲಿ ನಡೆದಿರುವ ಈ ಹೊತ್ತಿನಲ್ಲಿ ಇಂತಹ ಪುಸ್ತಕಗಳು ಗಾಂಧಿ ವಿರೋಧಿಗಳ ಕೈಗೆ ದುರ್ಬಳಕೆಯ ಒಳ್ಳೆಯ ಅಸ್ತ್ರಗಳಾಗುವುದರಲ್ಲಿ ಸಂಶಯವಿಲ್ಲ.

ಒಂದು ಮಾತು: ನಿಮ್ಮ ಅನುವಾದ ಅತ್ಯುತ್ತಮವಾಗಿದೆ. ಇದು ಕನ್ನಡದಲ್ಲೇ ಬರೆದ ಪುಸ್ತಕವೆಂಬಂತೆ ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ. ಆದರೆ ಈ ಪ್ರತಿಭೆ ಇಂತಹ ವಿಕ್ಷಿಪ್ತ ಬರವಣಿಗೆಯ ಪ್ರಸಾರಕ್ಕೆ ಬಳಕೆಯಾಗಿದೆಯಲ್ಲಾ ಎಂಬ ದುಃಖವೂ ಆಗುತ್ತದೆ. ನೀವು ತಪ್ಪು ತಿಳಿಯದಿದ್ದರೆ ಒಂದು ಮಾತು: ಗಾಂಧಿಯಂತಹ ವ್ಯಕ್ತಿತ್ವ ಕುರಿತ ಪುಸ್ತಕವನ್ನು ಅನುವಾದಿಸುವ ಮುನ್ನ ಗಾಂಧಿಯನ್ನು ಆದಷ್ಟೂ ಓದಿಕೊಂಡಿರಬೇಕಾಗುತ್ತದೆ. 'ನಾನು ಅದನ್ನು ಮಾಡಿದ್ದೇನೆ' ಎಂದು ನೀವು ಹೇಳಿದರೆ ನನ್ನದೇನೂ ಉತ್ತರವಿಲ್ಲ! ಜೊತೆಗೆ, ಈ ಪುಸ್ತಕದ ಬಗ್ಗೆ ನನಗಾದ ಇನ್ನೊಂದು ಬೇಸರವೆಂದರೆ, ಇದರ ರಕ್ಷಾಪುಟದ ವಿನ್ಯಾಸ ಮತ್ತು ಶೀರ್ಷಿಕೆ. ಪುಸ್ತಕದ ಮುಖಪುಟದಲ್ಲಿ ಪ್ರಧಾನವಾಗಿರಬೇಕಾದದ್ದು ಓಷೋ ಚಿತ್ರ; ಗಾಂಧಿಯದ್ದಲ್ಲ. ಇದು ಮತ್ತು ಶೀರ್ಷಿಕೆ ಪುಸ್ತಕ ಕೊಳ್ಳುವವರನ್ನು, ಓದಬಯಸುವವರನ್ನು ದಾರಿ ತಪ್ಪಿಸುವಂತಿದೆ. ಮಾರುವಂತಿದ್ದರೆ ನೇರವಾಗಿ ಓಷೋರನ್ನು ಮಾರಿರಿ. ಗಾಂಧಿಯನ್ನಲ್ಲ; ಅದೂ ಹೀಗೆ.

ನಿಮ್ಮ ಪರಿಚಯ ನನಗೆ ಹೆಚ್ಚಿಲ್ಲ. ನೀವು ನೀಶೆಯನ್ನು ಅನುವಾದಿಸಿದಾಗಲೇ, ನೀವೊಬ್ಬ ಪ್ರಧಾನ ಲಹರಿಗೆ ಸೆಡ್ಡು ಹೊಡೆಯುವ ವಿಭಿನ್ನ ಚಿಂತನೆ, ಚಿಂತಕರ ಹಿಂದೆ ಹೊರಟ, ಗಂಭೀರವಾಗಿ ಗಮನಿಸಬೇಕಾದ ಲೇಖಕ ಎಂದುಕೊಂಡಿದ್ದೆ. ಆದರೆ ಹೀಗೆ ಗಮನಿಸಬೇಕಾಗುತ್ತದೆ ಎಂದುಕೊಂಡಿರಲಿಲ್ಲ! ಹೊಸತನದ, ವಿಭಿನ್ನ ನೋಟದ ಆಸೆ ಒಳ್ಳೆಯದೇ; ಆದರೆ ಅದು ರೋಚಕತೆಯನ್ನು ಹುಟ್ಟಿಸುವಷ್ಟಕ್ಕೇ ಸೀಮಿತವಾಗಬಾರದು. ಎಲ್ಲಿ ಉದಾತ್ತತೆಯ ಸುಳಿವಿಲ್ಲವೋ ಅಲ್ಲಿ ಸತ್ಯವಾಗಲೀ, ಸೌಂದರ್ಯವಾಗಲೀ, ಶಿವವಾಗಲೀ ಇರಲು ಸಾಧ್ಯವಿಲ್ಲ. ಈ ಪುಸ್ತಕ ಓದಿ ಮುಗಿಸಿದಾಗ ನನಗೆ ತಾಕಿ ತಲ್ಲಣ ಉಂಟು ಮಾಡಿದ ಒಂದು ಸಂಗತಿ ಎಂದರೆ : ಅನುಭಾವ ಒಳ್ಳೆಯ ರಂಗ-ನಟನೆಗೂ ಒದಗಬಲ್ಲ ಸರಕಿನ ರೂಪವನ್ನೂ ತಳೆಯಬಲ್ಲದೆಂಬುದು. ಅದು ಹುಸಿಅನುಭಾವ ಎಂಬುದು ಗೊತ್ತಾಗುವ ಹೊತ್ತಿಗೆ ಆಗಬೇಕಾದ ಅನಾಹುತಗಳೆಲ್ಲ ಆಗಿಹೋಗಿರುತ್ತದೆ.

ದಯವಿಟ್ಟು ನಾನು ಇದನ್ನೆಲ್ಲ ಗಾಂಧಿ ಕುರಿತ ನನ್ನ ಅಭಿಮಾನದಿಂದ ಬರೆದಿದ್ದೇನೆಂದು ಭಾವಿಸಬೇಡಿ. ಗಾಂಧಿ ಬಗೆಗೆ ನನ್ನದೂ ಹಲವು ತಕರಾರುಗಳಿವೆ. ಹಿಂದೂ ಮೂಲಭೂತವಾದಿಗಳು, ಅಂಬೇಡ್ಕರ್ ಮುಂತಾದವರು ಗಾಂಧಿ ವಿರುದ್ಧ ಮಾಡಿರುವ/ಮಾಡುತ್ತಿರುವ ದಾಳಿಯನ್ನು ನಾನು ಓದಿರುವೆ. ಆದರೆ ಈ ದಾಳಿಗಳ ಹಿಂದೆ ಮೌಢ್ಯ, ಪಟ್ಟಭದ್ರ ಹಿತಾಸಕ್ತಿ, ಅಸಮಗ್ರ ಗ್ರಹಿಕೆ ಮತ್ತು ಚರಿತ್ರೆಯ ಕಹಿ ನೆನಪುಗಳು ಇದ್ದವು; ಅಪ್ರಾಮಾಣಿಕತೆ ಇರಲಿಲ್ಲ.

ನೀವು ದೀಕ್ಷೆ ಪಡೆದ ಓಷೋ ಶಿಷ್ಯರು ಎಂದು ಕೇಳಿರುವೆ. ಹಾಗೆಂದೇ ಇಷ್ಟು ದೀರ್ಘವಾಗಿ ಬರೆದಿರುವೆ. ನನ್ನ ಕೆಲವು ಮಾತುಗಳಿಂದ ನಿಮಗೆ ನೋವುಂಟಾಗಿದ್ದರೆ ಅದು ಉದ್ದೇಶಪೂರ್ವಕವಲ್ಲ ಎಂದು ನೀವು ತಿಳಿದರೆ ಸಾಕು.

ವಂದನೆಗಳೊಂದಿಗೆ,

– ಡಿ.ಎಸ್. ನಾಗಭೂಷಣ

ಮಾನ್ಯ ಶ್ರೀ ನಾಗಭೂಷಣ ಅವರಿಗೆ,

'ಮಹಾತ್ಮ' ಕೃತಿಯ ಮಿತಿಗಳನ್ನು ಹಾಗೂ ದೋಷಗಳನ್ನು ವಿವರಿಸಿ ತಿಳಿಸಿಕೊಟ್ಟಿದ್ದಕ್ಕೆ ಧನ್ಯವಾದಗಳು. ನನ್ನ ಗುರು ಓಶೋ ಸಮಾಜವಾದೀ ಮೌಲ್ಯಗಳನ್ನು ಒಪ್ಪಿ ಆಲೋಚಿಸಬಲ್ಲ ಒಬ್ಬ ಚಿಂತಕನಲ್ಲ ಎಂಬುದು ನನಗೆ ಸ್ಪಷ್ಟವಾಯಿತು. ವ್ಯಕ್ತಿಯನ್ನು ಪ್ರಸ್ತಾಪಿಸದೆ ಯಾವುದೇ ವಿಚಾರವನ್ನು ಕುರಿತು ಚಿಂತಿಸುವುದು ನಿಜಕ್ಕೂ ಮಹಾ ಕಠಿಣ. ಓಶೋನಂತಹ ಗುರುವಿಗೂ ಅದು ಸಾಧ್ಯವಾಗಲಿಲ್ಲ.
ನಿಮ್ಮ ವಿಶ್ವಾಸವನ್ನು ಬಯಸುವ,

– ಟಿ.ಎನ್ ವಾಸುದೇವಮೂರ್ತಿ

ಅನಿರ್ಬಂಧಿತ ಸುಖದಾಹದ ಪ್ರತಿಪಾದಕ ಓಷೋ!

(ವಾಸುದೇವಮೂರ್ತಿಯವರ ಪತ್ರಕ್ಕೆ ಉತ್ತರ)

ಪ್ರಿಯ ಶ್ರೀ ವಾಸುದೇವಮೂರ್ತಿ ಅವರಲ್ಲಿ,

ನಿಮ್ಮ ಪ್ರತಿಕ್ರಿಯೆಗಾಗಿ ವಂದನೆಗಳು. ಯಾರಾದರೂ ಸಮಾಜವಾದಿ ವಿಚಾರಗಳನ್ನು ಒಪ್ಪಿಯೇ ಲೋಕಾಭಿವಕ್ತಿ ಮಾಡಬೇಕೆಂದು

ನಾನು ನಿರೀಕ್ಷಿಸುವವನಲ್ಲ. ಜೊತೆಗೆ, ಸಮಾಜವಾದ ಎಂಬ ಪರಿಕಲ್ಪನೆಯೇ ಬಹು ಸ್ಥೂಲವಾಗಿದ್ದು, ಅದರ ನಿರ್ದಿಷ್ಟತೆಯನ್ನು ಅದನ್ನು ಹೇಳುವ ವ್ಯಕ್ತಿಯ ಸಾರ್ವತ್ರಿಕ ಲೋಕಾಭಿವ್ಯಕ್ತಿಯ ಕ್ರಮದಲ್ಲೇ ಕಂಡುಕೊಳ್ಳಬೇಕಾಗಿದೆ ಎಂದು ನಂಬಿರುವವನು ನಾನು. ಅದೇನೇ ಇದ್ದರೂ, ಓಷೋ ಸಮಾಜವಾದ ಎಂದರೆ ಮೂಲತಃ ವೈಜ್ಞಾನಿಕ ಸಮಾಜವಾದ ಅಥವಾ ಮಾರ್ಕ್ಸ್‌ವಾದ ಎಂದೇ ನಂಬಿದಂತಿದೆ. ಗಾಂಧಿ ಸಮಾಜವಾದ ಅಥವಾ ಲೋಹಿಯಾ ಪ್ರತಿಪಾದಿಸಿದ ಅನಧಿಪತ್ಯವಾದಿ ಎಂದು ಕರೆಯಬಹುದಾದ ಸಮಾಜವಾದದ ಬಗ್ಗೆ ಆತನಿಗೆ ಯಾವುದೇ ತಿಳುವಳಿಕೆ ಇದ್ದಂತಿಲ್ಲ. ಅದರ ಯಾವುದೇ ಸಾಕ್ಷ್ಯಗಳು ಈ ಪುಸ್ತಕದಲ್ಲಿ ದೊರೆಯುವುದಿಲ್ಲ. (ಹಾಗೆ ನೋಡಿದರೆ, ಲೋಹಿಯಾ ಅವರ ವಿಚಾರಗಳನ್ನು ಸಮಾಜವಾದ ಎನ್ನುವುದಕ್ಕಿಂತ ಬೇರೆ ಹೆಸರಿನಿಂದ ಕರೆಯುವುದೇ ಸೂಕ್ತ ಎಂದು ನನಗೆ ಇತ್ತೀಚೆಗೆ ಹಲವಾರು ಬಾರಿ ಅನ್ನಿಸಿದೆ.) ಅಷ್ಟೇ ಅಲ್ಲ, ಗಾಂಧಿಯನ್ನೂ ಆತ ಸಮಗ್ರವಾಗಿ ಓದಿಕೊಂಡಿದ್ದನೇ/ಅರಿಯಲು ಪ್ರಯತ್ನಿಸಿದ್ದನೇ ಎಂಬ ಬಗ್ಗೆಯೂ ನನಗೆ ಅನುಮಾನವಿದೆ. ಜೊತೆಗೆ ಆತ ಗಾಂಧಿ ಸೇರಿದಂತೆ ಯಾರ ಬಗ್ಗೆಯಾದರೂ ಸುಳ್ಳು ಹೇಳಲು ಹಿಂಜರಿಯದವನೂ ಎನ್ನಿಸಿದೆ. ನಿಮ್ಮ ಅನುವಾದಕರ ಮಾತುಗಳ ಎರಡನೇ ಪುಟದ ಎರಡನೇ ಪ್ಯಾರಾದಲ್ಲಿನ ಆತನ ಉಲ್ಲೇಖಿತ ಮಾತುಗಳೇ ಇದನ್ನು ಶೃತಪಡಿಸುತ್ತವೆ: 'ಕೃಷ್ಣ, ಬುದ್ಧ, ಮಹಾವೀರ ಮೊದಲಾದ ಹೆಸರುಗಳನ್ನು ಬಳಸಿ ಅವರುಗಳು ಎಂದೂ ಹೇಳದಿದ್ದ ಮಾತುಗಳನ್ನೆಲ್ಲ ಅವರ ಬಾಯಲ್ಲಿ ಹೇಳಿಸಿದೆ. ಇದೆಲ್ಲ ನನಗೆ ಬೇಕಿರಲಿಲ್ಲ. ಆದರೆ ಜನ ಶಬ್ದ ಪ್ರಮಾಣವನ್ನು ನಂಬುತ್ತಾರೆ. ಹೀಗೆ ನಾನು ಯೇಸುವಿನ ಹೆಸರು ಹೇಳಿಕೊಂಡು ಅವರ ಸಮಾಜದಲ್ಲಿ; ಹಾಗೆಯೇ ಕೃಷ್ಣ, ಬುದ್ಧ, ಮಹಾವೀರರ ಹೆಸರು ಹೇಳಿಕೊಂಡು ಆಯಾ ಸಮಾಜಗಳಲ್ಲಿ ಪ್ರವೇಶ ಪಡೆದೆ. ಅವರ ಬಂದೂಕುಗಳಲ್ಲಿ ನನ್ನ ಕಾಡತೂಸುಗಳನ್ನು ತುಂಬಿ ಅವರತ್ತಲೇ ಗುರಿ ಇಟ್ಟೆ. ಗುರಿ ತಪ್ಪಲಿಲ್ಲ' ಇತ್ಯಾದಿ) ಹಾಗಾಗಿ ಪುಸ್ತಕದ ತುಂಬ ಗಾಂಧಿ ಕುರಿತ ಸುಳ್ಳು ಮತ್ತು ವಿರೋಧಾಭಾಸದ ಮಾತುಗಳೇ ತುಂಬಿದ್ದರೆ ಅದರಲ್ಲಿ ಆಶ್ಚರ್ಯವೇನಿದೆ?

ಗಾಂಧಿ ಕುರಿತ ಈತನ ಈ ಪುಸ್ತಕ ಓದಿದ ನಂತರ ಈತನ ಬಗ್ಗೆ ನನಗೆ ಅನ್ನಿಸಿದ್ದು: ಈತ ಚತುರ ಮಾತುಗಾರಿಕೆಯ ವರ ಪಡೆದಿರುವ ಮಹಾ ಘಟಿಂಗ. ಮೂಲತಃ ಚಾರ್ವಾಕ ಮನಸ್ಸು. ಈತನ ಕಾಲಕ್ಕಾಗಿಯೇ

ಜೀವಪರಿಸರಕ್ಕೆ ಸಂಬಂಧಿಸಿದ ಹಲವು ವಿಷಯಗಳು ಚರ್ಚೆಗೆ ಬಂದಿದ್ದರೂ ಅದರ ನೆದರೇ ಇಲ್ಲದಂತೆ ಈತ ತಂತ್ರಜ್ಞಾನದ ಅವಿಮರ್ಶಕ ಆರಾಧಕನಂತೆ ಮನುಷ್ಯನು ಅನಿರ್ಬಂಧಿತ ಸುಖ-ಅನುಭೋಗಗಳ ಸಹಜ ಹಕ್ಕುದಾರ ಎಂಬರ್ಥದ ಮಾತುಗಳನ್ನಾಡಿರುವುದನ್ನು ಕಂಡು ಆಶ್ಚರ್ಯವೂ, ಭೀತಿಯೂ ಆಯಿತು.

ಇರಲಿ. ನಿಮಗೆ ಬಿಡುವಾದಾಗ ಮತ್ತು ಮನಸ್ಸಾದರೆ ಗಾಂಧಿಯನ್ನು ವಿಸ್ತೃತವಾಗಿ ಓದಲು ಪ್ರಯತ್ನಿಸಿರಿ.

ವಂದನೆಗಳೊಂದಿಗೆ,

– ಡಿಎಸ್ಸೆನ್

ಏಕಪಕ್ಷೀಯವೆನ್ನಿಸುವ ಪುಸ್ತಕ ವಿಮರ್ಶೆ

(೧೧.೬. ೨೦೧೭ರ 'ಪ್ರಜಾವಾಣಿ'ಯ 'ಮುಕ್ತ ಛಂದ' ಪುರವಣಿಯಲ್ಲಿ ವಿ.ಎನ್. ಹೆಗಡೆ ಎಂಬುವವರು ಈ ಪುಸ್ತಕದ ಬಗ್ಗೆ ಬರೆದ ವಿಮರ್ಶೆಯ ಬಗ್ಗೆ ಆ ಪತ್ರಿಕೆಗೆ ಬರೆದ; ಆದರೆ ಪ್ರಕಟವಾಗದ ಒಂದು ಪ್ರತಿಕ್ರಿಯೆ)

ಮಾನ್ಯರೇ,

ಇದೇ ಜೂನ್ ೧೧ರ 'ಮುಕ್ತ ಛಂದ' ಪುರವಣಿಯಲ್ಲಿನ ಮಹಾತ್ಮ ಗಾಂಧಿ ಕುರಿತ ಓಷೋರ(ಆಚಾರ್ಯ ರಜನೀಶ) ಆಯ್ದ ವಿಚಾರಗಳ ಅನುವಾದ ಪುಸ್ತಕ 'ಮಹಾತ್ಮ: ಗಾಂಧಿವಾದದ ಗೊತ್ತು ಗುರಿಗಳು' ಕುರಿತ ವಿ.ಎನ್ ಹೆಗಡೆಯವರ ವಿಮರ್ಶೆ ಓದಿದೆ. ಈ ವಿಮರ್ಶೆ ಈ ಪುಸ್ತಕ ಗಾಂಧಿವಾದವನ್ನು ಕುರಿತ ಟೀಕೆಯೆಂದು ಹೇಳುತ್ತಲೇ ಗಾಂಧಿ ವ್ಯಕ್ತಿತ್ವದ ಬಗ್ಗೆ ಅನುಚಿತ ಪ್ರಶ್ನೆಗಳನ್ನೆತ್ತಿದೆ ಎಂದು ನನಗನ್ನಿಸಿದೆ. ಸದರಿ ಪುಸ್ತಕವನ್ನು ಸವಿಸ್ತಾರವಾಗಿ ಓದಿದವನಾಗಿ ಈ ಅನುಚಿತತೆಗಳ ಬಗ್ಗೆ ಈ ಪತ್ರ. ಬರೆಯುತ್ತಿರುವೆ.

ಹೆಗಡೆಯವರ ಈ ವಿಮರ್ಶೆ ಹೊರನೋಟಕ್ಕೆ ಸಮತುಲಿತ ವಾಗಿರುವಂತೆ ಕಂಡರೂ, ಆಂತರಿಕವಾಗಿ ಅದು ರಜನೀಶರ ಅಷ್ಟೇನೂ ನಂಬಲರ್ಹವಲ್ಲದ ಪ್ರಮಾಣಿಕತೆಯನ್ನು ನೆಚ್ಚಿಕೊಂಡ ದೌರ್ಬಲ್ಯದಿಂದ ಬಳಲಿದೆ ಎನ್ನಿಸುತ್ತದೆ. ಮಹಾತ್ಮರೆನಿಸಿಕೊಂಡ ಐತಿಹಾಸಿಕ ವ್ಯಕ್ತಿಗಳನ್ನು

ಕುರಿತ ಟೀಕೆ–ವಿಮರ್ಶೆ ಎಂದರೆ ಸಮಕಾಲೀನ ಚಿಂತಕರಲ್ಲಿ ಹುಟ್ಟುವ ವಿಶೇಷ ಕುತೂಹಲ–ಕಾವುಗಳೂ ಇಲ್ಲಿ ಕೆಲಸ ಮಾಡಿದಂತಿದೆ. ಹಾಗಾಗಿಯೇ ರಜನೀಶರದು ಗಾಂಧಿಯ ನಿಷ್ಪಕ್ಷಪಾತ ಅಥವಾ ವಸ್ತುನಿಷ್ಠ ವಿಮರ್ಶೆ ಮಾಡಬಲ್ಲ ಸಮರ್ಥ ತಾತ್ವಿಕ ವ್ಯಕ್ತಿತ್ವವೇ ಎಂಬ ಪ್ರಾಥಮಿಕ ಯೋಚನೆಯೇ ಹೆಗಡೆಯವರ ಈ ವಿಮರ್ಶೆಯಲ್ಲಿ ಕಾಣದಾಗಿದೆ. ಗಾಂಧಿ ವಿಮರ್ಶಾತೀತರೂ ಅಲ್ಲ, ರಜನೀಶರು ಸುಲಭವಾಗಿ ಉದಾಸೀನಕ್ಕೊಳಪಡಬಲ್ಲ ತಾತ್ವಿಕರೂ ಅಲ್ಲ ಎಂಬ ಅರಿವಿನಲ್ಲೇ ನಾನು ಈ ಸಾಲುಗಳನ್ನು ಬರೆಯುತ್ತಿದ್ದೇನೆ.

ಸದರಿ ಪುಸ್ತಕದಲ್ಲಿ ಗಾಂಧಿ ಮತ್ತು ಅವರ ಅನುಯಾಯಿಗಳ ಕುರಿತು ಅನೇಕ ಘಟನೆಗಳ ಉಲ್ಲೇಖವಿದೆ. ಅವೆಲ್ಲವೂ ಗಾಂಧಿ ಮತ್ತು ಅವರ ಅನುಯಾಯಿಗಳ ಬಗ್ಗೆ ಕಟು ಟೀಕೆ, ಅಪಹಾಸ್ಯ, ಗೇಲಿಗಳನ್ನು ಒಳಗೊಂಡಿವೆ. ಆದರೆ ಇವಾವುಕ್ಕೂ ಯಾವುದೇ (ದಿನಾಂಕ, ತಿಂಗಳು, ವರ್ಷ ಅಥವಾ ಆ ಘಟನೆಗಳ ನಡೆದಾಗ ಅಲ್ಲಿ ಹಾಜರಿದ್ದವರ ಹೆಸರು, ಪರಿಚಯ ಇತ್ಯಾದಿ) ಸಾಕ್ಷ್ಯಗಳಿಲ್ಲ. ಮತ್ತು ಈ ಘಟನೆಗಳಾವುವೂ ಗಾಂಧಿ ಮತ್ತು ಅವರ ಈ ಅನುಯಾಯಿಗಳಿಗೆ ಸಂಬಂಧಿಸಿದ ಯಾವ ಗ್ರಂಥದಲ್ಲೂ ಉಲ್ಲೇಖವಾಗಿಲ್ಲ. ಉದಾಹರಣೆಗೆ, ಲಾಲ್ ಬಹಾದೂರ್ ಶಾಸ್ತ್ರಿಯವರು ರಜನೀಶರ ಅಭಿಮಾನಿಯಾಗಿದ್ದರು ಮತ್ತು ಅವರು ತಮ್ಮ ಮರಣ ಕಾಲದಲ್ಲಿ ಇವರ ಪುಸ್ತಕವನ್ನು ಓದುತ್ತಿದ್ದರು ಎಂದು ನಾವು ಹೇಗೆ ಮತ್ತು ಏಕೆ ನಂಬಬೇಕು? ಹಾಗೇ ಈ ತಥಾಕಥಿತ ಘಟನೆ : ರಜನೀಶ ಬಾಲಕನಾಗಿದ್ದಾಗ ತನ್ನ ಹಳ್ಳಿಯ ಬಳಿಯ ರೈಲ್ವೇ ನಿಲ್ದಾಣದಲ್ಲಿ ಗಾಂಧಿ ಸ್ವಲ್ಪ ಕಾಲ ತಂಗುವರು ಎಂಬ ಸುದ್ದಿ ತಿಳಿದು ಅಲ್ಲಿಗೆ ಹೋಗಿದ್ದನಂತೆ. ಆದರೆ ಗಾಂಧಿಯವರ ರೈಲು ಬರುವುದು ಬಹು ತಡವಾದ್ದರಿಂದ ನಿಲ್ದಾಣದಲ್ಲಿ ಸ್ಟೇಷನ್ ಮಾಸ್ತರ್ ಮತ್ತು ತನ್ನ ಹೊರತಾಗಿ ಇನ್ನಾರೂ ಇರಲಿಲ್ಲವೆಂದು ಹೇಳುತ್ತಾ, ಆಗ ತಾನು ಕಂಡ ಗಾಂಧಿಯ 'ವೈಶ್ಯ' ವರ್ತನೆಯನ್ನು ವ್ಯಂಗ್ಯ ಶೈಲಿಯಲ್ಲಿ ವಿವರಿಸುತ್ತಾನೆ. ಆದರೆ ಗಾಂಧಿ ರೈಲು ತಡವಾಯಿತೆಂದು ಊರ ಜನವೆಲ್ಲ ಖಾಲಿಯಾಗಿದ್ದರೆಂದು ನಂಬಲು ಸಾಧ್ಯವೇ? ಅಥವಾ ಸಮಾಜವಾದಿಗಳು ಬಿರ್ಲಾರಿಂದ ಹಣ ಪಡೆಯುತ್ತಿದ್ದರು ಎಂಬ ಇವರ ಟೀಕೆಯನ್ನು? ಏನಿದಕ್ಕೆ ಆಧಾರ?

ಇನ್ನು, ಜೆಪಿಯವರ ಪತ್ನಿ ಇವರ ಅಭಿಮಾನಿಯಾಗಿದ್ದರೆ, ಜೆಪಿ ಇವರ ಭಾಷಣಗಳನ್ನು ಮರೆಯಲ್ಲಿ (ಕದ್ದು) ಕೂತು ಕೇಳುತ್ತಿದ್ದರಂತೆ! ಇನ್ನು ಗಾಂಧಿ–ವಿನೋಬಾರನ್ನು ಕುರಿತ ಇವರು ನೀಡುವ ಘಟನೆಗಳ ಉದಾಹರಣೆಗಳಂತೂ ಓಷೋ ತನ್ನ ಪ್ರವಚನಗಳ ಕೇಳುಗರ ಮನರಂಜನೆಗಾಗಿ ಕಲ್ಪಿಸಿಕೊಂಡ ಅಪ್ಪಟ ಕುಚೇಷ್ಟೆಗಳಂತೆಯೇ ಇವೆ. ಯಾರ ಬಗ್ಗೆಯೇ ಆಗಲಿ–ವಿಶೇಷವಾಗಿ ಗಾಂಧಿಯಂತಹ ವ್ಯಕ್ತಿತ್ವಗಳ ಬಗ್ಗೆ–ಮಾಡುವ ವಿಮರ್ಶೆಗೆ ವಿನೀತತೆಯಲ್ಲದಿದ್ದರೂ, ಒಂದು ಘನತೆ–ಗೌರವ ಇರಬೇಕು. ಅಪಹಾಸ್ಯ, ಗೇಲಿ, ಕುಚೇಷ್ಟೆಗಳು ವಿಮರ್ಶಕನ ಉದ್ದೇಶವನ್ನೇ ಅನುಮಾನಾಸ್ಪದಗೊಳಿಸುತ್ತವೆ. ರಜನೀಶರು ಈ ಪುಸ್ತಕದುದ್ದಕ್ಕೂ ಯುಗಪುರುಷನೆಂದು ಜಗತ್ತು ಮಾನ್ಯ ಮಾಡಿರುವ ಮಹಾತ್ಮನೊಬ್ಬನನ್ನು ಸಹಾನುಭೂತಿಯಿಂದ ಅರಿಯಲು ಯತ್ನಿಸುವ ತಾತ್ವಿಕನೊಬ್ಬನ ಯಾವ ಗುಣವನ್ನೂ ತೋರದೆ, ಸರ್ವಜ್ಞಗರ್ವ ಮೆರೆಯುವ ದುರಹಂಕಾರಿಯಂತೆ ಕಾಣುತ್ತಾರೆ. ಒಮ್ಮೊಮ್ಮೆ ಈ ಯುಗದ ಮಹಾ ದಾರ್ಶನಿಕನಾಗಬೇಕೆಂಬ ತನ್ನ ಇಚ್ಚೆಗೆ ಗಾಂಧಿ ಎಲ್ಲಿ ಪ್ರತಿಸ್ಪರ್ಧಿಯಾದರೋ ಎಂಬ ಆತಂಕವೂ ಇಲ್ಲಿ ಕೆಲಸ ಮಾಡಿದೆಯೇನೋ ಎನ್ನಿಸಿಬಿಡುತ್ತದೆ.

ಸಮಾನತೆಯ ಕಲ್ಪನೆಗೆ ಭಾರತದ ಸಮಾಜವಾದಿಗಳು ನೀಡಿದ ನವೀನ ಅರ್ಥ ವಿನ್ಯಾಸಗಳನ್ನಾಗಲೀ, ಅದಕ್ಕೆ ತಕ್ಕಂತೆ ಅವರು ಕಟ್ಟಲೆತ್ನಿಸಿದ ರಾಜಕಾರಣದ ನಕ್ಷೆಯನ್ನಾಗಲೀ ತಿಳಿಯಲು ಎಲ್ಲೂ ಯತ್ನಿಸಿದಂತೆ ತೋರದ ಸಂಪೂರ್ಣ, ಅಪ್ಪಟ ಬಂಡವಾಳಶಾಹಿಯ ಪರನಾಗಿದ್ದ ಈ ತಾತ್ವಿಕನು ಸಹಜವಾಗಿಯೇ ಆಧುನಿಕ ಸುಖ ಸವಲತ್ತುಗಳ ನಿರ್ಲಜ್ಜ ಆರಾಧಕನೂ ಆಗಿದ್ದ. (ಈ ಆರಾಧನೆ ಎಷ್ಟು ಅತಿಗೆ ಹೋಯಿತೆಂದರೆ, ಸ್ವತಃ ಇಂತಹ ಸುಖ–ಸವಲತ್ತುಗಳ ಆರಾಧಕ ದೇಶವಾದ ಅಮೆರಿಕಾದ ಸರ್ಕಾರವೇ ಈತನ್ನು ದೇಶದಿಂದ ಹೊರಕ್ಕೆ ಹಾಕಿತು.) ಇಂತಹ ವ್ಯಕ್ತಿ ಆಧುನಿಕ ನಾಗರಿಕ ಬದುಕಿನ ಮಾದರಿಗಳನ್ನು ಕಟು ವಿಮರ್ಶೆಗೆ ಒಳಪಡಿಸಿದ ಗಾಂಧಿಯಂತಹ ವ್ಯಕ್ತಿಯನ್ನು ಸಹಾನುಭೂತಿಯಿಂದ ಅರಿಯುವ ಪ್ರಯತ್ನ ಮಾಡಲಾದರೂ ಹೇಗೆ ಸಾಧ್ಯ? ಈ ಇಡೀ ಪುಸ್ತಕವನ್ನು ಓದಿದಾಗ, ತನ್ನ ವಿಮರ್ಶೆ ಎದ್ದು ಕಾಣುವಷ್ಟು ಏಕಪಕ್ಷೀಯವಾಗಿರಬಾರದೆಂದಷ್ಟೇ ಈತ ಗಾಂಧಿಯ ಬಗ್ಗೆ ಒಂದೆರಡು ಒಳ್ಳೆಯ ಮಾತುಗಳನ್ನಾಡಿದ್ದಾನೆ ಎಂದು ಅನ್ನಿಸದಿರದು. ಈ ಪುಸ್ತಕದಲ್ಲಿ

ವ್ಯಕ್ತವಾಗಿರುವ ಒಷೋನ ರಾಜಕೀಯ ನಂಬಿಕೆಗಳನ್ನು ಗಮನಿಸಿದರೆ, ಇಂದು ಈತ ಬದುಕಿದ್ದರೆ ಖಂಡಿತ ಮೋದಿ ಆಸ್ಥಾನದ ವಿದ್ವಾಂಸನಾಗಿ ಮೆರೆಯುತ್ತಿದ್ದರೆನಿಸುತ್ತದೆ.

ಗಾಂಧಿ ಮಾಡಿದ ಲೈಂಗಿಕ ಪ್ರಯೋಗವಷ್ಟೇ ಅವರ ಬದುಕಿನ ಏಕೈಕ ನಿಜ ಪ್ರಯೋಗ ಎನ್ನುವ ಈ ಓಷೋ ಬಗ್ಗೆ ಇನ್ನೇನೂ ಹೇಳಲು ಉಳಿದಿಲ್ಲ.

– ಡಿ.ಎಸ್. ನಾಗಭೂಷಣ

('ಜನಪದ ವಿಚಾರ' ಪತ್ರಿಕೆಯ ಅಕ್ಟೋಬರ್, ೨೧೦೭ರ ಸಂಚಿಕೆಯಲ್ಲಿ ಪ್ರಕಟ)

ಗಾಂಧಿ, ಧರ್ಮ, ಅಫೀಮು ಇತ್ಯಾದಿ

ಎಂದಾದರೂ ನನಗೆ ಧರ್ಮ ಮತ್ತು ನೀತಿಗಳ ನಡುವೆ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾಗಿ ಬಂದರೆ ನಾನು ನೀತಿಯನ್ನೇ ಆಯ್ದುಕೊಂಡೇನು.

– ಮಹಾತ್ಮ ಗಾಂಧಿ

ಇತ್ತೀಚೆಗೆ ನಾನು ನನ್ನ ಫೇಸ್‌ಬುಕ್‌ನಲ್ಲಿ ಹಾಕಿದ್ದ ಈ ಮೇಲಿನ ಉಲ್ಲೇಖಕ್ಕೆ ನನ್ನ ಗೆಳೆಯರೊಬ್ಬರು ಪ್ರತಿಕ್ರಿಯಿಸುತ್ತಾ, ಧರ್ಮವೆಂಬುದು ಅಫೀಮು ಎಂದು ಎಲ್ಲ ಜ್ಞಾನಿಗಳೂ ವಿದ್ವಾಂಸರು ಹೇಳಿರುವಾಗ ಗಾಂಧಿ ಧರ್ಮವನ್ನು ಆಯ್ಕೆ ಮಾಡಿಕೊಳ್ಳಲು ಸಾಧ್ಯವೇ ಎಂದು ಪ್ರಶ್ನಿಸಿ ಗಾಂಧೀಜಿಯ ಮಾತನ್ನು ಅನುಮೋದಿಸಿದ್ದಾರೆ, ಆದರೆ ಇದು ಗಾಂಧಿಯವರ ಸದರಿ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಿಕೊಂಡು ಮಾಡಿರುವ ಅನುಮೋದನೆಯಾಗಿದೆ. ಹಾಗಾಗಿ ಈ ಅನುಮೋದನೆ ಗಾಂಧಿಯನ್ನೇ ತಪ್ಪಾಗಿ ಪ್ರಸ್ತುತಪಡಿಸುವ ಅಪಾಯವನ್ನೂ ಒಳಗೊಂಡಿದೆ. ಈ ಅಪಾಯದ ಹಿಂದೆ ಇರುವುದು, ಎಲ್ಲೋ ಕೇಳಿದ ಯಾರದೋ ಮಾತನ್ನು ಸಾರ್ವತ್ರೀಕರಿಸುವ ನಮ್ಮೆಲ್ಲರಲ್ಲೂ ಕಂಡುಬರುವ ಇತ್ತೀಚಿನ ಚಾಳಿ! ಬಹು ಅಪಾಯಕಾರಿ ಚಾಳಿಯೂ ಹೌದು.

ಧರ್ಮ ಅಫೀಮು ಎಂದವನು ಕಾರ್ಲ್ ಮಾರ್ಕ್ಸ್. ಕಾರ್ಲ್ ಮಾರ್ಕ್ಸ್ ಮಾತ್ರ. ಈ ಗೆಳೆಯರು ಹೇಳುವ ಹಾಗೆ ಎಲ್ಲ ಜ್ಞಾನಿಗಳೂ, ವಿದ್ವಾಂಸರೂ ಅಲ್ಲ. ಮಾರ್ಕ್ಸ್ ಕೂಡ ಆ ಮಾತನ್ನು ಹಾಗೆ ಸಾರಾ ಸಗಟಾಗಿ ಹೇಳಿಲ್ಲ. ಈ ಸಂಬಂಧದ ಅವನ ಪೂರ್ತಿ ಮಾತು ಹೀಗಿದೆ: 'Religion is the sigh of the oppressed creature, the heart of a heartless world, and the soul of soulless conditions. It is the opium of the people.' ಇದರ ಕನ್ನಡ ಅನುವಾದ : 'ಧರ್ಮ ಅನ್ನುವುದು ದಮನಿತ ಜೀವಿಯ ನಿಟ್ಟುಸಿರು, ಹೃದಯಹೀನ ಜಗತ್ತಿನ ಹೃದಯ. ಆತ್ಮವಿಹೀನ ಪರಿಸ್ಥಿತಿಗಳ ಆತ್ಮ. ಅದು ಜನರ ಅಫೀಮು'. ಈ ಮಾತನ್ನು ಮಾರ್ಕ್ಸ್ ಆಡುವುದು, ತಾನು

ಯಾವ ವಿಚಾರಧಾರೆಯನ್ನು ತಲೆಕೆಳಗು ಮಾಡಲು ಹೊರಟಿದ್ದನೋ ಆ ಹೆಗಲ್ ಎಂಬ ತತ್ವಜ್ಞಾನಿಯ ವಿಚಾರಧಾರೆಗೆ ಟೀಕು ಬರೆಯುವ ಸಂದರ್ಭದಲ್ಲಿ. ಅಂದರೆ, ಧಾರ್ಮಿಕತೆಯೂ ಮನುಷ್ಯನ ಚರಿತ್ರೆಯನ್ನು ರೂಪಿಸುತ್ತದೆ ಎಂಬ ಹೆಗಲ್‌ನ ವಾದವನ್ನು ಅಲ್ಲಗೆಳೆಯುತ್ತಾ. ಆದರೆ ಅಲ್ಲಿ ಕೂಡ ಮಾರ್ಕ್ಸ್ ಮನುಷ್ಯನ ಜೀವನದಲ್ಲಿ ಧರ್ಮದ ಪಾತ್ರವನ್ನು ಇಡಿಯಾಗಿ ಅಲ್ಲಗಳೆಯುತ್ತಿಲ್ಲ. ಆದರೆ ಅದು ನ್ಯಾಯಕ್ಕಾಗಿ ಹೋರಾಡುತ್ತಿರುವ (ವರ್ಗ ಹೋರಾಟದಲ್ಲಿರುವ) ದಮನಿತರ ಪಾಲಿಗೆ, ಕಾಯಿಲೆಯ ಮನುಷ್ಯನಿಗೆ ಒಂದಿಷ್ಟು ತಾತ್ಕಾಲಿಕ ನೆಮ್ಮದಿ ಕೊಡುವ ಅಫೀಮಿನಂತೆ ಎನ್ನುತ್ತಾನೆ.

ಅದೇನೇ ಇರಲಿ, 'ಪ್ರಗತಿಪರತೆ'ಯ ಹೆಸರಿನಲ್ಲಿ ಧರ್ಮದ ಕಲ್ಪನೆಯನ್ನು ವಿರೋಧಿಸುವ ಜನ ಮಾರ್ಕ್ಸ್‌ನ ವಿಶ್ಲೇಷಣೆಯನ್ನು ಸಾರಾಸಗಟಾದ ಅಭಿಪ್ರಾಯದಂತೆ ಸ್ಥೂಲಗೊಳಿಸಿ ತಮ್ಮ ವಾದವನ್ನು ಮಂಡಿಸಲು ಬಳಸಿಕೊಳ್ಳುವುದು ಇತ್ತೀಚಿನ ಒಂದು ಜನಪ್ರಿಯ ಚಾಳಿಯಾಗಿಬಿಟ್ಟಿದೆ. ಆದರೆ ಗಾಂಧಿ ವಿಚಾರಧಾರೆಯ ಸಂದರ್ಭದಲ್ಲಿ ಈ ಚಾಳಿಯನ್ನು ಚಾಲೂ ಮಾಡಿದರೆ, ಅದು ಗಾಂಧಿ ವಿಚಾರಧಾರೆಗೆ ಅನ್ಯಾಯ ಮಾಡಿದಂತಾಗುತ್ತದ. ಏಕೆಂದರೆ ಗಾಂಧಿ ಧರ್ಮದ ಕಲ್ಪನೆಯ ವಿರೋಧಿಯಾಗಿರಲಿಲ್ಲ. ಗಾಂಧಿ ತಮ್ಮ ಆಯ್ಕೆಯನ್ನು ಹೇಳುವುದು, ಧರ್ಮ ಮತ್ತು ನೀತಿಗಳ ನಡುವೆ ಸಂಘರ್ಷ ಉಂಟಾಗಿ ಅವುಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುವ ಸಂದಿಗ್ಧ ಉಂಟಾದ ಸಂದರ್ಭದ ಹಿನ್ನೆಲೆಯಲ್ಲಿ ಎಂಬುದನ್ನೂ ನಾವು ಗಮನಿಸಬೇಕು. ಈ ಹೇಳಿಕೆಯ ನಿರ್ದಿಷ್ಟ ಸಂದರ್ಭ ಹೇಳುವುದಾದರೆ, ಗಾಂಧಿ ಈ ಮಾತನ್ನು ಹೇಳಿದ್ದು, ಅಸ್ಪೃಶ್ಯತೆ ಹಿಂದೂ ಧರ್ಮದ ಅವಿಭಾಜ್ಯ ಅಂಗವಾಗಿದೆ ಎಂದು ಕೆಲವು ಧಾರ್ಮಿಕ ಪಂಡಿತರೂ, ಧರ್ಮ ಗುರುಗಳೂ ಹೇಳತೊಡಗಿದಾಗ. ಗಾಂಧಿಗೆ ಅಸ್ಪೃಶ್ಯತೆಯ ಆಚರಣೆ ಒಂದು ಅನೀತಿಯಾಗಿತ್ತು. ಹಾಗಾಗಿ ಅವರು ಈ ಸಂದರ್ಭದ ಆಯ್ಕೆಯಾಗಿ ನೀತಿಯನ್ನು ಆಯ್ಕೆ ಮಾಡಿಕೊಂಡರು.

ಗಾಂಧಿಯವರ ಈ ಮಾತು ಮತ್ತು ಆಯ್ಕೆ, ನಾನೊಬ್ಬ ಸನಾತನ ಹಿಂದೂ, ಹೆಮ್ಮೆಯ ಹಿಂದೂ ಎಂದು ಹೇಳಿಕೊಳ್ಳುತ್ತಿದ್ದ ಗಾಂಧಿಯವರ ಧರ್ಮ ಚಿಂತನೆಯ ಸಂಕೀರ್ಣತೆಯ ಕಡೆ ನಮ್ಮ ಗಮನವನ್ನು ಸೆಳೆಯುವಂತಾಗಬೇಕು. ಅದೊಂದು ದೊಡ್ಡ ಚರ್ಚೆ. ಅತ್ತ ಕಡೆ ಸದ್ಯಕ್ಕೆ

ಹೋಗದೆ, ಈ ಬಗ್ಗೆ ಸಂಕ್ಷಿಪ್ತವಾಗಿ ಹೇಳುವುದಾದದರೆ, ಗಾಂಧಿಗೆ ಧರ್ಮ ಆತ್ಮಸಾಕ್ಷಿಯ ನಿಕಷದಲ್ಲಿ ಮತ್ತು ವಿಚಾರಶೀಲತೆಯ ಮಾನದಂಡದಲ್ಲಿ ತೇರ್ಗಡೆಯಾಗದ ಹೊರತು ಅದು ಧರ್ಮವೆನಿಸುತ್ತಿರಲಿಲ್ಲ. ಈ ಅರ್ಥದಲ್ಲಿ ಅವರು ಶಾಸ್ತ್ರಗ್ರಂಥಗಳ ಸಂಕೋಲೆಯಲ್ಲಿ ಸಿಕ್ಕಿಹಾಕಿಕೊಂಡು ಜಡಗೊಂಡಿದ್ದ ಹಿಂದೂ ಧರ್ಮವನ್ನು ವಿಚಾರಶೀಲತೆಯಿಂದ ಪ್ರಫುಲ್ಲಿತವಾದ ಆತ್ಮಸಾಕ್ಷಿಯ ಧರ್ಮವನ್ನಾಗಿ ಮಾಡಿ ಚೈತನ್ಯಶೀಲಗೊಳಿಸಲು, ಅದನ್ನೊಂದು ಸಮಕಾಲೀನ ನೀತಿ ಸಂಹಿತೆಯನ್ನಾಗಿ ಪರಿವರ್ತಿಸಲು, ಅದನ್ನು ಅಧ್ಯಾತ್ಮಿಕತೆಯ ಹುಸಿ ಭವ್ಯತೆಯಿಂದ ಲೌಕಿಕತೆಯ ವಾಸ್ತವಕ್ಕೆ ಇಳಿಸಲು ಜೀವನಪೂರ್ತಾ ಹೆಣಗಿದರು. ಹಾಗಾಗಿಯೇ ಅವರಿಗೆ ಪಾಕಿಸ್ತಾನಕ್ಕೆ ೫೫ ಕೋಟಿ ರೂಪಾಯಿಗಳ ಬಾಕಿಯನ್ನು ನೀಡಲು, ಅದು ಕಾಶ್ಮೀರದಲ್ಲಿ ಅತಿಕ್ರಮಣ ಮಾಡಿದೆ ಎಂಬ ಕಾರಣಕ್ಕೆ ನಿರಾಕರಿಸುವ ಮಾತು ಅಧರ್ಮ ಎನಿಸಿತು. ಹೇಗೂ ಅವರು ಅಲ್ಪಕಾಲಿಕ ಧರ್ಮವೇ ರಾಜಕಾರಣ ಮತ್ತು ದೀರ್ಘಕಾಲಿಕ ರಾಜಕಾರಣವೇ ಧರ್ಮ ಎಂದು ರಾಜಕಾರಣ ಮತ್ತು ಧರ್ಮಗಳ ಅವಿಭಾಜ್ಯ ಸಂಬಂಧವನ್ನು ಸೂತ್ರೀಕರಿಸಿ ಹೇಳಿದ್ದರಲ್ಲ?

ಇಂತಹ ಸಂಬಂಧದ (ಪರಿ)ಕಲ್ಪನೆಗಾಗಿ ಆಸ್ತಿಕ-ನಾಸ್ತಿಕರೆನ್ನದೆ ಎಲ್ಲ ತೆರೆನ ಭೌತವಾದಿ ಆಧುನಿಕರಿಂದ ಗಾಂಧಿ ಟೀಕಿಸಲ್ಪಟ್ಟರೆ, ಕರ್ಮಠ ಸಂಪ್ರದಾಯವಾದಿಗಳು ಅವರ ಕೊಲೆಗೇ ಭೂಮಿಕೆ ಸಿದ್ಧ ಮಾಡಿ ಅದರಲ್ಲಿ ಯಶಸ್ವಿಯೂ ಆದರು. ಆದರೆ ಆ ಕೊಲೆ ಇನ್ನೂ ಪೂರ್ಣವಾದಂತಿಲ್ಲ. ಹಾಗಾಗಿಯೇ ಈಗ ಎಡ-ಬಲಗಳೆನ್ನದೆ, ಆಧುನಿಕ-ಸಂಪ್ರದಾಯವಾದಿಗಳೆನ್ನದೆ ಎರಡೂ ಕಡೆಯವರಿಂದ ಗಾಂಧಿ ಇನ್ನೂ ಕೊಲ್ಲಲ್ಪಡುತ್ತಲೇ ಇದ್ದಾರೆ. ಆದರೆ ಗಾಂಧಿ ಅಷ್ಟು ಸುಲಭವಾಗಿ ಸಾಯುವಂತಹವರೇ?

ಗಾಂಧಿ ಸುಲಭ ಗ್ರಹಿಕೆಗೆ, ಹೇಳಿಕೆಗಳಿಗೆ, ತೀರ್ಮಾನಗಳಿಗೆ ಸಿಗುವಂತಹ ಸರಳ ವ್ಯಕ್ತಿತ್ವ ಅಲ್ಲ. ಹಿಂದಿಲ್ಲದೆ ಮುಂದಿಲ್ಲದೆ ಸತ್ಯ-ಅಹಿಂಸೆ ಎಂಬೆರೆಡು ಬರಡು ಶಬ್ದಗಳ ಮೂಲಕ ಗಾಂಧಿಯನ್ನು ಪರಿಚಯಿಸುವ ಇಂದಿನ ಜನಪ್ರಿಯ ಕ್ರಮ ಅವರನ್ನು ಹೆಚ್ಚೆಚ್ಚು ಅಪ್ರಸ್ತುತ ಮಾಡುವಂತಹ ಕ್ರಮವೇ ಆಗಿದೆ.

ಗಾಂಧಿ ಬದುಕಿನ ಮುಖ್ಯ ಘಟ್ಟಗಳು:

೧೮೬೯ : ಅಕ್ಟೋಬರ್ ೨ : ಗುಜರಾತ್‌ನ ಪೋರ್‌ಬಂದರಿನಲ್ಲಿ ಜನನ ತಂದೆ: ಪೋರ್‌ಬಂದರ್, ನಂತರ ರಾಜಕೋಟೆ ಸಂಸ್ಥಾನದ ದಿವಾನರಾಗಿದ್ದ ಕರಮಚಂದ ಗಾಂಧಿ ತಾಯಿ: ಪುತಳೀಬಾಯಿ

೧೮೮೩ : ಕಸ್ತೂರಬಾ ಅವರೊಂದಿಗೆ ಮದುವೆ.

೧೮೮೮ : ಮೊದಲ ಮಗ ಹರಿಲಾಲ್‌ನ ಜನನ, ಬ್ಯಾರಿಸ್ಟರ್ ಆಗಲು ವ್ಯಾಸಂಗಕ್ಕಾಗಿ ಲಂಡನ್‌ಗೆ ಸಮುದ್ರಯಾನ.

೧೮೮೮ ರಿಂದ ೧೮೯೧ : ವಿದೇಶಕ್ಕೆ ಹೋಗುವ ಮುನ್ನ ತಮ್ಮ ತಾಯಿಗೆ ನೀಡಿದ್ದ ಮದ್ಯ-ಮಾಂಸ-ಮಾನಿನಿಯರ ಸಹವಾಸ ಮಾಡುವುದಿಲ್ಲ ಎಂಬ ಮಾತನ್ನು ಉಳಿಸಿಕೊಳ್ಳಲು ತನ್ನ ವಿರುದ್ಧವೇ ನಡೆಸಿದ ಆಂತರಿಕ ಹೋರಾಟ; ಮುಖ್ಯವಾಗಿ ಲೈಂಗಿಕ ಸಂಯಮ ಮತ್ತು ಶಾಕಾಹಾರ ಪದ್ಧತಿಯ ಬಗ್ಗೆ ನಡೆಸಿದ ಪ್ರಯೋಗಗಳು. 'ಥಿಯೋಸಫಿ' ಸೇರಿದಂತೆ ಹಲವು ಧರ್ಮಗಳ ಬಗ್ಗೆ ಕುತೂಹಲ, ಚರ್ಚೆ, 'ಭಗವದ್ಗೀತೆ'ಯ ಇಂಗ್ಲಿಷ್ ಅನುವಾದದ ಅಧ್ಯಯನ.

೧೮೯೧-೯೨ : ಲಂಡನ್‌ನಿಂದ ವಾಪಸ್ ಮತ್ತು ಬೊಂಬಾಯಿ (ಈಗಿನ ಮುಂಬೈ) ಮತ್ತು ರಾಜಕೋಟೆಗಳಲ್ಲಿ ವಕೀಲಿ ವೃತ್ತಿ ನಡೆಸಲು ಮಾಡಿದ ವಿಫಲ ಪ್ರಯತ್ನ, ಎರಡನೆಯ ಮಗ ಮಣಿಲಾಲನ ಜನನ.

೧೮೯೩: ದ.ಆಫ್ರಿಕಾದಲ್ಲಿ ಗುಜರಾತಿ ಮುಸ್ಲಿಂ ವ್ಯಾಪಾರಿಯೊಬ್ಬರ ಪರವಾಗಿ

ವ್ಯಾಪಾರ ಸಂಬಂಧಿಯಾದ ಮೊಕದ್ದಮೆಗೆ ನೆರವಾಗಲು ದ. ಆಫ್ರಿಕಾಗೆ ಪ್ರಯಾಣ, ಡರ್ಬಾನ್‌ನಿಂದ ಜೊಹಾನ್ಸ್ ಬರ್ಗ್‌ವರೆಗಿನ ರೈಲು ಪ್ರಯಾಣದಲ್ಲಿ ಮೆರಿಟ್ಸ್‌ಬರ್ಗ್ ಎಂಬ ನಡು ನಿಲ್ದಾಣದಲ್ಲಿ ಅವರನ್ನು ವರ್ಣೀಯರೆಂಬ ಕಾರಣಕ್ಕೆ ಮಧ್ಯರಾತ್ರಿಯಲ್ಲಿ ಪ್ರಥಮ ದರ್ಜೆ ಡಬ್ಬಿಯಿಂದ ಹೊರದೂಡಿದ ಘಟನೆ.

೧೮೯೪ : ತಾವು ನೆರವು ನೀಡಲು ಬಂದಿದ್ದ ಮೊಕದ್ದಮೆಯ ಇತ್ಯರ್ಥದ ನಂತರ, ಸ್ಥಳೀಯ ಭಾರತೀಯರ ಆಗ್ರಹದ ಮೇರೆಗೆ ವರ್ಣ ತಾರತಮ್ಯದ ಕಾನೂನೂ ವಿರುದ್ಧ ಜನಸಂಘಟನೆಯ ಆರಂಭ, 'ನೆಟಾಲ್ ಇಂಡಿಯನ್ ಕಾಂಗ್ರೆಸ್'ನ ಸ್ಥಾಪನೆ ಹಾಗೂ ಹಲವು ಬಿಳಿಯರ ಮಧ್ಯದಿಂದಲೇ ಹಲವು ಜನ ಸಹಮನಸ್ಕರ ಗೆಳೆತನ ಸಂಪಾದನೆ, ಹಲವರಿಂದ ಗಾಂಧಿಯ ಮತಾಂತರಕ್ಕೆ (ಕ್ರೈಸ್ತ ಧರ್ಮಕ್ಕೆ) ವಿಫಲ ಪ್ರಯತ್ನ ಮತ್ತು ವಿವಿಧ ಧರ್ಮಗಳ ಗ್ರಂಥಗಳ ಅಧ್ಯಯನ.

೧೮೯೬ : ಕುಟುಂಬವನ್ನು ಕರೆತರಲು ಭಾರತಕ್ಕೆ ಪ್ರಯಾಣ, ತಿಲಕ್, ಗೋಖಲೆ ಮುಂತಾದ ಕಾಂಗ್ರೆಸ್ ನಾಯಕರ ಭೇಟಿ, ದೇಶದ ಹಲವು ಕಡೆ ದ. ಆಪ್ರಿಕಾದಲ್ಲಿನ ಭಾರತೀಯರ ವಿರುದ್ಧದ ತಾರತಮ್ಯಗಳ ವಿರುದ್ಧ ಜಾಗೃತಿ ಸಭೆಗಳ ಆಯೋಜನೆ.

೧೮೯೭ : ದ. ಆಫ್ರಿಕಾದ ಭಾರತೀಯ ಸಮುದಾಯದಿಂದ ತುರ್ತು ಕರೆಯ ಮೇರೆಗೆ ಕುಟುಂಬದೊಂದಿಗೆ ದ. ಆಫ್ರಿಕಾಗೆ ಪ್ರಯಾಣ, ಡರ್ಬಾನ್‌ನಲ್ಲಿ ಹಡಗಿನಿಂದ ಇಳಿಯುತ್ತಿದ್ದಂತೆಯೇ ಬಿಳಿಯರ ಗೂಂಡಾ ಗುಂಪೊಂದರಿಂದ ತೀವ್ರ ತೆರನ ದೈಹಿಕ ದಾಳಿ, ಮೂರನೆಯ ಮಗ ರಾಮದಾಸನ ಜನನ.

೧೮೯೮ : ತಮ್ಮ ಮನೆಯಲ್ಲೇ ಪತ್ನಿಯಿಂದ ಅಸ್ಪೃಶ್ಯತೆಯ ಆಚರಣೆ ಕಂಡು ಕ್ರೋಧ; ನಂತರ ಕ್ರೋಧದ ಬಗ್ಗೆ ಪಶ್ಚಾತ್ತಾಪ.

೧೮೯೯ : ದ.ಆಫ್ರಿಕಾದಲ್ಲಿನ ಬ್ರಿಟಿಷ್ ಪ್ರಭುತ್ವದ ವಿರುದ್ಧ ಬೋಯರ್‌ಗಳು (ಡಚ್‌ಮೂಲದ ವಲಸಿಗರು) ಆರಂಭಿಸಿದ ಯುದ್ಧದಲ್ಲಿ ಬ್ರಿಟಿಷ್ ಪ್ರಭುತ್ವದ ಪರವಾಗಿ ಶುಶ್ರೂಷಾ ದಳವೊಂದರ ಸ್ಥಾಪನೆ ಮತ್ತು ಶುಶ್ರೂಷಾ ಕಾರ್ಯ.

೧೯೦೦ : ಬಿಳಿಯ ವೈದ್ಯ ಮಿತ್ರರೊಬ್ಬರ ಬಳಿ ವೈದ್ಯಶಾಸ್ತ್ರದ, ವಿಶೇಷವಾಗಿ ಶಿಶುಜನನ ಶಾಸ್ತ್ರದ ಅಧ್ಯಯನ, ತರಬೇತಿ, ತಮ್ಮ ನಾಲ್ಕನೆಯ ಮಗ ದೇವದಾಸನ ಹೆರಿಗೆಯ ಸ್ವತಃ ನಿರ್ವಹಣೆ, ಪ್ರಕೃತಿ ಚಿಕಿತ್ಸೆಯ ಅಧ್ಯಯನ ಮತ್ತು ಆಚರಣೆ, 'ಅಪರಿಗ್ರಹ' (ಅಗತ್ಯವಿಲ್ಲದ್ದನ್ನು ತನ್ನದಲ್ಲವೆಂದು ತ್ಯಜಿಸುವ) ವ್ರತದ ಆಚರಣೆಯ ಆರಂಭ, ಭಾರತೀಯರನ್ನು ಮತದಾರರ ಪಟ್ಟಿಯಿಂದ ತೆಗೆದ ನೆಟಾಲ್ ಸರ್ಕಾರದ ಶಾಸನ ರದ್ದು.

೧೯೦೧ : ದ. ಆಫ್ರಿಕಾದಲ್ಲಿ ಸದ್ಯಕ್ಕೆ ತಮ್ಮ ಸೇವೆಯ ಅಗತ್ಯವಿಲ್ಲವೆಂದು ಕಂಡುಕೊಂಡು ಅಲ್ಲಿ ಮತ್ತೆ ತಮ್ಮ ಸೇವೆ ಅಗತ್ಯವಾದರೆ ಮತ್ತೆ ಬರುವ ಆಶ್ವಾಸನೆಯೊಂದಿಗೆ ಸಂಸಾರ ಸಮೇತ ಭಾರತಕ್ಕೆ ವಾಪಸ್ಸು.

೧೯೦೧–೦೨ : ಭಾರತದಲ್ಲಿ ಮೂರನೇ ದರ್ಜೆ ರೈಲಿನಲ್ಲಿ ವ್ಯಾಪಕ ಪ್ರವಾಸ, ಕಲ್ಕತ್ತೆಯ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಕಾರ್ಯಕರ್ತನಾಗಿ ಸೇವೆ, ದ.ಆಫ್ರಿಕಾದ ಭಾರತೀಯರ ಸ್ಥಿತಿಗತಿಗಳ ಬಗ್ಗೆ ನಿರ್ಣಯವೊಂದರ ಮಂಡನೆ, ಕಾರ್ಯಕಲಾಪಗಳ ವೀಕ್ಷಣೆ, ನಿರಾಶೆ, ಬೊಂಬಾಯಿನಲ್ಲಿ ವಕೀಲಿ ವೃತ್ತಿ ಆರಂಭ. ಮಣಿಲಾಲನ ಮಾರಣಾಂತಿಕ ಕಾಯಿಲೆಯನ್ನು ನೈಸರ್ಗಿಕ ಚಿಕಿತ್ಸೆಯ ಮೂಲಕವೇ ವಾಸಿ ಮಾಡಲು ನಡೆಸಿದ ಯಶಸ್ವಿ ' ದುಸ್ಸಾಹಸ'.

೧೯೦೨ : ಭಾರತೀಯರ ಕೋರಿಕೆಯಂತೆ, ಮತ್ತೆ ದಕ್ಷಿಣ ಆಫ್ರಿಕಾಕ್ಕೆ ಪ್ರಯಾಣ, ಭಾರತೀಯ ನಾಗರೀಕರ ಪರವಾಗಿ ಬ್ರಿಟಿಷ್ ಸರ್ಕಾರದ ಪ್ರತಿನಿಧಿಗೆ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರ ಸಲ್ಲಿಕೆ, ಟ್ರಾನ್ಸ್ವಾಲ್ ಪ್ರಾಂತ್ಯಕ್ಕೆ ಭಾರತೀಯರ ಪ್ರವೇಶದ ಮೇಲೆ ಹೇರಿದ ನಿಷೇಧದ ವಿರುದ್ಧ ಕಾನೂನು ಹೋರಾಟ, ಜೊಹಾನ್ಸ್‌ಬರ್ಗ್‌ನಲ್ಲಿ ವಕೀಲ ವೃತ್ತಿ ಆರಂಭ

೧೯೦೩ : ಹಲವು ಧಾರ್ಮಿಕ ಶ್ರದ್ಧಾಳುಗಳೊಂದಿಗೆ 'ಜಿಜ್ಞಾಸುಗಳ ಸಂಘ'ದಲ್ಲಿ ಧಾರ್ಮಿಕ ಚರ್ಚೆ, ದೀರ್ಘಕಾಲದ ಸ್ನೇಹಿತರಾಗಿ ಮಾರ್ಪಟ್ಟ ಪೊಲಾಕ್ ಮತ್ತು ಕಲ್ಲೆನ್‌ಬಾಕ್‌ರ ಪರಿಚಯ, ಎಲ್ಲ ಗೆಳೆಯರೊಂದಿಗೆ ತಮ್ಮ ಮನೆಯಲ್ಲಿ ಕೂಡು ಸಂಸಾರ

೧೯೦೪ : 'ಇಂಡಿಯನ್ ಒಪಿನಿಯನ್' ಪತ್ರಿಕೆಯ ಆರಂಭ, ಜಾನ್ ರಸ್ಕಿನ್‌ನ 'ಅಂಟು ದಿಸ್ ಲಾಸ್ಟ್' ಕೃತಿಯ ಓದು, ನಂತರದಲ್ಲೇ ವ ಸರಳ ಮತ್ತು ಶ್ರಮ ಜೀವನದ ಸಮುದಾಯಿಕ ಬದುಕಿನ ಪ್ರಯೋಗವಾಗಿ 'ಫೀನಿಕ್ಸ್' ತೋಟದ ಸ್ಥಾಪನೆ.

೧೯೦೬ : ಟ್ರಾನ್ಸ್‌ವಾಲ್‌ನಲ್ಲಿ ಎಲ್ಲ ವರ್ಣೀಯರೂ ತಮ್ಮ ಬೆರಳಚ್ಚು ಇರುವ ಗುರುತಿನ ಚೀಟಿಯನ್ನು ನೋಂದಣಿ ಮಾಡಿಸಿಕೊಳ್ಳಬೇಕೆಂಬ ಅವಮಾನಕರ ಆಜ್ಞೆಯ ವಿರುದ್ಧ ಭಾರತೀಯರ ಬೃಹತ್ ಸಭೆಯಲ್ಲಿ ಅನ್ಯಾಯವನ್ನು ದೇವರ ಸಾಕ್ಷಿಯಲ್ಲಿ ವಿರೋಧಿಸುವ ಧಾರ್ಮಿಕ ಪ್ರತಿರೋಧದ ಹೊಸ ಮಾರ್ಗದ ಪ್ರಸ್ತಾಪ, ಪತ್ನಿಯೊಂದಿಗೆ ಸಮಾಲೋಚಿಸಿ ಬ್ರಹ್ಮಚರ್ಯ ವ್ರತದ ಸಂಕಲ್ಪ ಸತ್ಯಾಗ್ರಹ ಕಲ್ಪನೆಯ ಉದಯ.

೧೯೦೭ : ಜೂನ್, ಏಸಿಯನ್ನರ ಬಲಾತ್ಕಾರದ ನೋಂದಾವಣೆ ಆಜ್ಞೆ ವಿರುದ್ಧ ಸತ್ಯಾಗ್ರಹ ಸಂಘಟನೆ.

೧೯೦೮ : ಜನವರಿ, ಸತ್ಯಾಗ್ರಹ ನಡೆಸಿದುದಕ್ಕೆ ನ್ಯಾಯಾಲಯದಲ್ಲಿ ವಿಚಾರಣೆ. ಎರಡು ತಿಂಗಳ ಸಾದಾ ಸೆರೆಮನೆವಾಸದ ಸಜಾ. ಸೆರೆಮನೆಯಲ್ಲಿ ಹೆನ್ರಿ ಡೇವಿಡ್ ಥೋರೋನ 'ನಾಗರಿಕ ಅವಿಧೇಯತೆ' ಮತ್ತು ಇತರ ಪ್ರಬಂಧಗಳ ಅಧ್ಯಯನ. ಸರ್ಕಾರದ ಕಡೆಯಿಂದ ಜನರಲ್ ಸ್ಮಟ್ಸ್ ಆಹ್ವಾನದ ಮೇರೆಗೆ ನಡೆದ ಮಾತುಕತೆ, ಮಧ್ಯಮ ಮಾರ್ಗದ ಪರಿಹಾರ ಒಪ್ಪಂದ. ಫೆಬ್ರುವರಿ, ಒಪ್ಪಂದ ವಿರೋಧಿ ಪಠಾಣರಿಂದ ದಾಳಿ, ಪ್ರಜ್ಞೆ ತಪ್ಪುವಂತಹ ಥಳಿತ, ಆಗಸ್ಟ್‌ನಲ್ಲಿ ಜ. ಸ್ಮಟ್ಸ್‌ನಿಂದ ಒಪ್ಪಂದದ ಭಂಗ, ಸತ್ಯಾಗ್ರಹ ಮತ್ತೆ ಪ್ರಾರಂಭ, ಗುರುತು ಪತ್ರಗಳ ದಹನ.

೧೯೦೯ : ಜೂನ್-ನವಂಬರ್, ಇಂಗ್ಲೆಂಡಿಗೆ ಪ್ರಯಾಣ, ಭಾರತೀಯ ವಲಸೆಗಾರರ ಪರ ಬ್ರಿಟಿಷ್ ಸರ್ಕಾರದ ನಾಯಕರೊಂದಿಗೆ ಮಾತುಕತೆ, ಸ್ತ್ರೀ ಸ್ವಾತಂತ್ರ್ಯ ಹೋರಾಟದ ಪರಿಚಯ-ಪರಿಶೀಲನೆ, ಲಂಡನ್‌ನಲ್ಲಿದ್ದ ಸಾವರ್ಕರ್ ಸೇರಿದಂತೆ ಭಾರತದ ಸ್ವಾತಂತ್ರ್ಯ ಹೋರಾಟಗಾರರೊಂದಿಗೆ ಮಾತುಕತೆ, ರಷ್ಯಾದ ಲೇಖಕ ಮತ್ತು ಚಿಂತಕ ಲಿಯೋ ಟಾಲ್ಸ್‌ಟಾಯ್‌ಗೆ ಮೊದಲ ಪತ್ರ, ವಾಪಸ್ ಪ್ರಯಾಣದ ಸಮಯದಲ್ಲಿ ಅವರ ಬಹುಮುಖ್ಯ ಕೃತಿಯೆನಿಸಿದ 'ಹಿಂದ್ ಸ್ವರಾಜ್' ಕೃತಿ ರಚನೆ

೧೯೧೦ : ಟಾಲ್‌ಸ್ಟಾಯ್‌ರೊಂದಿಗೆ ಮತ್ತಷ್ಟು ವಿಚಾರ ವಿನಿಮಯ, ಜೋಹಾನ್ಸ್ ಬರ್ಗ್ ಹತ್ತಿರ ಕಲ್ಲನ್‌ಬಾಕ್‌ರೊಂದಿಗೆ ಸತ್ಯಾಗ್ರಹ ಸಂಸ್ಕೃತಿಯ ಬದುಕಿನ ಮಾದರಿಯ ಪ್ರಯೋಗಳಿಗಾಗಿ 'ಟಾಲ್‌ಸ್ಟಾಯ್ ತೋಟ'ದ ಸ್ಥಾಪನೆ

೧೯೧೩ : ಮೇ ನಲ್ಲಿ ಕೇಪ್‌ಟೌನ್ ಕಾಲೋನಿಯ ಸರ್ವೋಚ್ಚ ನ್ಯಾಯಾಲಯ ಕ್ರೈಸ್ತ ಧರ್ಮೀಯ ಮದುವೆಯ ಹೊರತಾಗಿ ಮಿಕ್ಕೆಲ್ಲ ರೀತಿಯ ಮದುವೆಗಳನ್ನು ಅಸಿಂಧುಗೊಳಿಸುವ ತೀರ್ಪು ನೀಡಿದಾಗ ಇದರ ವಿರುದ್ಧ ಮಹಿಳಾ ಸತ್ಯಾಗ್ರಹದ ಸಂಘಟನೆ, ಇದಕ್ಕೆ ಬೆಂಬಲವಾಗಿ ಎರಡು ಸಾವಿರ ಜನ ಭಾರತೀಯ ಗಣಿ ಕೆಲಸಗಾರರ ಗುಂಪಿನೊಂದಿಗೆ ನ್ಯೂಕಾಸಲ್‌ನಿಂದ ಟ್ರಾನ್ಸ್‌ವಾಲ್ ಗಡಿ ದಾಟುವ ಕಾನೂನು ಭಂಗ ಚಳುವಳಿ, ಚಳುವಳಿಕಾರರಿಗೆ ಗಾಂಧಿ ಅಭಿಮಾನಿ ಬಿಳಿಯರಿಂದಲೇ ಆಹಾರ ಪೂರೈಕೆ, ನಾಲ್ಕು ದಿನದಲ್ಲಿ ಮೂರು ಸಲ ದಸ್ತಗಿರಿ! ಫಾಮ್‌ಫೋರ್ಡ್, ಸ್ಟಾಂಡರ್‌ಟನ್, ಟೀಕ್‌ವರ್ತ್, ದಂಡೀ, ಪೋಲ್ಕ್‌ಸ್‌ರುಸ್ಟ್, ಬ್ಲೋಂಫೊಂಟೇನ್ ಜೈಲುಗಳಲ್ಲಿ ಬಂಧನ,

ಡಿಸೆಂಬರ್, ಸೆರೆಮನೆಯಿಂದ ಬಿಡುಗಡೆ, ಒಪ್ಪಂದದ ನಿರೀಕ್ಷೆ.

೧೯೧೪ : ಜನವರಿ, ಭಾರತೀಯರ ವಿರುದ್ಧದ ತಾರತಮ್ಯ ಕಾನೂನುಗಳ ರದ್ದತಿಗಾಗಿ ಕಾನೂನು ಭಂಗ ಚಳುವಳಿಯನ್ನು ತೀವ್ರಗೊಳಿಸುವ ಅಂತಿಮ ಎಚ್ಚರಿಕೆ, ಸರ್ಕಾರದೊಂದಿಗೆ ಅಂತಿಮ ಸುತ್ತಿನ ಮಾತುಕತೆ, ಜೂನ್ ಕೊನೆಯ ಹೊತ್ತಿಗೆ ಭಾರತೀಯರ ವಿರುದ್ಧದ ಎಲ್ಲ ತಾರತಮ್ಯ ಕಾನೂನುಗಳ ರದ್ದತಿಯ ಒಪ್ಪಂದ, ಅಂತಿಮ ಜಯ, ಜ.ಸ್ಮಟ್ಸ್‌ಗೆ ಸೆರೆಮನೆವಾಸದ ಸಮಯದಲ್ಲಿ ತಾವು ತಯಾರಿಸಿದ್ದ ಒಂದು ಜೊತೆ ಚಪ್ಪಲಿಗಳ ಅರ್ಪಣೆ.

ಜುಲೈ ೧೮, ಕೊನೆಯ ಸಲ ದಕ್ಷಿಣ ಆಫ್ರಿಕಾದಿಂದ ನಿರ್ಗಮನ, ಇಂಗ್ಲೆಂಡ್‌ಗೆ ಪ್ರಯಾಣ, ಮೊದಲ ವಿಶ್ವಯುದ್ಧದಲ್ಲಿ ಬ್ರಿಟಿಷ ಸರ್ಕಾರದ ಪರವಾಗಿ ನಿಂತು ಶುಶ್ರೂಷಾ ದಳದ ಸ್ಥಾಪನೆಯ ನಿರ್ಧಾರ, ಅಹಿಂಸಾವಾದಿಯಾಗಿ ಯುದ್ಧದ ಬಗೆಗಿನ ನಿಲುವು ತಳೆದಿದ್ದಕ್ಕಾಗಿ ಟೀಕೆ, ಯುದ್ಧ ನಮ್ಮ ಮೇಲೆ ಹೇರಲ್ಪಟ್ಟಾಗ ತನ್ನನ್ನು ಕಾಪಾಡುತ್ತಿರುವ ಸರ್ಕಾರದ ಪರ ನಿಲ್ಲುವುದು ನ್ಯಾಯ

ಸಮ್ಮತವೆಂಬ ಉತ್ತರ, ಅನಾರೋಗ್ಯದ ಕಾರಣ ಭಾರತದತ್ತ ಪಯಣ.

೧೯೧೫ : ಜನವರಿ ೯, ಭಾರತದಲ್ಲಿ ಪದಾರ್ಪಣ, ಮೇನಲ್ಲಿ ಅಹಮದಾಬಾದ್ ಬಳಿ ಸತ್ಯಾಗ್ರಹ ಆಶ್ರಮದ ಸ್ಥಾಪನೆ.

ಫೆಬ್ರುವರಿ, ರವೀಂದ್ರನಾಥ ಟಾಗೋರ್‌ರ ಶಾಂತಿನಿಕೇತನಕ್ಕೆ ಭೇಟಿ

ಮೇ ೨೦, ಅಹಮದಾಬಾದನಲ್ಲಿ ಸತ್ಯಾಗ್ರಹ ಆಶ್ರಮದ ಸ್ಥಾಪನೆ

ಸೆಪ್ಟ. ೧೧, ಸತ್ಯಾಗ್ರಹ ಆಶ್ರಮಕ್ಕೆ ಅಸ್ಪೃಶ್ಯ ಕುಟುಂಬವೊಂದರ ಸೇರ್ಪಡೆ.

೧೯೧೬ : ಫೆಬ್ರು. ೬, ಬನಾರಸ್ ವಿಶ್ವವಿದ್ಯಾಲಯದ ಉದ್ಘಾಟನಾ ಭಾಷಣ, ಆತಿಥೇಯರಿಗೆ ಪೇಚು.

ಡಿಸೆಂ., ಲಕ್ನೋ ಕಾಂಗ್ರೆಸ್ ಅಧಿವೇಶನದಲ್ಲಿ ಮೊದಲ ಬಾರಿಗೆ ಜವಾಹರಲಾಲ್ ನೆಹರೂ ಭೇಟಿ.

೧೯೧೭ : ಏಪ್ರಿಲ್ ೧೦, ನೀಲಿ ಬೆಳೆಗಾರರ ಸಮಸ್ಯೆಯ ಆಲಿಕೆಗಾಗಿ ಬಿಹಾರಕ್ಕೆ ಭೇಟಿ.

ಚಂಪಾರಣ್ಯ ಸತ್ಯಾಗ್ರಹದ ಆರಂಭ, ದಸ್ತಗಿರಿ.

ಜೂನ್, ಸಬರ್ಮತಿ ಆಶ್ರಮದ ಸ್ಥಾಪನೆ.

ನವೆಂ. ೭, ಮಹದೇವ ದೇಸಾಯಿ ಕಾರ್ಯದರ್ಶಿಯಾಗಿ ಸೇರ್ಪಡೆ.

೧೯೧೮ : ಮಾರ್ಚ್ ೧೫, ಅಹಮದಾಬಾದ್ ಬಟ್ಟೆ ಗಿರಣಿಯ ಮಾಲಿಕರು ಮತ್ತು ಕಾರ್ಮಿಕರ ನಡುವಣ ವಿವಾದ ಸಂಬಂಧ ಅನಿರ್ದಿಷ್ಟ ಕಾಲದ ಉಪವಾಸ, ವಿವಾದವು ರಾಜಿಯ ನಂತರ ಪರಿಹಾರ, ಮಾರ್ಚ್ ೧೮, ಉಪವಾಸ ಅಂತ್ಯ.

೧೯೧೯ : ಫೆ. ೨೪, ರೌಲೆಟ್ ಕಾಯ್ದೆ ವಿರುದ್ಧ ಸತ್ಯಾಗ್ರಹ ದೀಕ್ಷಾ ಬೋಧನೆ

ಏಪ್ರಿಲ್ ೧೩, ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡ, ಅಹಮದಾಬಾದ್‌ನಲ್ಲಿ ೩ ದಿನಗಳ ಉಪವಾಸ ಘೋಷಣೆ.

೧೯೨೦ : ಆಗಸ್ಟ್ ೧, ಅಸಹಕಾರ ಚಳುವಳಿಯ ಘೋಷಣೆ.

೧೯೨೧ : ಜುಲೈ ೩೧, ವಿದೇಶಿ ವಸ್ತ್ರಗಳ ದಹನದ ನೇತೃತ್ವ

ಸೆಪ್ಟಂ. ೨೨, ಖಾದಿ ಪ್ರಚಾರಕ್ಕಾಗಿ ಮತ್ತು ಸರಳತೆಯ

ಪ್ರತೀಕವಾಗಿ ತುಂಡು ಪಂಚೆ ಉಡುವ ನಿರ್ಧಾರ.

ನವೆಂ. ೧೯, ವೇಲ್ಸ್‌ನ ರಾಜಕುಮಾರನ ಭಾರತದ ಭೇಟಿ ಸಂದರ್ಭದಲ್ಲಿ ಭುಗಿಲೆದ್ದ ಕೋಮು ಗಲಭೆ ಸಂಬಂಧ ಮುಂಬೈನಲ್ಲಿ ಐದು ದಿನಗಳ ಉಪವಾಸ.

ಡಿಸೆ. ೨೪, ಸಾಮೂಹಿಕ ನಾಗರಿಕ ಅಸಹಕಾರ ಚಳುವಳಿ ಘೋಷಣೆ, ಗಾಂಧಿಗೆ ಕಾಂಗ್ರೆಸ್ ಪರವಾದ ಸರ್ವಾಧಿಕಾರ

೧೯೨೨ : ಜನ. ೨೯, ಬಾರ್ಡೋಲಿ ಸತ್ಯಾಗ್ರಹದ ಆರಂಭ.

ಫೆಬ್ರುವರಿ ೪, ಚೌರಿ ಚೌರ ಹಿಂಸಾಚಾರ.

ಮಾ. ೧೦, 'ಯಂಗ್ ಇಂಡಿಯಾ' ದಲ್ಲಿನ ಲೇಖನವೊಂದಕ್ಕಾಗಿ ದೇಶದ್ರೋಹದ ಆಪಾದನೆ, ದಸ್ತಗಿರಿ, ತಪ್ಪೊಪ್ಪಿಗೆ, ೬ ವರ್ಷ ಸೆರೆಮನೆವಾಸ ಶಿಕ್ಷೆ.

ಮಾ ೨೧, ಯರವಾಡ ಸೆರೆಮನೆಗೆ.

೧೯೨೪ : ಜನ. ೧೨, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಫೆಬ್ರ. ೫, ಬೇಷರತ್ ಬಿಡುಗಡೆ.

ಸೆಪ್ಟಂ. ೧೭, ಕೋಮು ಸೌಹಾರ್ದಕ್ಕಾಗಿ ದೆಹಲಿಯಲ್ಲಿ ೨೧ ದಿನಗಳ ಉಪವಾಸ.

೧೯೨೫ : ಕಾನಪುರ ಕಾಂಗ್ರೆಸ್ ಅಧಿವೇಶನದಲ್ಲಿ ಒಂದು ವರ್ಷದ ರಾಜಕೀಯ ಮೌನ ಮತ್ತು ಸಂಚಾರ ರದ್ದು ತೀರ್ಮಾನ.

ನವೆ. ೭, ಮೆಡಿಲೇನ್ ಸ್ಲೇಡ್ ಸತ್ಯಾಗ್ರಹ ಆಶ್ರಮಕ್ಕೆ ಸೇರ್ಪಡೆ ಮತ್ತು ಅವರಿಗೆ ಮೀರಾಬೆನ್ ಎಂಬ ನಾಮಕರಣ.

ಡಿಸೆಂ. ೩, 'ಯಂಗ್ ಇಂಡಿಯಾ'ದಲ್ಲಿ 'ನನ್ನ ಸತ್ಯಾನ್ವೇಷಣೆ': ಆತ್ಮ ಚರಿತ್ರೆಯ ಧಾರಾವಾಹಿ ಬರವಣಿಗೆ ಆರಂಭ.

೧೯೨೮ : ಫೆಬ್ರ. ೩, ಸೈಮನ್ ಆಯೋಗದ ಬಹಿಷ್ಕಾರ ಘೋಷಣೆ.

ಡಿಸೆಂ., ಕಲ್ಕತ್ತಾ ಕಾಂಗ್ರೆಸ್ ಅಧಿವೇಶನದಲ್ಲಿ ಇನ್ನೊಂದು ವರ್ಷದೊಳಗಾಗಿ ಸಂಪೂರ್ಣ ಸ್ವಾತಂತ್ರ್ಯ ಘೋಷಿಸಿಸದ್ದರೆ ಮತ್ತೆ ಅಖಿಲ ಭಾರತ ಸತ್ಯಾಗ್ರಹದ ಆರಂಭದ ಎಚ್ಚರಿಕೆ.

೧೯೨೯ : ಡಿಸೆಂ. ೨೭, ಲಾಹೋರ್ ಕಾಂಗ್ರೆಸ್ ಅಧಿವೇಶನದಲ್ಲಿ ಪೂರ್ಣ ಸ್ವರಾಜ್ಯಕ್ಕಾಗಿ ಆಗ್ರಹ, ಶಾಸನ ಸಭೆಗಳ: ಬಹಿಷ್ಕಾರ ನಿರ್ಣಯ.

೧೯೩೦ : ಮಾರ್ಚ್ ೧೨, ದಂಡಿ ಉಪ್ಪಿನ ಸತ್ಯಾಗ್ರಹ ಯಾತ್ರೆ ಆರಂಭ
ಏಪ್ರಿಲ್ ೬, ದಂಡಿ ಸಮುದ್ರ ತೀರದಲ್ಲಿ ಉಪ್ಪಿನ ಕಾಯಿದೆ ಭಂಗ
ಮೇ ೫, ಬಂಧನ, ಯರವಾಡಾ ಸೆರೆಮನೆಗೆ ವರ್ಗಾವಣೆ.

೧೯೩೧ : ಜನವರಿ ೨೬, ಸೆರೆಮನೆಯಿಂದ ಬಿಡುಗಡೆ.
ಮಾರ್ಚ್ ೫, ಗಾಂಧಿ-ಇರ್ವಿನ್ ಒಪ್ಪಂದಕ್ಕೆ ಸಹಿ, ನಾಗರಿಕ ಅಸಹಕಾರ ಸತ್ಯಾಗ್ರಹದ ಹಿಂತೆಗೆತ.
ಸೆಪ್ಟಂ. ೭, ೨ನೇ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಲಂಡನ್‌ನಲ್ಲಿ. ಚಾರ್ಲಿ ಚಾಪ್ಲಿನ್ ಸೇರಿ ಹಲವು ಖ್ಯಾತರ ಭೇಟಿ.
ನವೆಂ. ೫, ಬ್ರಿಟಿಷ್ ಚಕ್ರವರ್ತಿಯ ಆಹ್ವಾನದ ಮೇರೆಗೆ ಬಕಿಂಗ್‌ಹ್ಯಾಂ ಅರಮನೆಯಲ್ಲಿ ನಡೆದ ಗೌರವ ಔತಣ ಕೂಟಕ್ಕೆ ತುಂಡುಡುಗೆಯಲ್ಲೇ ಹಾಜರು.
ಡಿಸೆಂ ೬, ಸ್ವಿಟ್ಜರ್‌ಲೆಂಡ್‌ನಲ್ಲಿ ರೋಮನ್ ರೋಲ್ಯಾಂಡ್ ಜೊತೆ ಮಾತುಕತೆ.
ಡಿಸೆಂ. ೧೪ ರೋಂನಲ್ಲಿ ಮುಸೋಲೋನಿಯ ಭೇಟಿಯ ನಂತರ ಭಾರತಕ್ಕೆ ವಾಪಸ್ ಪ್ರಯಾಣ.

೧೯೩೨ : ಜನವರಿ ೧, ನಾಗರಿಕ ಅಸಹಕಾರ ಸತ್ಯಾಗ್ರಹ ಆರಂಭ.
ಜನವರಿ ೪, ಬಂಧನ, ವಿಚಾರಣೆಯಿಲ್ಲದೆ ಯರವಾಡಾ ಸೆರೆಮನೆಗೆ ವರ್ಗಾವಣೆ.
ಆಗಸ್ಟ್ ೧೮, ಹರಿಜನರಿಗೆ ಪ್ರತ್ಯೇಕ ಮತಗಟ್ಟೆ ವ್ಯವಸ್ಥೆಯ ವಿರುದ್ಧ ಬ್ರಿಟಿಷ್ ಪ್ರಧಾನಿಗೆ ಪತ್ರ.
ಸೆಪ್ಟಂ. ೨೦, ಅಮರಣಾಂತ ಉಪವಾಸ ಆರಂಭ.
ಸೆಪ್ಟಂ. ೨೬ ಪೂನಾ ಒಪ್ಪಂದವನ್ನು ಸರ್ಕಾರ ಒಪ್ಪಿದ್ದರಿಂದಾಗಿ ಐತಿಹಾಸಿಕ ಉಪವಾಸ ಅಂತ್ಯ.

೧೯೩೩ : ಮೇ ೮, ಸ್ವಯಂಶುದ್ಧೀಕರಣ ಉಪವಾಸದ ಆರಂಭ ಮತ್ತು ಸೆರೆಮನೆಯಿಂದ ಬಿಡುಗಡೆ.
ನವೆಂ ೭, ರಾಷ್ಟ್ರವ್ಯಾಪಿಯಾದ ಹರಿಜನ ಯಾತ್ರೆ ಆರಂಭ.

೧೯೩೪ : ಜೂ. ೨೫ ಪುಣೆಯಲ್ಲಿ ಗಾಂಧಿಯತ್ತ ಬಾಂಬೆ ಎಸೆತ.
ಸೆಪ್ಟಂ. ೧೭, ಮುಕ್ತವಾಗಿ ಕೆಲಸ ಮಾಡಲು ಕಾಂಗ್ರೆಸ್‌ನಿಂದ

ನಿವೃತ್ತಿಯ ಬಯಕೆಯ ಘೋಷಣೆ.

ಅಕ್ಟೋ. ೩೦, ಕಾಂಗ್ರೆಸ್‌ಗೆ ರಾಜೀನಾಮೆ.

೧೯೩೬ : ನವೆಂ. ೧೨,ತಿರವಾಂಕೂರು ದೇವಸ್ಥಾನಕ್ಕೆ ಅಸ್ಪೃಶ್ಯರಿಗೆ ಪ್ರವೇಶ.

೧೯೩೯ : ಜುಲೈ ೨೩, ಹಿಟ್ಲರ್‌ನಿಗೆ ಮೊದಲ ಪತ್ರ (೨ನೇ ಪತ್ರ ಡಿಸೆಂ. ೨೪, ಡಿಸೆಂ. ೧೯೪೧, ಎರಡೂ ಪತ್ರಗಳು ಅವನನ್ನು ತಲುಪಲಿಲ್ಲ!)

೧೯೪೨ : ಬ್ರಿಟಿಷ್ ಪ್ರತಿನಿಧಿ ಸ್ಟಾಫರ್ಡ್ ಕ್ರಿಪ್ಸ್ ಭೇಟಿ ಮತ್ತು ಮಾತುಕತೆ ವಿಫಲ.

ಜನ. ೧೫, ಜವಾಹರಲಾಲ್ ನೆಹ್ರೂ ತಮ್ಮ ರಾಜಕೀಯ ಉತ್ತರಾಧಿಕಾರಿಯೆಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಹೇಳಿಕೆ.

ಆಗಸ್ಟ ೮, 'ಭಾರತಬಿಟ್ಟು ತೊಲಗಿ' ನಿರ್ಣಯದ ಅನುಮೋದನೆ, 'ಮಾಡು ಇಲ್ಲವೇ ಮಡಿ' ಘೋಷಣೆಯೊಂದಿಗೆ ದೇಶಾದ್ಯಂತ ಸತ್ಯಾಗ್ರಹ ಅರಂಭ.

ಆಗಸ್ಟ ೯, ಕಸ್ತೂರಬಾರೊಂದಿಗೆ ಮುಂಬೈನಲ್ಲಿ ದಸ್ತಗಿರಿ, ಆಗಾಖಾನ್ ಅರಮನೆಯ ಸೆರೆಮನೆಗೆ ವರ್ಗಾವಣೆ.

ಆಗಸ್ಟ್ ೧೫, ಮಹದೇವ ದೇಸಾಯಿ ನಿಧನ.

೧೯೪೩ : ಫೆಬ್ರುವರಿ ೧೦, ವೈಸ್‌ರಾಯ್ ಮತ್ತು ಭಾರತದ ನಾಯಕರ ನಡುವೆ ಮಾತುಕತೆಯಲ್ಲಿನ ಬಿಕ್ಕಟ್ಟಿನ ಪರಿಹಾರಕ್ಕಾಗಿ ೨೧ ದಿನಗಳ ಉಪವಾಸ.

೧೯೪೪ : ಫೆಬ್ರ. ೨೨, ಕಸ್ತೂರಬಾ ನಿಧನ ಆಗಾಖಾನ್ ಅರಮನೆಯ ಆವರಣದಲ್ಲಿ ಸಂಸ್ಕಾರ.

ಮೇ ೬, ಅನಾರೋಗ್ಯದ ನಿಮಿತ್ತ ಸೆರೆಮನೆಯಿಂದ ಬಿಡುಗಡೆ.

೧೯೪೫ : ಜೂನ್, ಲಾರ್ಡ್ ವೇವಲ್ ಮಾತುಕತೆಗೆ ಆಹ್ವಾನ.

ಜೂನ್ ೧೫, ಕಾಂಗ್ರೆಸ್ ಮೇಲಿನ ನಿಷೇಧ ರದ್ದು.

೧೯೪೬ : ಜೂನ್ ೨೫, ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಿಂದ ಸಂವಿಧಾನ ರಚನಾ ಸಭೆಯ ರಚನೆಗೆ ಒಪ್ಪಿಗೆ.

ಜುಲೈ ೪, ವೈಸ್‌ರಾಯ್ ಲಾರ್ಡ್ ವೇಬೆಲ್‌ರಿಂದ ಮಧ್ಯಂತರ ಸರ್ಕಾರ ರಚನೆ.

ಆಗಸ್ಟ್ ೧೬, ಕಲ್ಕತ್ತಾದಲ್ಲಿ ಕೋಮು ದಂಗೆ.

ಅಕ್ಟೋ. ೧೦, ಬಂಗಾಳದ ನೌಖಾಲಿಯಲ್ಲಿ ಭೀಕರ ಕೋಮು ಗಲಭೆ.

ನವೆಂ. ೫, ಬರಿಗಾಲಿನಲ್ಲಿ ನೌಖಾಲಿ ಯಾತ್ರೆಯ ಆರಂಭ.

೧೯೪೭ : ಜೂನ್ ೨, ರಾಷ್ಟ್ರವಿಭಜನೆಯನ್ನು ಒಪ್ಪುವ ಕಾಂಗ್ರೆಸ್‌ನ ನಿರ್ಧಾರಕ್ಕೆ ಗಾಂಧಿ ವಿರೋಧ.

ಸೆಪ್ಟಂ. ೧, ಕಲ್ಕತ್ತಾದಲ್ಲಿ ಕೋಮುದಂಗೆಯ ವಿರುದ್ಧ ಉಪವಾಸ ಸತ್ಯಾಗ್ರಹದ ಆರಂಭ, ಸೆಪ್ಟಂ. ೪, ಉಪವಾಸ ಅಂತ್ಯ.

ಸೆಪ್ಟಂ. ೯, ಗಲಭೆ ಮತ್ತು ಹತ್ಯೆಗಳನ್ನು ನಿಲ್ಲಿಸಲು ದೆಹಲಿಯ ನಿರಾಶ್ರಿತರ ಶಿಬಿರಗಳಿಗೆ ಭೇಟಿ.

೧೯೪೮ : ಜನ. ೧೨, ಕೋಮು ಸಾಮರಸ್ಯಕ್ಕಾಗಿ ದೆಹಲಿಯಲ್ಲಿ ೫ ದಿನಗಳ ಉಪವಾಸ.

ಜನ. ೨೦ ಪ್ರಾರ್ಥನಾ ಸಭೆಯ ಮಧ್ಯೆ ಗಾಂಧಿಯತ್ತ ಬಾಂಬ್ ಎಸೆತ.

ಜನವರಿ ೩೦, ಬಿರ್ಲಾಭವನದ ಆವರಣದಲ್ಲಿ ನಾಥೂರಾಂ ಗೋಡ್ಸೆಯಿಂದ ಹತ್ಯೆ (೭೮ನೇ ವಯಸ್ಸಿನಲ್ಲಿ ಕೊನೆಯುಸಿರು).

ಜನವರಿ ೩೧, ಯಮುನಾ ತೀರದಲ್ಲಿ ಮೂರನೇ ಮಗ ರಾಮದಾಸರಿಂದ ಅಂತ್ಯ ಸಂಸ್ಕಾರ.

❖❖❖❖❖❖❖

ಗಾಂಧಿ ಪಂಥ ಎಂಬುದೊಂದಿಲ್ಲ. ನನ್ನ ತರುವಾಯ ಯಾವ ಪಂಥವನ್ನೂ ಉಳಿಸಿಹೋಗುವ ಇಚ್ಛೆ ನನಗಿಲ್ಲ. ನಾನು ಯಾವುದಾದರೂ ನೂತನ ತತ್ವದ ಅಥವಾ ಸಿದ್ಧಾಂತದ ಮೂಲಪುರುಷ ಎಂಬ ಭಾವನೆ ನನಗಿಲ್ಲ. ನಿತ್ಯ ಸತ್ಯಗಳನ್ನು ನಮ್ಮ ದೈನಂದಿನ ಜೀವನ ಹಾಗೂ ಸಮಸ್ಯೆಗಳಿಗೆ ಅಳವಡಿಸಲು ನನ್ನ ರೀತಿಯಲ್ಲಿ ನಾನು ಸಾಧಾರಣನಂತೆ ಪ್ರಯತ್ನಿಸಿದ್ದೇನೆ, ಅಷ್ಟೆ. ಸತ್ಯ ಅಹಿಂಸೆ- ಈ ಭಾವಗಳು ಪರ್ವತಗಳಷ್ಟೇ ಪುರಾತನವಾದವು. ನನ್ನ ಶಕ್ತಿಗೆ ಸಾಧ್ಯವಾದಷ್ಟೂ ದೊಡ್ಡ ಪ್ರಮಾಣದಲ್ಲಿ ಅವೆರಡರಲ್ಲೂ ಪ್ರಯೋಗಗಳನ್ನು ನಡೆಸಿರುವುದಷ್ಟೇ ನನ್ನ ಕೆಲಸ. ಹಾಗೆ ಮಾಡುವಾಗ ಕೆಲವು ಸಲ ತಪ್ಪು ಮಾಡಿದ್ದೇನೆ. ಆ ತಪ್ಪುಗಳಿಂದ ಪಾಠ ಕಲಿತಿದ್ದೇನೆ. ಹೀಗೆ ಜೀವನ ಮತ್ತು ಅದರ ಸಮಸ್ಯೆಗಳು ಸತ್ಯ ಅಹಿಂಸೆಗಳ ಅನುಷ್ಠಾನಗಳಲ್ಲಿ ನಡೆಸಿರುವ ಅನೇಕ ಪ್ರಯೋಗಗಳಾಗಿವೆ.

– ಮಹಾತ್ಮ ಗಾಂಧಿ



ಮೆ॥ ಎಂ. ಮೂನಿಸ್ವಾಮಿ ಅಂಡ್ ಸನ್ಸ್
ಪ್ರಕಾಶಕರು ಮತ್ತು ವಿತರಕರು
'ಸರ್ವೋದಯ', ನಂ. ೭೨, ಪ್ರೊ॥ ಎ.ಆರ್. ಕೃಷ್ಣಶಾಸ್ತ್ರಿ ರಸ್ತೆ,
ಬಸವನಗುಡಿ, ಬೆಂಗಳೂರು-೫೬೦ ೦೦೪. www.hulkul.org.in